
# ಅಪರಂಜಿ

ತಿಳಿನಗೆಯ ಕಾರಂಜಿ ಫೆಬ್ರವರಿ–2025




ಮುಗಿಯದ ಕೆಟ್ಟ ಕನಸು

©Ashok Hemmige

ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

**ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ**

**ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi**

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.

## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.

---

**Ph : 080-29731414 Mobile : 9035007003**

**Email: bss1constructions@gmail.com**




ಜಯನಗರದಲ್ಲಿದ್ದ ಎಚ್.ಎನ್ ಕಲಾಕ್ಷೇತ್ರ ಇನ್ನಿಲ್ಲ.
ಹಾಸ್ಯೋತ್ಸವಗಳ ಆಶ್ರಯದಾಣವಾಗಿದ್ದ ಈ ಕಟ್ಟಡ
ಹೊಸರೂಪವನ್ನು ಪಡೆಯಲಿದೆ.
" ಸ್ಥಳಪುರಾಣ" ಬರಹವನ್ನು ಗಮನಿಸಿ

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

Certificate No.: MC-2068




Established in 1978 we are a multi-speciality, tertiary care hospital.

CARING
AND
HEALING

| 126 | 60+ | 25+ |
| --- | --- | --- |
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ




**ಸಂಪುಟ 42**
**ಸಂಚಿಕೆ – 05**
**ಫೆಬ್ರವರಿ– 2025**



**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್


ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ನೀವು ಓದಿದ್ದೆ ಬಹುಮಾನ | ಎಲ್. ಜೀ. ಜ್ಯೋತೀಶ್ವರ | 5 |
| ಕಮಲಮ್ಮ, ಸುಂದರಮ್ಮ ಹರಿಕಥೆ ಕೇಳಿದ್ದು | ಪದ್ಮಾಮೂರ್ತಿ | 6 |
| ಗಿಲ್ಟ್ ಕಾಡಿತೇ...... | ಎಚ್. ಗೋಪಾಲಕೃಷ್ಣ | 10 |
| ಸಾಹಿತ್ಯ ಪ್ರೇಮಿ | ನಿರ್ಮಲಾ ಮೃತ್ಯುಂಜಯ್ | 15 |
| ರಾಜಕುಮಾರಿ ಮತ್ತು ತಗಡಿನ ಡಬ್ಬಿ | ರಾಂಕಿ | 20 |
| ತುಂತುರು | ದಂನಆ | 22 |
| ನನ್ನ ಪ್ರಕಾರ ಆದರ್ಶ ದಂಪತಿಗಳು... | ಸುಮನಾ | 23 |
| ರಂಗೋಲಿ ಮದುವೆ | ಬೇಲೂರು ರಾಮಮೂರ್ತಿ | 29 |
| ಫೆಬ್ರವರಿಯೆಂಬ ಸ್ಪೆಷಲ್ ಮಾಸ | ರಾಮನಾಥ್ | 34 |
| ಸ್ಥಳ ಪುರಾಣ | ಕೃಷ್ಣ ಸುಬ್ಬರಾವ್ | 37 |
| ಪುಳಿಯೋಗರೆ ಪುರಾಣ.. | ವಿ.ವಿಜಯೇಂದ್ರ ರಾವ್ | 39 |


**ವ್ಯಂಗ್ಯ ಚಿತ್ರಗಳು : ಹೊರಪುಟ : ಅಶೋಕ್ ಹೆಮ್ಮಿಗೆ**
**ಒಳಪುಟಗಳು : ರಾಂಕಿ ಬೆಳ್ಳೂರ್**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ***



## ಅಪರಂಜಿ ಕಿಡಿ

● ಪ್ರಕಾಶ್

ಅಸಾಧಾರಣ ವ್ಯಕ್ತಿತ್ವವನ್ನು ಸಣ್ಣ ವಯಸ್ಸಿನಲ್ಲೇ ತೋರುತ್ತಿರುವ ಚದುರಂಗ ವಿಶ್ವ ವಿಜೇತ ಗುಕೇಶ್ ಅವರಿಗೆ ಅಪರಂಜಿಯ ಶುಭಹಾರೈಕೆಗಳು !!

* * *

"ಮಹಾತ್ಮಾ ಗಾಂಧಿ ರಾಷ್ಟ್ರಪಿತ ಅಲ್ಲ"

ಮೀನಾಕ್ಷಿಯವರ ಹೇಳಿಕೆ

"ಹೇ ರಾಮ್" !!

* * *

ನಾವು ಬೀದಿಗೆ ಇಳಿದರೆ, ಬಿ ಜೆ ಪಿ ಯವರು ಮನೆ ಖಾಲಿ ಮಾಡಬೇಕಾಗುತ್ತದೆ

ಪ್ರಿಯಾಂಕ್ ಖರ್ಗೆ

ಬೀದಿ ಜಗಳ ಅಂದರೇ ಇದೇ ಇರಬೇಕು !!

* * *

ಪಡಿತರ ಸಾಗಣೆಯಲ್ಲಿ ಭಾರಿ "ಅಕ್ರಮ"

ದಿನ ಪತ್ರಿಕೆ

ಇದನ್ನ "ಸಕ್ರಮ" ಹೇಗೆ ಮಾಡುತ್ತಾರೋ ನೋಡಬೇಕು !!

* * *

ಶ್ರೀಮತಿ ಐಶ್ವರ್ಯ ಬಳಿ 29 ಕೆ ಜಿ ಬೆಳ್ಳಿ ಪತ್ತೆ

ಸುದ್ದಿ

"ಅನ್ವರ್ಥ ನಾಮ" ಅಂದರೆ ಏನು ಅಂತ ಅರ್ಥವಾಯಿತು !!

* * *

ಸರ್ಕಾರಿ ಬಸ್ ಮೇಲೆ ಕರ್ನಾಟಕ ಸಾರಿಗೆ ಅನ್ನೋದಕ್ಕೆ,

"ಖಾರ ಸಾಲದು"

ಎಂದು ಸೇರಿಸಿದ ಕುಹಕಿಯನ್ನು ಇನ್ನೂ ಹುಡುಕುತ್ತಿದ್ದಾರಂತೆ !!

* * *

ಇನ್ಫೋಸಿಸ್ ಮೈಸೂರಿನಲ್ಲಿ ಕ್ಯಾಂಪಸ್‌ನಲ್ಲಿ ಚಿರತೆ

ದಿನ ಪತ್ರಿಕೆ

ಪಾಪ,, ಅದು ರಾತ್ರಿ ಪಾಳಿ ಮಾಡುತ್ತಿತ್ತೇನೋ

* * *

●

## “ನಮ್ಮ ನಿಮ್ಮಲ್ಲಿ”

**ಶಿವಕುಮಾರ್**


ಮಾಗಡಿಯ ಕೆಂಪೇಗೌಡರು ನಿರ್ಮಿಸಿದ ಈ ಬೆಂಗಳೂರು ನಗರ ಕಳೆದ ಐನೂರು ವರ್ಷಗಳ ಅವಧಿಯಲ್ಲಿ ಬಹು ಮುಖಿ ಐತಿಹ್ಯವನ್ನು ಪಡೆದಿರುವುದು ಯಾರಿಗೆ ತಿಳಿದಿಲ್ಲ ? ವಿಜಯನಗರದ ಆಳ್ವಿಕೆಯಿಂದ ಮೊದಲುಗೊಂಡು, ಬ್ರಿಟಿಷರ ಸ್ವಾಧೀನಕ್ಕೆ ಬಂದು, ಅನಂತರ ಸ್ವತಂತ್ರ ಭಾರತದ ಒಂದು ಪ್ರಮುಖ ನಗರವಾಗುವ ತನಕ ಇಲ್ಲಿ ನಡೆದಿರುವ ವಿದ್ಯಮಾನಗಳನ್ನು ಅನೇಕ ಚರಿತ್ರಕಾರರು ಸ್ವಾರಸ್ಯವಾಗಿ ದಾಖಲಿಸಿದ್ದಾರೆ. ಇಂತಹ ದಾಖಲೆಗಳ ಪರಂಪರೆಗೆ ಹೊಸದಾಗಿ ಸೇರ್ಪಡೆಯಾಗಿರುವ ಪುಸ್ತಕ, ನಮ್ಮ ಬಳಗದವರೇ ಆದ ಶ್ರೀಮತಿ ರೂಪಾ ಪೈ ಅವರು ಬರೆದಿರುವ "ಬಿಕಮಿಂಗ್ ಬ್ಯಾಂಗಲೂರ್."

ಅಪರಂಜಿ ಓದುಗರಿಗೆ ರೂಪಾ ಅವರೇನೂ ಹೊಸಬರಲ್ಲ. ಹಲವು ವರ್ಷಗಳ ಹಿಂದೆ ಅವರು ಬರೆದ "ಗೀತಾ ಫಾರ್ ಛಿಲ್ಡ್ರನ್ " ಪುಸ್ತಕವನ್ನು ನಾನು ಇದೇ ಅಂಕಣದಲ್ಲಿ ಓದುಗರಿಗೆ ಪರಿಚಯಿಸಿದ್ದೆ. ಪುಸ್ತಕ ಎಷ್ಟು ಚೆನ್ನಾಗಿತ್ತೆಂದರೆ ಅದನ್ನು ಕೇವಲ ಎರಡೇ ವಾರಗಳಲ್ಲಿ ನಾನು ಕನ್ನಡೀಕರಿಸಿದ ನಂತರ ಸಪ್ನಾದವರು ಅದನ್ನು ಪ್ರಕಟಿಸಿದ್ದೂ ಆಯಿತು. ಗೀತೆಯ ನಂತರ ರೂಪಾ ಅವರು ಉಪನಿಷತ್ತು ಹಾಗೂ ಯೋಗಸೂತ್ರಗಳನ್ನು ಕುರಿತು ಪುಸ್ತಕಗಳನ್ನು ಬರೆದರು. ಇವುಗಳ ಸರಳ ನಿರೂಪಣೆ ಹಾಗೂ ವಸ್ತುನಿಷ್ಠ ಪ್ರತಿಪಾದನೆಗಳಿಂದಾಗಿ ಇಂತಹ ತತ್ವಶಾಸ್ತ್ರದ ಪುಸ್ತಕಗಳೂ ಬೆಸ್ಟ್‌ಸೆಲ್ಲರ್‌ಗಳಾದವು.

ರೂಪಾರವರ ಆಸಕ್ತಿಯ ಹರಹು ಬಹು ವಿಸ್ತಾರ. ಶಾಸ್ತ್ರಗ್ರಂಥಗಳನ್ನು ಪರಿಚಯಿಸುವ ಪುಸ್ತಕಗಳ ನಂತರ, ಕಬ್ಬನ್ ಪಾರ್ಕಿ ಬಗ್ಗೆ, ಔಷಧಿಗಳ ಉಗಮದ ಚರಿತ್ರೆಯ ಬಗ್ಗೆ, ಮತ್ತು ಇತರ ಸಂಗತಿಗಳ ಬಗ್ಗೆ ಅವರು ಬರೆದಿರುವ ಪುಸ್ತಕಗಳು ಜನಪ್ರಿಯವಾದವು. 2021ರಲ್ಲಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕಾ ಸಂಸ್ಥೆಯವರು, ಬೆಂಗಳೂರಿನ ಬಗ್ಗೆ ಒಂದು ಪಾಕ್ಷಿಕ ಅಂಕಣವನ್ನು ಬರೆಯುವಂತೆ ರೂಪಾರವರಿಗೆ ಸೂಚಿಸಿದರು. ಅಂದು ಪ್ರಾರಂಭವಾದ ಈ ಅಂಕಣ , ಇಂದಿಗೂ ಪ್ರತಿ ಹದಿನೈದು ದಿನಗಳಿಗೊಮ್ಮೆ ಬೆಳಕುಕಾಣುತ್ತಿದೆ. ಮೊದಲ ಎಪ್ಪತ್ತೈದು ಅಂಕಣಗಳ ಸಂಕಲನವೇ ಈಗ ಬೆಳಕು ಕಂಡಿರುವ "ಬಿಕಮಿಂಗ್ ಬ್ಯಾಂಗಲೂರ್"

ಬೆಂಗಳೂರಿನ ಇತಿಹಾಸದ ತುಣುಕುಗಳನ್ನು ದಾಖಲಿಸಿರುವ ಈ ಅಂಕಣಗಳ ವಸ್ತುಗಳು ವೈವಿಧ್ಯಮಯ. ಕೆಂಪೇಗೌಡನ ನಗರ ನಿರ್ಮಾಣ, ಬೆಂಗಳೂರು ಕರಗ, ತಾರಾಮಂಡಲ ಪೇಟೆಯ ರಾಕೆಟ್ ನಿರ್ಮಾಣ ಸ್ಥಾವರಗಳು, ಲಾಲ್‌ಬಾಗಿನ ಚರಿತ್ರೆ, ಗಾಂಧಿನಗರದ ಚಿತ್ರ ನಿರ್ಮಾಣ, ಟಿ..ಪಿ.ಕೈಲಾಸಮ್ ಮತ್ತು ಗಾಂಧಿಜೀ, ಕನ್ನಡ ಕಾದಂಬರಿಕಾರ್ತಿಯರು, ಹೀಗೆ ಬಹು ಸ್ವಾರಸ್ಯ ಹಾಗೂ ವೈವಿಧ್ಯಮಯ ಚುಟುಕು ಇತಿಹಾಸಗಳನ್ನು ಈ ಅಂಕಣಗಳಲ್ಲಿ ಕಾಣಬಹುದು. ಅಂಕಣದಕೊನೆಯಲ್ಲಿ, ಅಚ್ಚಿಸಿರುವ ಓದುಗರ ಪ್ರತಿಕ್ರಿಯೆಗಳು ಆಸಕ್ತಿ ಮೂಡಿಸುವುದರ ಜೊತೆಗೆ ನಮ್ಮ ಮುಂದಿನ ಓದಿಗೆ ಕುಮ್ಮಕ್ಕು ಕೊಡುವಂತಿವೆ. ಇಡೀ ಭರತ ಖಂಡವನ್ನೇ ಸರ್ವೆ ಮಾಡಿ ನಿಖರ ಭೂಪಟಗಳನ್ನು ರಚಿಸಿದ ಸಾಹಸೀ ಇಂಜಿನಿಯರುಗಳ ಬಗ್ಗೆ ಬರೆಗಿರುವ ಅಂಕಣವನ್ನು ಓದಿ ಓದುಗರೊಬ್ಬರು, ಶ್ರೀಯುತ ಗಜಾನನ ಶರ್ಮಅವರು ರಚಿಸಿರುವ "ಪ್ರಮೇಯ, ಮಹಾಮಾಪನದ ಅಪೂರ್ವ ಕಥನ" ಎಂಬ ಪುಸ್ತಕದ ಬಗ್ಗೆ ಪ್ರಸ್ತಾಪಿಸಿದ್ದರು. ಅದನ್ನು ಓದಿದಾಕ್ಷಣ ಕುತೂಹಲ ಮೂಡಿ ಆ ಪುಸ್ತಕವನ್ನು ತರಿಸಿದೆ. ವೈಜ್ಞಾನಿಕ ವಿಷಯದ ಮೇಲೆ ಸೃಜನಾತ್ಮಕವಾಗಿ

ಬರೆದಿರುವ ಉತ್ತಮ ಪುಸ್ತಕಗಳ ಸಾಲಿಗೆ ಇದು ಸೇರಬಲ್ಲದು. "ಬಿಕಮಿಂಗ್ ಬ್ಯಾಂಗಲೂರ್" ಪುಸ್ತಕದಲ್ಲಿನ ಎಲ್ಲಾ ಅಂಕಣಗಳ ಬಗ್ಗೆ ಇಲ್ಲಿ ಹೇಳುವ ಅಗತ್ಯವಿಲ್ಲ. ಇವೆಲ್ಲಾ ಆರಾಮವಾಗಿ ಕುಳಿತು, ಓದಿ, ಸವಿಯುವಂತಹ ಬರಹಗಳು. ಪುಸ್ತಕದ ಹೊರಹೊದಿಕೆಯಂತೂ ಒಂದು ಕಲಾಕೃತಿಯೆಂದೇ ಹೇಳಬಹುದು. ಹೊರಹೊದಿಕೆಯ ಒಳಪುಟದಲ್ಲಿ ಅದನ್ನು ಅಚ್ಚಿಸಿದ್ದೇವೆ. ಬೆಂಗಳೂರಿನ ವಾಣೀವಿಲಾಸ ಆಸ್ಪತ್ರೆಯ ಬಗ್ಗೆ ಬರೆದಿರುವ ಒಂದು ಅಂಕಣದ ಬಗ್ಗೆ ಪ್ರಸ್ತಾಪ ಮಾಡಿ ಈ ಪರಿಚಯವನ್ನು ಮುಗಿಸುವೆ. ಈ ಅಂಕಣದಲ್ಲಿ ರೂಪಾರವರು ಮಹಾರಾಣಿ ವಾಣೀವಿಲಾಸ ಸನ್ನಿಧಾನ, ಅವರ ದೃಢ ನಿರ್ಧಾರ, ಕಾರ್ಯಕ್ಷಮತೆ ಹಾಗೂ ದಕ್ಷತೆಯ ಕುರಿತು ಬರೆದಿದ್ದಾರೆ. ಇದನ್ನು ಓದಿದಾಗ ನನಗೆ ನಮ್ಮ ತಂದೆ ರಾಶಿಯವರು ಹಿಂದೊಮ್ಮೆ ಹೇಳಿದ್ದ ಘಟನೆಯೊಂದು ನೆನಪಿಗೆ ಬಂದಿತು. ಬೆಂಗಳೂರಿನ ಇತಿಹಾಸದಲ್ಲಿ ಅಗತ್ಯವಾಗಿ ದಾಖಲಿಸಬಹುದಾದ ಸಂಗತಿ ಇದು. ರಾಶಿಯವರ ಮಾತಿನಲ್ಲೇ ಇದನ್ನು ಕೇಳಿ.




"ಇಪ್ಪತ್ತರ ದಶಕದ ಮಾತು. ಆಗ ನಾನು ವೈದ್ಯಕೀಯ ವಿದ್ಯಾರ್ಥಿ. ಒಂದು ಬೆಳಗ್ಗೆ ನಮ್ಮ ಕಾಲೇಜಿನಲ್ಲಿ ಗೈನೆಕಾಲಜಿ ಪ್ರೊಫೆಸರ್ ಆಗಿದ್ದ ಡಾ. ಮಿನೆಸ್ ಆಲ್ಬುಕರ್ಕ್ ನನ್ನನ್ನು ಅವರ ಆಫೀಸಿಗೆ ಬರಮಾಡಿಕೊಂಡರು." ಶಿವರಾಮ್, ನಮ್ಮ ಕಾಲೇಜಿಗೆ ಸೇರಿದಂತೆ ಒಂದು ಹೆಂಗಸರು ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣವಾಗಬೇಕು ಅಂತ ದಿವಾನರು ಹೇಳಿದ್ದಾರೆ. ಅದರ ನಿರ್ಮಾಣಕ್ಕೆ ಧನ ಸಂಗ್ರಹ ಮಾಡುವ ಜವಾಬ್ದಾರಿ ನನ್ನದು. ಕೈಲಾಸಮ್ ಅವರು ನಿನಗೆ ಪರಿಚಯ ಅಂತ ತಿಳಿಯಿತು. ಅವರಿಗೆ ಹೇಳಿ ಒಂದು ಬೆನಿಫಿಟ್ ಷೋ ನಾಟಕ ಏರ್ಪಡಿಸಿದರೆ ತಕ್ಕಮಟ್ಟಿಗೆ ಹಣ ಸಂಗ್ರಹಣೆ ಆದೀತು. ನೀನು ಅವರೊಂದಿಗೆ ಮಾತನಾಡಿ ಈ ಕೆಲಸವನ್ನ ನಿರ್ವಹಿಸಬೇಕು. ಎಷ್ಟು ಖರ್ಚಾದರೂ ಪರವಾಗಿಲ್ಲ. ಕಾರ್ಯಕ್ರಮ ಯಶಸ್ವಿ ಆಗಬೇಕು ಅಷ್ಟೇ. ಪ್ರಾರಂಭಕ್ಕೆ ಈ ಐನೂರು ರೂಪಾಯಿಗಳು ನಿನ್ನ ಬಳಿ ಇರಲಿ" ಅಂತ ಹೇಳಿ ಕಳಿಸಿದರು.

ನಾನು ಕೈಲಾಸಮ್ ಅವರನ್ನು ಭೇಟಿ ಮಾಡಿ ವಿಷಯ ತಿಳಿಸಿದೆ. "ಒಳ್ಳೇ ಕೆಲಸ. ಖಂಡಿತವಾಗಿ ಮಾಡೋಣ. ರಂಗಮಂದಿರದ ಬಾಡಿಗೆ, ನಟರಿಗೆ ಕೊಡಬೇಕಾದ ಸಂಭಾವನೆ ಎಲ್ಲ ಸೇರಿ ಸುಮಾರು ಇನ್ನೂರು ರೂಪಾಯಿ ಆಗಬಹುದು" ಅಂತ ಹೇಳಿದರು. ನಾನು ಆಗಲಿ ಸಾರ್ ಅಂತ ಹೇಳಿ ಪ್ರೊಫೆಸರ್ ಕೊಟ್ಟಿದ್ದ ಹಣವನ್ನು ಅವರಿಗೆ ನೀಡಿ, ಕಾರ್ಯಕ್ರಮಕ್ಕೆ ಒಂದು ಸೂಕ್ತ ದಿನಾಂಕ ಹೇಳಿಬಿಡಿ. ಅಂದೆ. ಅಂದಿನಿಂದ ಎರಡು ವಾರ

ನಾನು ಕ್ಲಾಸಿಗೆ ಚಕ್ಕರ್. ಕೈಲಾಸಮ್ ಜೊತೆ ಅಲ್ಲಿ ಇಲ್ಲಿ ಓಡಾಡಿ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದಾಯಿತು. ನಾಟಕ "ಹೋಂರೂಲು" ಪ್ರದರ್ಶನಕ್ಕೆ ನಿಗದಿಸಿದ್ದ ಸಭಾಂಗಣ ಕಿಕ್ಕಿರಿದಿತ್ತು. ನಾಟಕ ಎಲ್ಲ ಮುಗಿದ ಮಾರನೆಯ ದಿನ ಕಾರ್ಯಕ್ರಮದಲ್ಲಿ ಭಾಗವ–ಹಿಸಿದವರಿಗೆಲ್ಲಾ ನಮ್ಮ ಪ್ರೊಫೆಸರ್ ಒಂದು ಚಹಾಕೂಟ ಏರ್ಪಡಿಸಿ ಕೃತಜ್ಞತೆ ಸಲ್ಲಿಸಿದರು. ಸಂಗ್ರಹವಾದ ಹಣ ಎಷ್ಟು ಗೊತ್ತೆ. ಮೂವತ್ತೈದು ಸಾವಿರ ರೂಪಾಯಿಗಳು. ಇದಾದ ಒಂದು ವರ್ಷಕ್ಕೆ ಆಸ್ಪತ್ರೆಯ ಭವ್ಯ ಕಟ್ಟಡ ಎದ್ದು ನಿಂತಿತು" ■

# ನೀವು ಓದಿದ್ದೆ ಬಹುಮಾನ

**ಎಲ್. ಜೀ. ಜ್ಯೋತೀಶ್ವರ**



1980. ನಾನಾಗ ಧಾರವಾಡದಲ್ಲಿ ಇದ್ದೆ. 23 ರ, ಬಿಸಿ ರಕ್ತ ಪುಟಿಯುತ್ತಿದ್ದ ವಯಸ್ಸು. ಮೈ ತುಂಬಾ ಹುಮ್ಮಸ್ಸು. ಡಿ.ಫಾರ್ಮ ಮುಗಿಸಿದ್ದೆ. ಹೆಗ್ಗಣದ ಪಾಷಾಣ, ಅರ್ಥಾತ್, ಔಷಧಿಗಳನ್ನು ಮಾರುವ ಪ್ರತಿನಿಧಿ – ಮೆಡಿಕಲ್ ರೆಪ್ರಜೇಂಟೇಟಿವ್. ಸಪ್ತಾಪುರದ ಮಲಪ್ರಭಾ ಲಾಡ್ಜ್‌ಲ್ಲಿ ನನ್ನ ಬಿಲ. ಆರು ಜಿಲ್ಲೆಗಳ ವ್ಯಾಪ್ತಿ. ಬೆಳಿಗ್ಗೆ ನಿದ್ದೆಯ ಒದ್ದು, ಬೇಗನೆ ಎದ್ದು, ಕಂಠ ಲಂಗೋಟಿ ಬಿಗಿಯಾಗಿ ಕಟ್ಟಿ, ಭಾರವಾದ ಸ್ಯಾಮ್ಪಲ್ ಶೀಶೆಗಳನ್ನು ಅಷ್ಟೇ ಭಾರವಾದ ತಾತನ ಕಾಲದ ಹಡಪದೊಳಕ್ಕೆ ತುರುಕಿ, ಹೊತ್ತುಕೊಂಡು ಹೊರಡುವುದು. ಬರೆಯದ ಡಾಕ್ಟರ್ಗಳಿಗೆ ಬಾಟಲು , ಚೀಟಿ, ಕೆಲವೊಮ್ಮೆ ಚಿಕ್ಕ ಪುಟ್ಟ ಆಮಿಷಗಳು, ಗಿಫ್ಟ್ ಕೊಟ್ಟು, ಔಷಧಿ ಅಂಗಡಿ ಮಾಲೀಕರೊಡನೆ ನಮ್ಮ ಔಷಧಿ ಇಟ್ಟುಕೊಳ್ಳಲು ಗೋಗರೆಯುವುದು. ಸಿಕ್ಕ ಆರ್ಡರಗಳನ್ನು ವರದಿಯೊಡನೆ ಕಂಪೆನಿಗೆ ರವಾನಿಸುವುದು.

ಇದರ ಮಧ್ಯೆ, ಎಲ್ಲ ಕಡೆ ಓಡಾಡಲು ಕೆ ಎಸ್ ಆರ್ ಟಿ ಸಿ ಯ ಕೆಂಪು ಬಸ್. ಆಗ ಉಚಿತ ಇರದಿದ್ದರೂ, ಭಾರಿ ಮಜಾ. ಆಗ ಬಸ್ಗೆ ಹತ್ತುತ್ತಿದ್ದ ಗಂಡು – ಹೆಣ್ಣು ಹಾಡುಗಾರರು ಇಂಪಾಗಿ ಹಾಡುತ್ತಿದ್ದ ಎರಡು ಹಾಡುಗಳು ಈಗ ನೆನಪಾದವು –

1. ಇನ್ನೂ ಯಾಕ ಬರಲಿಲ್ಲವ್ವ ತೌರ್ಮನೀಗ್ ಹೋದಾಕೀ, ತೇರಾದ ತಿಂಗಳಿನೊಳಗ ಬರ್ತೀನಂದಾಕೀ...

2. ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾವಾ, ವಾರದಾಗ ಮೂರು ಸರ್ತಿ ಬಂದು ಹೋಗವಾ...

ಎರಡನ್ನೂ ಹಾಡಿ, ಎಲ್ಲರೂ ಭೇಶಾಗಿ ಸಂಪಾದಿಸುತ್ತಿದ್ದರು. ಕೆಲವು ಹುಡುಗಿಯರಂತೂ ಕಣ್ಣು ಹೊಡೆದು ಕರೆಯುತ್ತಿದ್ದರು. ಸದ್ಯ, ಎದ್ದು ಹೋಗಲು ಸಮಯ ಇರುತ್ತಿರಲಿಲ್ಲ, ಕೆಲಸ ಬಿಡುತ್ತಿರಲಿಲ್ಲ. ವಿಷಯ ಅದಲ್ಲ.

ಇಂದು ಓದಿದ ನಾ. ಕಸ್ತೂರಿ ಅವರ ಮನಿ ಆರ್ಡರ್ ಹಾಡು ಇದನ್ನು ನೆನಪಿಸಿತು. ಹೆಚ್ಚು ಕಮ್ಮಿ ಅದೇ ರಾಗದಲ್ಲಿ ಈ ಹಾಡನ್ನೂ ಹಾಡಬಹುದು. ಸದ್ಯ ಗಂಟಲು ಕೈ ಕೊಟ್ಟಿದೆ. ಸರಿ ಹೋದ ಮೇಲೆ ನನ್ನ ಸಿರಿಕಂಠದಲ್ಲಿ ಅದನ್ನು ಹಾಡಿ ಕಳಿಸುತ್ತೇನೆ. ನೆನಪಿನ ಬುತ್ತಿ ಬಿಚ್ಚಿಕೊಂಡಿದೆ....

ಮತ್ತೊಮ್ಮೆ ಉಳಿದ ಕಥೆ ಹೇಳುತ್ತೇನೆ. ಕೊರೆಸಿಕೊಂಡಿದ್ದಕ್ಕೆ ಧನ್ಯವಾದ. ನೀವು ಓದಿದ್ದೆ ಬಹುಮಾನ. ನಮಸ್ಕಾರ.

■

# ಕಮಲಮ್ಮ, ಸುಂದರಮ್ಮ ಹರಿಕಥೆ ಕೇಳಿದ್ದು

ಪದ್ಮಾಮೂರ್ತಿ

ರೀ.. ಕಮಲಮ್ಮ.! ಅಚ್ಚುತ ದಾಸರ ಹರಿಕಥೆ ಇದೆಯಂತೆ, ಗಣಪತಿ ಪೆಂಡಾಲಿನಲ್ಲಿ ಹೋಗೋಣ ಬರುತ್ತೀರಾ.. ಎಂದು ಜೋರಾಗಿ ಸ್ನೇಹಿತರಾದಂತಹ ಸುನಂದಮ್ಮ ಹೊರಗೆ ನಿಂತೇ ಕೂಗಿಕೊಂಡರು..

ಒಳಗೆ ಏನೋ ಕೆಲಸದಲ್ಲಿದ್ದ ಕಮಲಮ್ಮ! ಓ.. ಸುನಂದಮ್ಮನವರಾ.. ಬಂದೆ ಬಂದೆ ಎಂದು ಸೆರಿಗಿನಿಂದ ಕೈ ಒರೆಸಿಕೊಳ್ಳುತ್ತಾ.. ಏಕೆ ಬಾಗಿಲಲ್ಲೇ ನಿಂತು ಬಿಟ್ಟಿರಿ? ಬನ್ನಿ.. ಒಳಗೆ ಎಂದಾಗ ಸುಂದರಮ್ಮ ಇಲ್ಲಾ.. ಇಲ್ಲಾ ಒಳಗೆ ಬಂದರೆ, ತಡವಾಗಿ ಹೋಗುತ್ತೆ. ಬರುತ್ತೀರಾ? ಹೊರಡೋಣವಾ.. ಆಮೇಲೆ ಜಾಗ ಸಿಗುವುದಿಲ್ಲ ಎಂದು ಆತುರ ಪಡಿಸಿದರು.

ಕಮಲಮ್ಮ ಎರಡೇ ನಿಮಿಷ ಬಂದುಬಿಡುತ್ತೇನೆ ಎಂದು ಒಳಗೆ ಹೋಗಿ, ಕೈಯಲ್ಲಿ ಒಂದುವ್ಯಾನಿಟಿ ಬ್ಯಾಗು ಭುಜಕ್ಕೆ ತಗಲು ಹಾಕಿಕೊಂಡು, ಸೊಸೆಯನ್ನು ಕೂಗುತ್ತಾ.. ಲೇ..! ಕವಿ.. ಕವಿತಾ! ಅಚ್ಚುತದಾಸರ ಹರಿಕಥೆಗೆ ಹೋಗುತ್ತಿದ್ದೇನೆ ಬರುವುದು ತಡವಾಗಬಹುದು. ತಲೆ ಹೊಡೆದು ಅಚ್ಚೇರು ಅಕ್ಕಿ ಅನ್ನ ಮಾಡಿಬಿಡು. ಜಾಸ್ತಿ ಹಾಕಬೇಡ. ತಂಗಳನ್ನಾನ ಯಾರು ತಿಂತಾರೆ. ಹಾಗೆಯೇ ಒಂದು ಪಲ್ಯಮಾಡು. ನಿಮ್ಮ ಮಾವ ನನ್ನ ಕಾಯ್ತಾ ಕೂತಿರುತ್ತಾರೆ. ಏಳ್ಸಿ ಒಂಬತ್ತು ವರೆಗೆಊಟ ಹಾಕಿಬಿಡು.. ನೀವು ಊಟ ಮುಗಿಸಿಕೊಳ್ಳಿ. ನಾನು ಬರುವವರೆಗೆ ಕಾಯುವುದು ಬೇಡ ಬರಲೇ? ಎಂದು ಬಡ ಬಡ ಎಂದುಗಟ್ಟಿಯಾಗಿ ಕೂಗಿ ಹೇಳಿದಾಗ, ಹೂಂ.. ಆಯ್ತು! ಆಯ್ತು! ಬರುವಾಗ ಕತ್ತಲಾಗಿರುತ್ತದೆ ನೋಡಿಕೊಂಡು, ಹುಷಾರಾಗಿ ಬನ್ನಿ ಅಷ್ಟೇ! ಎಂದಳು.

ಮೊಮ್ಮಗ ಇದ್ದವನು ಅಜ್ಜಿ ! ಯಾರ ತಲೆ ಒಡೆದು ಅನ್ನ ಮಾಡಬೇಕು ಅಮ್ಮಾ! ಎಂದು ಹಾಸ್ಯ ಮಾಡಿದಾಗ., ಅಯ್ಯೋ ಮುಂಡೇದೆ.. ನೀನು ನನ್ನನ್ನು ತಮಾಷೆ ಮಾಡು ಹಾಗಾದೆಯ?.. ನಾನು ಬರುವ ವರೆಗೂ ಓದುತ್ತಿರು. ನೀನೇ ಬಾಗಿಲು ತೆಗೆಯಬೇಕು ಎನ್ನುತ್ತಾ.. ಬೇಗ ನಡೀರಿ ಸುನಂದಮ್ಮ ಎನ್ನುತ್ತಾ ಹೆಜ್ಜೆ ಹಾಕಿದರು.

ಸುನಂದಮ್ಮ, ರೀ. ನಿಮ್ಮ ಸೊಸೆ ತುಂಬಾ ಒಳ್ಳೆಯ ವಳು ಕಣ್ರೀ! ನೀವು ಹೇಳಿದ್ದಕ್ಕೆಲ್ಲಾ.. ಹಾ..ಹೂ... ಅನ್ನದೇ ವಿಧೇಯತೆಯಿಂದ ನಡೆದುಕೊಳ್ಳುತ್ತಾಳೆ..ಊಹು..! ಎಂದದ್ದನ್ನು ನಾನು ನೋಡೇ ಇಲ್ಲಾ..ಎಂದಾಗ, ಹೌದು ರೀ.. ಒಳ್ಳೆಯವಳೇ ಮನೆ ಕೆಲಸ ಎಲ್ಲ ತೂಗಿಸಿಕೊಂಡು ಹೋಗುತ್ತಾಳೆ. ಅದರಿಂದಲೇ ನನಗೆ ಸ್ವಲ್ಪ ಆರಾಮವಾಗಿರುವುದು. ಇವತ್ತು ದಾಸರದು ಯಾವ ಕಥೆಇದೆ ಎಂದರು. ಅದೇ ರೀ.. ಸೀತಾ ಕಲ್ಯಾಣ. ಅಚ್ಯುತದಾಸರು ಬಹಳ ಸೊಗಸಾಗಿ ಕಥೆ ಮಾಡುತ್ತಾರೆ. ನಮ್ಮೆಲ್ಲ ಸ್ಟೇ ಅಲ್ಲಾ, ಕಥೆ ಮಾಡಲಿಕ್ಕೆ, ಅಮೆರಿಕ, ಇಂಗ್ಲೆಂಡ್ ಎಂದು ಎಲ್ಲಾಕಡೆ ಹೋಗುತ್ತಾರೆ ರೀ... ಸೀತಾ ಕಲ್ಯಾಣವನ್ನಂತು ಕಣ್ಣ ಮುಂದೆಯೇ ಮದುವೆ ನಡೆದಂತೆ ಹೇಳುತ್ತಾ ಹೋಗುತ್ತಾರೆ. ಹೌದಾ ! ಅದಕ್ಕೆ ಭಾರತದಲ್ಲಿ ಸೀತೆಯ ಪಾತ್ರನೇ.. ಬಹಳ ಅದ್ಬುತ! ಆಗಿರುವುದು. ಕಣ್ರೇ..

ರೀ.. ಸೀತೆಯ ರೋಲ್ ಬರುವುದು ರಾಮಾಯಣದಲ್ಲಿ! ಮಹಾಭಾರತದಲ್ಲಲ್ಲ ಎಂದಾಗ, ಕಮಲಮ್ಮನಿಗೆ ಅಪಮಾನವಾದಂತಾಯಿತು. ಅಯ್ಯೋ ಬಿಡ್ರಿ! ರಾಮಾಯಣ–ಮಹಾಭಾರತ ಎರಡೂ ಮಹಾಕಾವ್ಯ ವೇ..ಯಾವುದಾದರೇನು? ಎಂದು ದಬಾಯಿಸಿಕೊಂಡರು. ಅಷ್ಟರಲ್ಲೇ ಪೆಂಡಾಲ್ ಸಿಕ್ಕೇಬಿಟ್ಟಿತು ಅಚ್ಯುತದಾಸರ ಹರಿಕಥೆ ಆರಂಭವಾಗಿತ್ತು. ಕಮಲಮ್ಮ ಅಯ್ಯೋ ರಾಮ! ಏನು ಜನ ಸಮುದ್ರ ರೀ.. ನಮಗೆ

ಕೂರಲಿಕ್ಕೆ ಜಾಗ ಸಿಗುತ್ತದೋ ಇಲ್ಲವೋ.. ಬೇಗ ಬರಬೇಕಿತ್ತು ಎಂದುಕೊಂಡೇ ಹತ್ತಿರ ಬಂದರು. ಸುತ್ತಾ ಕಣ್ಣಾಡಿಸುತ್ತಾ ಕೂತುಕೊಳ್ಳಲು ಸ್ಥಳ ಎಲ್ಲಿದೆ? ಎಂದು ನೋಡತೊಡಗಿದರು.



ಸ್ವಲ್ಪದೂರದಲ್ಲೇ.. ಸ್ವಲ್ಪ ಸ್ಥಳ ಕಂಡುಬಂತು. ಜನಗಳ ಮಧ್ಯೆ ದಾಟಿಕೊಂಡು ಅಲ್ಲಿ ಕೂರುವ ಪ್ರಯತ್ನಪಟ್ಟರು. ಕೂತಿದ್ದವರೆಲ್ಲಾ ಇವರಿಬ್ಬರನ್ನು ಗುರಾಯಿಸುತ್ತಿದ್ದರು. ಆರಾಮಾಗಿ ಕೂತಿದ್ದವು ಒದ್ದುಕೊಂಡೆ ಬರುತ್ತಿದ್ದಾರಲ್ಲ ಎನ್ನುವಂತೆ. ಎದುರಿಗೆ ದೇವರು, ಮಾತನಾಡುವ ಹಾಗಿಲ್ಲ. ಈ ಇಬ್ಬರು ಇದ್ಯಾವುದನ್ನೂ ಲೆಕ್ಕಕ್ಕಿಡದೆ, ಅಲ್ಲೇ ದಬಾಯಿಸಿ ಕೂತು ನಿಟ್ಟುಸಿರುಬಿಟ್ಟರು. ಕಥೆ ಸಾಗುತ್ತಲೇ ಇತ್ತು. ಸಾಕ್ಷಾತ್ ಶ್ರೀ ಲಕ್ಷ್ಮಿ ಸ್ವರೂಪಳಾದಂತ ಸೀತಾಮಾತೆ.. ಅವಳ ಜನ್ಮವೇ ಜಗತ್ತಿನ ಉದ್ಧಾರಕ್ಕೆ ಆಗಿದೆ ಸಾಕ್ಷಾತ್ ಜಗಜ್ಜನನಿ  ಮಹಾಲಕ್ಷ್ಮಿ ಅವತಾರವಾದ ಅವಳು

ಕಮಲಮ್ಮ, ಇನ್ನು ಕಥೆ ಕೇಳೋಣ. ದೇವರ ದಯದಿಂದ ಜಾಗವು ಸಿಕ್ಕಿತು. ಆರಾಮವಾಗಿ ಕಥೆ ಕೇಳಬಹುದು ಎಂದು, ಕೊಂಚ ವಿರಮಿಸಿ, ಸುತ್ತಲೂ ಒಂದು ಬಾರಿ ಕಣ್ಣಾಡಿಸಿದರು. ಮುಂದುಗಡೆ  ಕುಳಿತಿದ್ದ ಹಿಂದಿನ ಬೀದಿಯ ಸಾವಿತ್ರಿ ಮತ್ತು ಅವಳ ಮಗಳು ನೀತಾ ಕಂಡರು. ರೀ.. ಸುನಂದಮ್ಮ.. ಅಲ್ಲಿ ನೋಡಿ! ಮುಂದುಗಡೆ ಕೂತಿರುವ ಸಾವಿತ್ರಿಯನ್ನು.. ಏನ್ ಧೈರ್ಯ ನೋಡ್ರಿ! ಅಲ್ಲಿ ಕೂತಿದ್ದಾಳಲ್ಲ ಅವಳ ಮಗಳು ನೀತಾನೋ.. ಗೀತಾನೋ ಅವಳೇ ರೀ..? ಯಾರೋ ಸಾಬೀನ ಕಟ್ಟಿಕೊಂಡು ಓಡಿಹೋಗಿದ್ದವಳು. ವಾಪಸ್ ಬಂದಿದಾಳೆ ಎಂದು ಕಾಣುತ್ತದೆ. ಅಲ್ಲಾ ಎಷ್ಟು ಧೈರ್ಯ! ನೋಡ್ರಿ! ಎಂದಾಗ ಸುನಂದಮ್ಮ ಅತ್ತ ಕಡೆಯೇ ದೃಷ್ಟಿನೆಟ್ಟು, ಕಾಲ ಕೆಟ್ಟುಹೋಯಿತು ಕಮಲಮ್ಮ! ಜಾತಿಯಿಲ್ಲ ಕುಲ ಇಲ್ಲ ಇವರೆಲ್ಲಾ ಮರ್ಯಾದಸ್ಥರು.. ಎನ್ನುತ್ತಿದ್ದಂತೆ,

ದಾಸರು, ಕಾಲ ಕಳೆಯುತ್ತಿದ್ದಂತೆ ಜನಕ ಕುಮಾರಿ ಸೀತಾದೇವಿಯು ಮದುವೆ ವಯಸ್ಸಿಗೆ ಬಂದಿದ್ದಾಳೆ.. ಜನಕಮಹಾರಾಜ ಅವಳಿಗೆ.. ಸೂಕ್ತ ವರನ ಹುಡುಕಾಟದಲ್ಲಿದ್ದಾಗ, ಹರೇ ನಮಃ ! ರಘು ಪತಿಯೇ.. ಎಂದಾಗ ಎಲ್ಲರೂ ಸಾಮೂಹಿಕವಾಗಿ ಹರ ಹರ ಮಹಾದೇವ! ಎಂದು ಸಾಮೂಹಿಕವಾಗಿ ಕೂಗಿಕೊಂಡರು. ಕಮಲಮ್ಮ ಮತ್ತು ಸುನಂದಮ್ಮ ಎಚ್ಚೆತ್ತವರಂತೆ, ನಮಗ್ಯಾಕೆ ಕಂಡವರ ಮಾತು! ದೇವರ ಧ್ಯಾನ ಮಾಡಿ ಪುಣ್ಯ ಕಟ್ಟಿಕೊಳ್ಳೋಣ ಎಂದು. ತಾವು ಧ್ವನಿಗೂಡಿಸಿದರು.

ಬ್ರಹ್ಮಶ್ರೀಗಳಾದಂತಹ ವಿಶ್ವಾಮಿತ್ರರು ಖರದೂಷಣರ ಸಂಹಾರ ಮಾಡಿಸಿದ ನಂತರ ತಮ್ಮ ಶಿಷ್ಯರಾದ ರಾಮಲಕ್ಷಣ ರ ಜೊತೆಯಲ್ಲಿ ಮಿಥಿಲೆಗೆ ಆಗಮಿಸುತ್ತಿದ್ದಾರೆ ಎಂದು ಕಥೆ ಮುಂದುವರಿಸುತ್ತಿದ್ದಂತೆ, ಸುನಂದಮ್ಮ, ನಿಮ್ಮ ಎದುರಿಗೆ ನೋಡಿ! ನಮ್ಮ ಪಕ್ಕದ ಬೀದಿಯ ಪರಿಮಳ! ಅವಳ ಅಳಿಯನನ್ನು ನೋಡಿದ್ದೀರಾ? ಸಿಕ್ಕಾಪಟ್ಟೆ ದುಡ್ಡಿದೆ ಎಂದು ಮಗಳನ್ನು, ಆ ಅಷ್ಟವಕ್ರನಿಗೆ ಕೊಟ್ಟು ಅಳಿಯನನ್ನಾಗಿ ಮಾಡಿಕೊಂಡಿದ್ದಾಳೆ. ನೋಡ್ರಿ ದುಡ್ಡು ಏನೇನು ಮಾಡಿಸುತ್ತದೆ ಎನ್ನುವುದನ್ನು! ಮಕ್ಕಳ ಭವಿಷ್ಯ ಹಾಳಾದರೂ ಚಿಂತೆ ಇಲ್ಲ, ಹಣ ಇದ್ದರೆ ಸಾಕು ಇಂತಹವರಿಗೆ ಕಾಲ ಕೆಟ್ಟುಹೋಯಿತು ರೀ....

ಹೌದಾ! ಎಂದು ಅಚ್ಚರಿಯಿಂದ ಕಮಲಮ್ಮ ಕೇಳಿದಾಗ, ಹೌದು ರೀ.. ಅಷ್ಟು ಚೆಂದುಳ್ಳಿ ಚೆಲುವೆಯನ್ನು ದುಡ್ಡಿಗೋಸ್ಕರ ಒಬ್ಬ ಅಷ್ಟಾವಕ್ರನಿಗೆ ಮದುವೆಯನ್ನು ಮಾಡಿಕೊಟ್ಟಿದ್ದಾರೆ. ಪಾಪ! ಆ ಹುಡುಗಿಯನ್ನು ನೋಡಿದರೆ ಮರುಕವಾಗುತ್ತದೆ. ಹೆತ್ತ ಮಕ್ಕಳ ಭವಿಷ್ಯವನ್ನೇ ದುಡ್ಡಿಗೋಸ್ಕರ ಹಾಳು ಮಾಡುತ್ತಿದ್ದಾರಲ್ಲ ಎಂದು.. ಎಂತ ಪಾಪಿಗಳು!

ಅಷ್ಟರಲ್ಲಿ ದಾಸರು, ಪಾಪಿಗಳಾದಂತಹ ಖರದೂಷಣರೆಂಬ ರಾಕ್ಷಸರನ್ನು ಸಂಹಾರ ಮಾಡಿದ ರಾಮಲಕ್ಷ್ಮಣರು ತಮ್ಮ ಗುರುಗಳ ಅಣತಿಯಂತೆ ಮಿಥಿಲಾ ನಗರದ ಪ್ರವೇಶ ಮಾಡಿದ್ದಾರೆ. ಸುನಂದಮ್ಮ ಬಿಡ್ರಿ.. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎಂಬಂತೆ, ನಮಗ್ಯಾಕೆ ಬೇಕು? ಪುರಾಣ ಪುಣ್ಯ ಕಥೆ ಕೇಳಲು ಬಂದಿದ್ದೇವೆ. ರಾಮಲಕ್ಷ್ಮಣರು ಮಿಥಿಲೆಗೆ ಬಂದರು ಎಂದು ಹೇಳುತ್ತಿದ್ದಾರೆ. ರಾಮನ ಊರು ಅಯೋಧ್ಯಾಯಲ್ಲವೇ? ತಡೀರಿ ಕಥೆಯನ್ನು ಕೇಳಿಕೊಳ್ಳೋಣ.. ದಾಸರ ಕಥೆಕಡೆಗೆ ಗಮನ ಕೊಡುವವರು. ರಾಮ, ಲಕ್ಷ್ಮಣ ಭರತ–ಶತ್ರುಘ್ನರೊಡಗೂಡಿ, ವಿಶ್ವಾಮಿತ್ರರ ಪುರ ಪ್ರವೇಶವಾಯಿತು. ರಘುಪತಿ ರಾಘವ ರಾಜಾರಾಂ..ರಾಮ ರಾಮ ಜಯ ರಾಜಾರಾಮ್ ರಾಮ.. ರಾಮ ಜಯ ಸೀತಾರಾಮ.. ಎಂದು ತಾಳ ಹಾಕುತ್ತಾ.. ಕಥೆ ಮುಂದುವರಿಸಿದರು.

ಜನಕ ಮಹಾರಾಜ ತನ್ನ ಮಗಳಾದ,ಸೀತೆಯನ್ನು ವರಿಸಬೇಕಾದರೆ, ಒಂದು ಪಂದ್ಯವನ್ನು ಇಟ್ಟಿದ್ದಾನೆ. ಯಾವ ಮಹಾವೀರನು ಶಿವಧನಸ್ಸನ್ನು ಎತ್ತಿ ಹೆದೆ ಏರಿಸವನೋ.. ಅಂತಹ ವೀರನಿಗೆ ನನ್ನ ಮಗಳನ್ನು ಕೊಟ್ಟು ವಿವಾಹ ಮಾಡಿಕೊಡುತ್ತೇನೆ ಎಂಬ ಒಂದು ಪಂಥ! ವಂದಿ ಮಾದಿಗರು.. ಜನಕ ಮಹಾರಾಜನ ಆಸ್ಥಾನ ಪ್ರವೇಶದ ಸೂಚನೆಯನ್ನು ನೀಡುತ್ತಾ.. ಬಹುಪರಾಕ್ ಹೇಳುತ್ತಿದ್ದಂತೆ, ರಾಜಶ್ರೀ ಆದ ಜನಕ ಮಹಾರಾಜರು ಬಂದು ಸಿಂಹಾಸನಾರೂಢರಾಗಿದ್ದಾರೆ.

ಅಲ್ಲಿಗೆ ದೇವಾನುದೇವತೆಗಳಲ್ಲದೆ ಲಂಕಾಧೀಶನಾದಂತಹ ರಾವಣನ ಆಗಮನವೂ ಆಗಿದೆ.ಆದರೆ ಅಲ್ಲಿ ಉಪಸ್ಥಿತರಿದ್ದ ಯಾರಿಗೂ ಶಿವಧನಸ್ಸನ್ನು ಹೆದೆ ಏರಿಸುವುದು ಇರಲಿ! ಅದನ್ನು ಮೇಲೆತ್ತುವುದಕ್ಕೆ ಸಾಧ್ಯವಿಲ್ಲವಾಗಿದೆ. ಎಲ್ಲರೂ ಎತ್ತುವ ಪ್ರಯತ್ನ ಮಾಡಿ, ಬೆವರಿಳಿಸಿದ್ದರೆ ವಿನಹ ಬಿಲ್ಲನ್ನು ಹೆದೆಯೇರಿಸುವ ಎದೆಗಾರಿಕೆ ತೋರಿಸಲಿಲ್ಲ. ಹರ ನಮಃ ರಘು ಪತಿಯೇ..! ಹರ ಹರ ಮಹಾದೇವ! ಎಂದು ಜಪಿಸುತ್ತಾ ದಾಸರು ಒಮ್ಮೆ ಮುಖವನ್ನು ಒರೆಸಿ. ತಾಳ ಹಾಕಿಕೊಳ್ಳುತ್ತಾ.. ಮುಂದುವರಿಸಿದರು.

ದಶರಥ ಪುತ್ರ, ತ್ರಿಲೋಕ ಸುಂದರನೂ, ಮರ್ಯಾದಾ ಪುರುಷೋತ್ತಮನೂ ಆದ ಶ್ರೀರಾಮಚಂದ್ರನು ತನ್ನ ಗುರುಗಳ ಅಣತಿಯಂತೆ,ಶಿವಧನಸ್ಸನ್ನು ಹೆದೆಯೇರಿಸಿ ಸೀತೆಯನ್ನು ವರಿಸುವ ಸಲುವಾಗಿ, ಆ ಮಹಾ ಧನಸ್ಸಿನ ಬಳಿ ಆಗಮಿಸುವಂತಹ ನಾಗಿದ್ದಾನೆ. ಅಲ್ಲರೀ.. ಕಮಲಮ್ಮ, ನಿಮ್ಮ ಮಗನಿಗೆ ಎಲ್ಲಾದರೂ ಹುಡುಗಿ ಸಿಕ್ಕಿದಳಾ? ಎಂದಾಗ ಸುನಂದಮ್ಮ ನಿರಾಶರಾಗಿ ಈಗ ಹುಡುಗಿಯರ ಬರ ಬಂದುಬಿಟ್ಟಿದೆ ಕಣ್ರೀ.. ನೋಡಿ ಸೀತೆಯನ್ನು ಮದುವೆಯಾಗಲು ದೇವರೇ ಆದಂತಹ ಆ ಶ್ರೀ ರಾಮನೇ ತುಂಬಿದ ಸಭೆಯಲ್ಲಿ ಆ ಮಣಭಾರದ ಬಿಲ್ಲನ್ನು ಎತ್ತಬೇಕಾಗಿದೆ. ಇನ್ನು ನಾವು ಹೇಳಿಕೇಳಿ ಹುಲುಮನುಷ್ಯರು. ಸರಿಯಾದ್ದು ಎಲ್ಲಿ ಸಿಗುತ್ತದೆ ಹೇಳಿ! ಹುಡುಕುತ್ತಾ ಇದ್ದೀವಿ. ಹೇಳಿದ ಮಾತು ಕೇಳಿಕೊಂಡಿರುವ ಒಳ್ಳೆ ಹುಡುಗಿ ಇದ್ದರೆ, ಸ್ವಲ್ಪ ಹೇಳ್ರೀ ನಿಮಗೂ ಪುಣ್ಯ ಬರುತ್ತದೆ! ಎಂದಾಗ,

ನೀವು ಸರಿ! ಹುಡುಕಲಿಕ್ಕೆ ಅದೇನು ಬೀದಿಯಲ್ಲಿ ಬಿದ್ದಿರುವ ಪದಾರ್ಥವೆ? ಇತ್ತೀಚೆಗಂತೂ ಹುಡುಗೀರು ಸಿಕ್ಕುವುದೇ ಕಷ್ಟ! ಇನ್ನು ಅದರ ಮೇಲೆ ಹೇಳಿದ ಮಾತು

ಕೇಳುವ ಹುಡುಗಿ! ಹೀಗೆಲ್ಲಾ ಕನಸು ಕಂಡರೆ, ನೀವು ಮಗನಿಗೆ ಮದುವೆ ಮಾಡಿದ ಹಾಗೆಯೇ ಬಿಡಿ! ಎಂದಾಗ, ಸುನಂದಮ್ಮನಿಗೆ ಕೋಪ ಬಂದಿತು. ಮುಖ ದಪ್ಪ ಮಾಡಿದರು. ಅವರಿಗೆ ಕೋಪ ಬಂದಿದೆ ಎಂದು ತಿಳಿದ ಕಮಲಮ್ಮ! ಬೇಸರಿಸಬೇಡಿ! ಕಾಲ ಈಗ ಬದಲಾವಣೆಯಾಗಿದೆ. ಸಂಸಾರ ಎಂದಮೇಲೆ ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ನಿಮ್ಮ ಮಗನಿಗೆ ಒಳ್ಳೆಯ ಕೆಲಸ ಇದೆ, ಚೆನ್ನಾಗಿದ್ದಾನೆ. ಒಳ್ಳೆಯದಾಗುತ್ತದೆ. ನಿಮ್ಮ ಮಗಳು ಹೇಗಿದ್ದಾಳೆ? ಎನ್ನುತ್ತಾ ಮಾತು ಬದಲಿಸಿದರು. ಮಗಳ ಮಾತು ಬಂದ ತಕ್ಷಣ, ಓ ಸೂಪರ್ ಆಗಿದ್ದಾಳೆ. ಪುಣ್ಯಕ್ಕೆ ನಮ್ಮ ಅಳಿಯ ತುಂಬ ಒಳ್ಳೆಯವನು. ಎನ್ನುತ್ತಾ ಗೆಲುವಾದರು.

ಹರೇ..ರಾಮ ಹರೇ..ಸೀತಾ.. ಸೀತಾರಾಮ! ಹರೆ ಹರೆ ಹರೇ.. ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ.. ಎಂದು ದಾಸರು ಜೋರಾಗಿ ತಾಳ ಹಾಕಿದಾಗ, ಬೆಚ್ಚಿ ಇಬ್ಬರೂ ಆ ಕಡೆ ಗಮನಹರಿಸಿದರು. ಶ್ರೀರಾಮಚಂದ್ರನು ಹುಲ್ಲುಕಡ್ಡಿಯನ್ನು ಎತ್ತಿದಂತೆ ಆ ಶಿವಧನಸ್ಸನ್ನು ಎತ್ತಿ ತೆಗೆದುಕೊಳ್ಳುತ್ತಾ ಅದರ ಮಣಬಾರದ ಹಗ್ಗವನ್ನು ಇನ್ನೊಂದು ತುದಿಗೆ ಬಿಗಿಯಾಗಿ ಕಟ್ಟಿ, ಹೆದೆಏರಿಸುತ್ತಿದ್ದಂತೆ, ಆಕಾಶದಿಂದ ಪುಷ್ಪ ವೃಷ್ಟಿ ಯಾಗಿದೆ. ವರಮಾಲೆ ಹಿಡಿದ ಸೀತೆಯು, ಸೌಮ್ಯ ಪುರುಷನೂ.. ಸುಂದರನು ಮರ್ಯಾದಾ ಪುರುಷೋತ್ತಮನು ಆದಂತ ರಾಮಚಂದ್ರನ ಕೊರಳಿಗೆ ಹಾರವನ್ನು ಹಾಕುತ್ತಿದ್ದಂತೆ, ಆಕಾಶದಿಂದ ದೇವತೆಗಳ ಪುಷ್ಪವೃಷ್ಟಿಯಾಯಿತು. ಋಷಿ-ಮುನಿಗಳು ಸ್ವಸ್ತಿ ಹೇಳಿದರು. ಈ ಶುಭ ಸಂದರ್ಭವನ್ನು ನೋಡುವುದಕ್ಕೆ ಬ್ರಹ್ಮ, ಮಹೇಶ್ವರಾದಿಯಾಗಿ ದೇವತೆಗಳಲ್ಲಾ ಆಕಾಶಮಾರ್ಗದಲ್ಲಿ ಸೇರಿಕೊಂಡರು. ವಸುಂದರೆಯು ಆನಂದಿತಳಾದಳು. ಮಂಗಳ ವಾದ್ಯಗಳು ಮೊಳಗಿದವು. ನವಿಲುಗಳು ನರ್ತಿಸಿದವು ಕೋಗಿಲೆಗಳು ಉಲಿದವು ನದಿಗಳು ಜುಳ ಜುಳ ವೆಂದು ಪ್ರಶಾಂತವಾಗಿ ಹರಿದವು. ಖಗಮೃಗಗಳು ಶಾಂತವಾದವು.

ಮಂಗಳಂ ಶ್ರೀರಾಮಚಂದ್ರನಿಗೆ.. ಮಂಗಳಂ.. ಮಾತೆ ಸೀತಾದೇವಿಗೆ ಎಂದು ಹಾಡುತ್ತಿದ್ದಂತೆ..

ಕಥೆ ಮುಗಿದು ಹೋಯಿತಾ ಮಂಗಳ ಹಾಡುತ್ತಿದ್ದಾರೆ. ಅದಕ್ಕೆ ರೀ.. ಪುರಾಣ ಪುಣ್ಯ ಕಥೆ ಎನ್ನುವುದು. ನೋಡಿ! ಸಮಯ ಸರಿದದ್ದೇ ಗೊತ್ತಾಗಲಿಲ್ಲ. ಏನೋ "ಹೂವಿನ ಜೊತೆ ನಾರು" ಎನ್ನುವಂತೆ ನಾವು ಅಲ್ಪಸ್ವಲ್ಪ ಪುಣ್ಯ ಕಟ್ಟಿಕೊಂಡೆವು ಎನ್ನುತ್ತಿದ್ದಂತೆ ಕುಳಿತವರೆಲ್ಲಾ ಒಂದೇ ಬಾರಿ ಎದ್ದುಬಿಟ್ಟರು. ಅಬ್ಬಾ! ಜನಸಾಗರ! ನೋಡ್ರೀ.. ಅಪ್ಪಾ.. ರಾಮಚಂದ್ರ! ಕಾಪಾಡಪ್ಪ!! ಎಂದು ಮುಂದೆ ಹೆಜ್ಜೆ ಇಟ್ಟರು.

ಸೊಗಸಾಗಿತ್ತು ಗಿರಿಜಾ ಕಲ್ಯಾಣ ಕಥೆ! ಮನೆಗೆ ಹೋದ ತಕ್ಷಣ ಕಥೆಯೇನು? ಎಂದು ಮೊಮ್ಮಗ ಕೇಳುತ್ತಾನೆ ಎಂದಾಗ, ರೀ.. ಕಮಲಮ್ಮ! ಗಿರಿಜಾ ಕಲ್ಯಾಣ ಅಲ್ಲಾ.. ಸೀತಾ ಕಲ್ಯಾಣರೀ.. ಎಂದು ತಿದ್ದಿದಾಗ ಅಯ್ಯೋ ಬಿಡ್ರಿ! ಯಾವ ಕತೆ ಹೇಳಿದರು ಅವನಿಗೇನು ಗೊತ್ತಾಗುತ್ತದೆ? ಗಿರಿಜಾ ಕಲ್ಯಾಣ, ಸೀತಾ ಕಲ್ಯಾಣ ಎರಡು ಕಥೆಗಳು ದೇವರದು ಅಷ್ಟೇ ತಾನೇ..ಎರಡೂ ಮದುವೆಗೆ ಸಂಬಂಧ ಪಟ್ಟದ್ದು.. ಅದಿರಲಿ ನಾಳೆನೂ ಇದೆಯಾ ಕಥೆ ಎನ್ನುತ್ತಿದ್ದಂತೆ ಮನೆ ಸಿಕ್ಕಿಬಿಟ್ಟಿತು.

ಹೂಂ ರೀ..ನಾಳೇನು ಕತೆಯಿದೆ. ಸತ್ಯಹರಿಶ್ಚಂದ್ರ! ಸರಿಯಾಗಿ ಆರು ಗಂಟೆಗೆ ಬರುತ್ತೇನೆ ರೆಡಿಯಾಗಿರಿ ತಡ ಮಾಡಬೇಡಿ ಎಂದು, ಸರಬರನೆ ತಮ್ಮ ಮನೆ ಕಡೆ ಹೊರಟಾಗ ಕಮಲಮ್ಮ.. ಹುಷಾರು ರೀ.. ಹೋಗಿಬನ್ನಿ ಎಂದು ಬೀಳ್ಕೊಟ್ಟಲ್ಲಿಗೆ, ಇವರಿಬ್ಬರ ಹರಿಕಥೆ ಸಂವಾದವು ಮುಕ್ತಾಯವಾಯಿತು! ಎಂಬಲ್ಲಿಗೆ.. ಹರ ಹರ ಮಹದೇವ. ■

# ಗಿಲ್ಟ್ ಕಾಡಿತೇ......

**ಎಚ್. ಗೋಪಾಲಕೃಷ್ಣ**

ಹೊನ್ನಾವರ ನದಿ ದಂಡೆಗೆ ಹೋಗಿದ್ದ ಕತೆ ನಿಮಗೆ ಹೇಳಲೇಬೇಕು ಅಂತ ನನ್ನಲ್ಲಿ ಒಂದು ಒಳ ತುಡಿತ ಹೆಚ್ಚಿದೆ. ಅದನ್ನು ಮೊದಲು ಹೇಳಿಬಿಡ್ತೀನಿ. ಮೊನ್ನೆ ನವಂಬರ್ ನಲ್ಲಿ ನೆಂಟರು ಪಂಟರು ಸೇರಿ ಎಲ್ಲಾದ್ರೂ ಹೋಗೋಣ ಅಂತ ವರ್ಲ್ಡ್ ಮ್ಯಾಪ್, ಇಂಡಿಯಾ ಮ್ಯಾಪ್ ಹಿಡಿದು ಒಂದೂವರೆ ತಿಂಗಳು ಸ್ಟಡಿ ಮಾಡಿದ್ರಾ? ಆಮೇಲೆ ಕುಮಟಾ ಮತ್ತು ಹೊನ್ನಾವರ ಹೋಗಿ ಅಲ್ಲಿ ಸಮುದ್ರದ ದಂಡೆ, ಶರಾವತಿ ಹಿನ್ನೀರಿನಲ್ಲಿ ಕಾಲು ಆಡಿಸ್ತಾ ಕೂರಬೇಕು ಅಂತ ಆಸೆ ಪಟ್ರಾ..? ಕತೆ ಇಲ್ಲಿಂದ ಶುರು.

ಕುಮಟಾಗೆ ರೈಲು ಬುಕ್ ಮಾಡಿ ಹೋದ್ರೋ. ಅಲ್ಲಿ ರೆಸಾರ್ಟ್‌ನಲ್ಲಿ ಉಳಕೊಂಡೊ.. ಕುಮಟಾದ ಸಮುದ್ರ ದಂಡೆ ಮೇಲೆ ರೆಸಾರ್ಟ್‌ನವರು ಹಾಕಿದ್ದ ಕೂತು ಮಲಗುವ ಮಂಚದ ಮೇಲೆ ಕೂಲಿಂಗ್ ಗ್ಲಾಸ್ ಧರಿಸಿ ಅರ್ಧ ಕೂತು ಅರ್ಧ ಮಲಗಿ ಎಂಜಾಯ್ ಮಾಡಿದ್ರೋ. ನಿಂತು ಬಗ್ಗಿ ಅಂಗಾತ ಮಲಗಿ ಬೋರಲು ಮಲಗಿ ಮೈಮೇಲೆ ಮರಳು ಸುರುವಿಕೊಂಡು..... ಅದೇನೇನೋ ಅವತಾರದಲ್ಲಿ ಫೋಟೋ ತೆಗೆಸಿಕೊಂಡೆ ವಾ. ಅದು ಮುಗಿಸಿ ಹೊನ್ನಾವರದ ರೆಸಾರ್ಟ್ ಸೇರಿದೆವಾ.. ಅಲ್ಲಿನ ಓನರ್ ಕಂ ಕೇರ್ ಟೇಕರ್ ಗಣೇಶ್ ಅಂತ. ಮೂವತ್ತು ಮೂವತ್ತೈದರ ಯುವಕ, ಮುದ್ದಾದ ಹೆಂಡತಿ ಎರಡು ಮಕ್ಕಳು ಮತ್ತು ಅಜ್ಜಿ ತಾತ ಪರಿವಾರ. ಇವರ ಮನೆ ಮುಂಭಾಗದ ಮನೆಯನ್ನೇ ರೆಸಾರ್ಟ್ ತರಹ ಮಾಡಿದ್ದರು. ಮನೆ ಹಿಂಭಾಗದಲ್ಲಿ ವಿಸ್ತಾರವಾದ ಹಸಿರು ತುಂಬಿದ, ಒಂದು ಪುಟ್ಟ ಜಲಪಾತ ಇರುವ ತೋಟ ಮತ್ತು ವಿಶಾಲವಾದ ಹೊಲ. ಹೊಲದಲ್ಲಿ ಸುಮಾರು ಅಪರೂಪದ ಬೆಳೆ.. ಸಂಪೂರ್ಣ ಗ್ರಾಮೀಣ ವಾತಾವರಣ ಮತ್ತು ಪರಿಸರ, ಮನೆಗೆ ಅಂಟಿದ ಹಾಗಿರುವ ಶರಾವತಿ, ಅದರಲ್ಲಿ ಓಡಾಡುತ್ತಿರುವ ಕೆಲವು ದೋಣಿಗಳು. ಮನೆ ಮುಂದೆ ಜಗಲಿಯಲ್ಲಿ ಕೂತರೆ ಏಳೆಂಟು ಅಡಿ ಮುಂದೆ ತಿಳಿನೀರಿನ ಶರಾವತಿ ನದಿ.. ಇದು ಅಲ್ಲಿನ ಮೊದಲ ಕಣ್ಣು ಸೆಳೆಯುವ ನೋಟ. ಅಪ್ಪಂಗೆ ಹುಷಾರಿಲ್ಲ ಅಂತ ಆಸ್ಪತ್ರೆಗೆ ಹೋಗಿದ್ದ ಗಣೇಶ. ಮನೆಯಾಕೆ ನಮಗೆ ಬರಮಾಡಿಕೊಂಡು ಕಾಫಿ ಕೊಟ್ಟು ಊಟ ತಿಂಡಿ ಬಗ್ಗೆ ಹೇಳಿ ಎರಡು ದಿವಸದ ನಮ್ಮ ಕಾರ್ಯಕ್ರಮ ವಿವರಿಸಿದರು. ಗಣೇಶ ರಾತ್ರಿ ಊಟಕ್ಕೆ ಮುನ್ನ ಸಂಜೆ ನಮ್ಮ ಜತೆ ಮಾತಿಗೆ ಬಂದ. ಇದು ನನ್ನ ಈ ವರೆಗಿನ ತಿಂಕಿಂಗ್ ಪ್ರೊಸೆಸ್ ಅನ್ನೇ ಬದಲಿಸಿ ಬಿಟ್ಟಿತು. ಇಲ್ಲೇ ನನ್ನ ಆತ್ಮಾವಲೋಕನ ಶುರು ಆಗಿದ್ದು...! ಈಗ ಆ ಕತೆಗೆ.

ಗಣೇಶ್ ಎಲ್ಲರ ಪರಿಚಯದ ನಂತರ ನಮ್ಮ ಸಂಗಡ ಮಾತು ಶುರು ಮಾಡಿದ. ಅಡುಗೆ ನಿಮಗೆ.....ಅವನ ಮಾತು ಅರ್ಧದಲ್ಲೇ ತಡೆದು ನಮ್ಮ ಸೀನಿಯರ್ ಸೀನಿ ನನಗೆ ಖಾರ ಜಾಸ್ತಿ ಇರ್ಬೇಕು ಅಂದ.

ಅವನ ನಂತರ ಮತ್ತೊಬ್ಬರು ಸಾರು ಹುಳಿಗೆ ಬೆಳ್ಳುಳ್ಳಿ ಹಾಕಬಾರದು, ಈರುಳ್ಳಿ ಬೇಡ... ಅಂದರು ಇವರ ಅವಳಿ ಜವಳಿ ಅದೂ ಬೆಳ್ಳುಳ್ಳಿ ಬೇಡ, ಈರುಳ್ಳಿ ಊಹೂಂ ಅಂದಿತು. ನನಗೆ ಅನ್ನ ಬಿಡಿ ಬಿಡಿ ಇರಲಿ ಅಂದರು ಒಬ್ಬರು. ಸಾಗು ತರಕಾರಿ ಹಾಕಿ ಮಾಡಿ...ಅವಳಿ ಜವಳಿ ಬೆಳ್ಳುಳ್ಳಿ ಬೇಡ, ಈರುಳ್ಳಿ ಊಹೂಂ ಅಂದಿತು. ಪೊಂಗಲ್ ಇರಲಿ, ಅದನ್ನೇ ಮಾಡಿ ಅದರ ಜತೆ ಈರುಳ್ಳಿ ಮೊಸರು ರಾಯ್ತ.. ಈರುಳ್ಳಿ ಬೆಳ್ಳುಳ್ಳಿ ಬೇಡ ಅಂತ ಮತ್ತೆ ಅವಳಿ ಜವಳಿ ರಿಪೀಟಿಸಿತು. ಉಪ್ಪಿಟ್ಟು, ಅದೂ ಮಾಡಿ ಖಾರ ಚೆನ್ನಾಗಿ ಹಾಕಿ ಅವಳಿ ಜವಳಿ ಬೆಳ್ಳುಳ್ಳಿ ಬೇಡ, ಈರುಳ್ಳಿ ಊಹೂಂ ಅಂದಿತು.

ಹೀಗೆ ಒಬ್ಬೊಬ್ಬರು ಒಂದೊಂದು ಅವರಿಗೆ ಬೇಕಾದ್ದು ಸ್ಪ್ರೆಸ್ ಮಾಡಿ ಮಾಡಿ ಹೇಳಿದ್ರಾ..

ರಾತ್ರಿಗೆ ಚಪಾತಿ ಮಾಡಿಬಿಡಿ....

ಈಗ ಅವಳಿ ಜವಳಿ ಬೆಳ್ಳುಳ್ಳಿ ಬೇಡ, ಈರುಳ್ಳಿ ಊಹೂಂ ಅಂತ ಅನ್ನಲಿಲ್ಲ



ಗಣೇಶ ಎಲ್ಲರೂ ಹೇಳಿದ್ದನ್ನು ತಲೆಯೊಳಗೆ ತುಂಬಿಸಿಕೊಂಡ. ಇದು ಮನೆಗೆ ಸೀನಿಯರ್ ಮೋಸ್ಟ್ ಅಜ್ಜ ಏನೂ ಮಾತೇ ಆಡದೆ ಸುಮ್ಮನೆ ಮಂತ್ರ ಹಾಕಿದ ಹಾಗೆ ಕೂತಿದೆಯಲ್ಲಾ ಅಂತ ಅವನಿಗೆ ಅನಿಸಿರಬೇಕು.

ಗಣೇಶ ನಿಧಾನಕ್ಕೆ ನನ್ನ ಕಡೆ ತಿರುಗಿದ..

ಸಾರ್ ನೀವೇನೂ ಹೇಳಲೇ ಇಲ್ಲ...

ಸಾರ್ ನಿಮಗೆ...? ಅಂತ ಮುಖ ನೋಡಿದ

ಅವನ ಮಾತು ಕೇಳಿದೇನಾ.....

ಮೊಟ್ಟ ಮೊದಲನೇ ಬಾರಿಗೆ ನಾನು ಸ್ಟನ್ ಹೊಡೆದುಹೋಗಿದ್ದೆ. ಸ್ಟನ್ ಹೊಡೆದವರು ಏನು ಮಾಡ್ತಾರೆ? ಎರಡು ನಿಮಿಷ ಪ್ರಜ್ಞೆ ತಪ್ಪಿದ ಹಾಗಾಯ್ತು. ಕಣ್ಣು ಪಿಳಿಪಿಳಿ ಬಿಟ್ಟೆ. ಸುತ್ತಲೂ ಇದ್ದವರು ಕಾಣಲಿಲ್ಲ, ಅವರ ಮಾತೂ ಕೇಳಲಿಲ್ಲ. ತಲೆ ಗಿರ್ ಗೀರಾ ಅಂದ ಹಾಗೆ ಆಯಿತು.....

ಯಾಕೆ ಸ್ಟನ್ ಹೊಡೆದೆ ಅಂತ ನಿಮಗೆ ಮೊದಲು ಹೇಳಿ ಬಿಡ್ತೀನಿ.

ಈ ಎಪ್ಪತ್ತೈದು ವರ್ಷದಲ್ಲಿ ಮೊಟ್ಟ ಮೊದಲ ಬಾರಿಗೆ ದೂರದ ಊರಿನಲ್ಲಿ ಒಂದು ಅರ್ಧ ಗಂಟೆ ಹಿಂದೆ ಮಾತ್ರ ಪರಿಚಿತನಾಗಿದ್ದ ವ್ಯಕ್ತಿ ನಿಮಗೆ ಊಟಕ್ಕೆ ಏನು ಮಾಡಲಿ ಅಂತ ಕೇಳಿದರೆ ನಿಮಗೆ ಹೇಗಾಗಬೇಕು ? ನನಗೂ ಅದೇ ಇವರೇ ಆಗಿದ್ದು. ನನಗೆ ಬುದ್ಧಿ ಬೆಳೆದು (ಯಾವಾಗ ಬೆಳೀತು ನಿನಗೆ ಬುದ್ಧಿ ಅಂತ ನನ್ನಾಕೆ ದಿವಸಕ್ಕೆ ಸರಾಸರಿ ಒಂದು ಡಜನ್ ಸಲ ರೇಗುವುದುಂಟು, ನಾನು ಇದನ್ನು ವೈಫ್ ಮೇನೀಯ ಆಂತ ಕೇಮೇ ಮಾಡಲ್ಲ.) ಇಷ್ಟು ಬೆಳೆಯೋ ವರೆಗೂ ಯಾರೂ ಈ ಪ್ರಶ್ನೆ ಕೇಳಿದ್ದು ಇಲ್ಲ. ಅದರಿಂದ ಸ್ಟನ್ ಆಗಿದ್ದು.

ಎದುರಿನ ಲೋಟದಲ್ಲಿದ್ದ ನೀರು ಕುಡಿದು ತಹಬಂದಿಗೆ ಬಂದೆ.

ಗಣೇಶ ಮತ್ತೆ  ಸಾರ್ ನಿಮಗೆ...? ಅಂತ ಮುಖ ನೋಡಿದ.

ನಾನು ನನಗೆ ಇಷ್ಟವಾದ ಅಡುಗೆಗಳನ್ನು ನೆನೆಸಿಕೊಳ್ಳಲು ಪ್ರಯತ್ನ ಪಟ್ಟೆ. ಇಷ್ಟವಾದ ಒಂದೇ ಒಂದು ತಿನ್ನಬಹುದಾದ ವಸ್ತುವೂ ನೆನಪಿಗೆ ಬಾರದೇ ಹೋಗಬೇಕೇ? ಇಷ್ಟು ದಿವಸ ಅದೇನು ಮಾಡಿ ಹಾಕ್ತಾರೋ ಅದನ್ನೇ ಚಪ್ಪರಿಸಿಕೊಂಡು ದಿವಸಕ್ಕೆ ಮೂರು ನಾಲ್ಕು ಸಲ ತಿಂದು ಅದನ್ನೇ ಮಾರನೇ ದಿವಸ, ಅದರ ಮಾರನೇ ದಿವಸ ನಾಲ್ಕು

ಬಾರಿ ತಿನ್ನುತ್ತಾ ಇದ್ದವನಿಗೆ ಇಷ್ಟ ಅನ್ನೋದು ಇದೆಯಾ?

ಮದುವೆಗೆ ಮೊದಲು ಅಮ್ಮ ನಂತರ ಹೆಂಡತಿ ಇವರು ಮಾಡಿ ಹಾಕಿದ್ದೇ ತಿಂದದ್ದು. ನನಗೆ ಇಷ್ಟ ಅಂತ ಯಾವುದಾದರೂ ತಿಂಡಿ ಅಡಿಗೆ ಆಗಿತ್ತಾ ಮನೇಲಿ ಅಂತ ನೆನಸಿಕೊಂಡರೆ ಊಹೂಂ ಒಂದೇ ಒಂದೂ ತಿನಿಸೂ ನೆನಪಿಗೆ ಬರಲಿಲ್ಲ. ಹೋಗಲಿ ಯಾವತ್ತಾದರೂ ಯಾರಾದರೂ ಕೇಳಿದ್ದಾರಾ ಅಂದರೆ ಅದೂ ಊಹೂಂ ನೆನಪಿಗೆ ಬರಲಿಲ್ಲ!

ಗಣೇಶ ಮತ್ತೆ ಸಾರ್ ನಿಮಗೆ...? ಅಂತ ಮುಖ ನೋಡಿದ.

ಕಳೆದ ತಿಂಗಳು ಮಠದಲ್ಲಿ ಉಂಡಿದ್ದ ಗಂಜಿ ಅನ್ನ ಥಟ್ ಅಂತ ತಲೆಗೆ ಹೊಳೆಯಬೇಕೇ?

ಯಾವುದೋ ದ್ವಾದಶಿ ದಿವಸ ಮಠದಲ್ಲಿ ಊಟಕ್ಕೆ ಹೋಗಿದ್ದೆ. ಹಿಂದಿನ ದಿವಸ ಏಕಾದಶಿ ಪೂರ್ತಿ ಉಪವಾಸ ಮಾಡಿರೋರು ಬರ್ತಾರೆ. ನಾನು ಪ್ರತಿದಿವಸ ಏಕಾದಶಿ ಇರಲಿ ಹುಣ್ಣಿಮೆ ಇರಲಿ ದಿನಕ್ಕೆ ಮೂರು ಹೊತ್ತು ಉಣ್ಣುವವ. ಮಠದಲ್ಲಿ ಮೊದಲು ಎಲೆ ತುಂಬಾ ಗಂಜಿ ಸುರಿದರು, ಏಕಾದಶಿ ನಂತರ ದ್ವಾದಶಿ ಊಟದಲ್ಲಿ ಮೊದಲು ಗಂಜಿ ತಿನ್ನೋದು ತುಂಬಾ ಒಳ್ಳೆದಂತೆ!

ಅದು ಈಗ ಮನಸಿನ ಮುಂದೆ ಬರಬೇಕೇ?

ಗಂಜಿ ಗಂಜಿ ಮಾಡಲು ಗೊತ್ತಾ.... ಅಂದೆ.

ಸಾರ್, ಅದು ನಮ್ಮ ಕಡೆ ಪ್ರತಿ ದಿವಸ ತಿಂಡಿ ಹಾಗೇ.... ಅಂದ.

ಸರಿ ನನಗೆ ಗಂಜಿ ಇರಲಿ.....ಅಂದೆ.

ಅದರಲ್ಲಿ ಅನ್ನ ನುಣ್ಣಗೆ ಇರಲಾ.. ಅಥವಾ ಕಾಳಿನ ಹಾಗೆ...

ಅನ್ನ ನುಣ್ಣಗೆ ಬೆಂದಿರಬೇಕು, ಬಾಯಲ್ಲಿ ಹಾಕಿದರೆ ಹಾಗೇ ಗಂಟಲ ಒಳಗೆ ಅದಾಗಿ ಅದೇ ನ್ಯಾವಿಗೇಟ್ ಆಗಬೇಕು.. ಅನ್ನ ನುಣ್ಣಗೆ ಇದ್ದರೆ...... ಅಂತ ಮಿದ್ದೆ ಅನ್ನದ ಪ್ರಭಾವ ವಿವರಿಸಲು ಹೊರಟೆ..

ಇದು ಯಾರೂ ತಿನ್ನಲ್ಲ ಅದು ಬೇಡ... ಅಂತ ಒಂದು ಗಡಸು ದನಿ ಬರಬೇಕೆ.. ಯಾರು ಅಂತ ನೋಡಿದರೆ ನನ್ನಾಕೆ ದನಿ ಅದು. ಹೀಗೆ ಗಂಜಿ ಒಂದೇ ಒಂದು ಗಡಸು ದನಿಗೆ ವಿಟೊ ಆಗಿಬಿಟ್ಟಿತು.

ಇಡೀ ಮುಕ್ಕಾಲು ಶತಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ನನಗೆ ಬೇಕಾದ್ದು ಮಾಡಿ ಹಾಕಲು ಒಬ್ಬ ಸಿಕ್ಕಿದ, ಅದನ್ನೂ ನನ್ನ ಪ್ರಾರಬ್ಧ ಕರ್ಮ ತಪ್ಪಿಸಿಬಿಟ್ಟಿ ತೇ... ಅಂತ ದುಃಖ ನುಗ್ಗಿತು. ದುಃಖ ತಡೆದುಕೊಂಡೆ. ಆಲ್ಲಿ ನನಗೆ ಗಂಜಿನೇ ಬೇಕು ಅಂತ ಹಟ ಹಿಡಿಯೋದು ಸರಿ ಅಲ್ಲ ಅನಿಸಿತು. ನನ್ನ ಪ್ರೆಸ್ಟೀಜ್ ತಡೆಯಿತು. ಒಬ್ಬರಿಗೆ ಖಾರ, ಒಬ್ಬರಿಗೆ ಹುಗ್ಗಿ, ಒಬ್ಬರಿಗೆ ಚಪಾತಿ.. ಇವೆಲ್ಲಾ ಅವರವರು ಡಿಮಾಂಡ್ ಮಾಡಿ ಮಾಡಿಸಿ ಕೊಳ್ತಾರೆ, ಅವರು ಯಾರೂ ನನ್ನ ಬಗ್ಗೆ ಚಿಂತಿಸಲೇ ಇಲ್ಲ, ನಮ್ಮದು ಯಾಕೆ ಅಡ್ಡ ಬಾಯಿ ಹಾಕಿತು ಅಂತ ಕೋಪ ಬಂತಾ?

ಇಡೀ ರಾತ್ರಿ ಮುಸುಕು ಹಾಕಿಕೊಂಡು ಕಣ್ಣೀರು ಹರಿಸಿದೆ ಮತ್ತು ಒಂದು ಶಪಥ ಮಾಡಿಬಿಟ್ಟೆ. ಬದುಕಿರೋ ಗಂಟ ಯಾರನ್ನೂ ಏನೂ ಕೇಳಲೇ ಬಾರದು.. ಅಂತ!

ಮಾರನೇ ದಿವಸ ತಿಂಡಿ ಕೊಟ್ಟರು, ಒಂದು ಚಮಚ ತಿಂದು ಸಾಕು ಅಂದೆ.

ಮಧ್ಯಾಹ್ನ ಊಟ ಎರಡು ಸ್ಪೂನ್ ತಿಂದು ಮೇಲೆದ್ದೆ. ಸಾಯಂಕಾಲ ಬಜ್ಜಿ ಒಂದೇ ಒಂದು ತಿಂದು ಎರಡು ಲೋಟ ಶುಗರ್ ಲೆಸ್ ಹೀರಿದೆ. ಮಾಮೂಲು ಸಮಯ ಆಗಿದ್ದರೆ ಎರಡು ಮಂಕರಿ ಬಜ್ಜಿ ಖಾಲೀ ಮಾಡಿ ಇನ್ನೂ ಲಾವ್ ಲಾವ್ ಲಾವ್ ಅಂತಿದ್ದೋನು ಏಕ್ ದಂ ಹಿಂಗಾಗಿ ಬಿಟ್ಟ ಅಂದರೆ?

ನಮ್ಮ ಬಾಸ್‌ಗೆ ಏನೋ ಉಲ್ಟಾ ಹೊಡೀತಿದೆ ಅಂತ ಅನ್ನಿಸ್ತಾ? ಎಲ್ಲರೂ ರೂಮಿನಲ್ಲಿದ್ದ ಸಮಯದಲ್ಲಿ ನಾನು ಆಚೆ ಪ್ರಕೃತಿ ನೋಡ್ತಾ ನನ್ನ ಹಣೆಬರಹ ಶಪಿಸುತ್ತಾ ಸಿಂಬಳ ಒರೆಸಿಕೊಳ್ತಾ ಕಣ್ಣೀರು ಸುರಿಸುತ್ತ ಕೂತಿದ್ದೇನಾ? ಹತ್ತಿರ ಬಂತು ಏನಾಗಿದೆ ನಿನಗೆ? ಸಂತೋಷವಾಗಿರೋಣ ಅಂತ ಇಲ್ಲಿ ಬಂದಿರೋದು, ಇಲ್ಲೇನು ನಿನ್ನ ಗೋಳು? ಅಂತ ಕೇಳಿತು.

ನನಗೆ ಗಂಜಿ.... ಅಂದೆ. ತೆಪ್ಪಗೆ ಮಾಡಿದ್ದು ತಿನ್ನು, ಮನೇಲಿ ಮುಕ್ಕೀಯೂ ಇಲ್ಲೇನು ಪೊಗರು.... ನಿನಗೊಬ್ಬನಿಗೇ ಗಂಜಿ ಅಂತ ಮಾಡಿದ್ರೆ ಮಿಕ್ಕವರು ಅದೇನು ತಿನ್ಬೇಕು....ಅಂತ ಆರ್ಡರ್ ಆಯ್ತಾ?

ಹೋಗಿ ಬಂದ ಕಡೆ ಜಗಳ ಆಡೋ ಜಾಯಮಾನ ನನ್ನದಲ್ಲ. ಮತ್ತೆ ಪ್ರೆಸ್ಟೀಜ್. ತೆಪ್ಪಗೆ ತಲೆ ಆಡಿಸಿದೆ. ನನಗೂ ನನ್ನ ಕೋಪ ನನ್ನ ಅಸಹನೆ, ನನ್ನ ಸೆಡವು ತೋರಿಸಕ್ಕೆ ಬರುತ್ತೆ ತಾನೇ? ನನಗೂ ಸೆವೆಂಟಿ ಫೈವ್ ತಾನೇ? ನನಗೆ ಬುದ್ಧಿ ಕಲಿಸೋದು ಹೇಳಿ ಕೊಡಬೇಕೇ?

ಅವತ್ತು ಒಂದು ಚಮಚ ತಿಂಡಿ ಎರಡು ಚಮಚ ಊಟ ಇಷ್ಟೇ ಇನ್ ಟೇಕ್ ಮಾಡಿದೆ. ಅದನ್ನೇ ಊರಿಗೆ ಬಂದ ಮೇಲೂ ಕಂಟಿನ್ಯೂ ಮಾಡಿದೆ.

ಇದರ ಮಧ್ಯೆ ಒಂದು ಸ್ಪೂನು, ಎರಡು ಸ್ಪೂನು ನಡುವೆ ಈ ಬಿಸಿಯಲ್ಲೇ ಊರು ಸೇರಿದೇವಾ.. ಗೆಳೆಯ ನನಗಿಂತ ಐದಾರು ವರ್ಷ ಸೀನಿಯರ್ ಅವನ ಮನೆಗೆ ಹೋದೆ.

ಅವನು ನನಗೆ ತುಂಬಾ ಆಪ್ತ. ಅವನ ಗೋಳು ನನಗೆ, ನನ್ನ ಗೋಳು ಅವನಿಗೆ ಆಗಾಗ ಟ್ರಾನ್ಸ್ ಫರ್ ಆಗ್ತವೆ. ನನ್ನ ಗೋಳಿಗಿಂತ ಅವನ ಗೋಳು ಯಾವಾಗಲೂ ಹೆಚ್ಚು.ಪ್ರತಿ ಸಲ ಸಿಕ್ಕಿದಾಗಲೂ ಅವನು ಎರಡು ಗಂಟೆ ಗೋಳು ಹೇಳಿಕೊಳ್ತಾನೆ.ನಾನೋ ಎರಡು ಎರಡೂ ವರೆ ನಿಮಿಷ ಅಷ್ಟೇ ಅದೂ ಅವನು ಅಕಸ್ಮಾತ್ ಮಾತಾಡಲು ಬಿಟ್ಟರೆ!

ಎದುರು ಬದುರು ಕೂತೆವು. ವಾಟ್ ಇಸ್ ಈಟಿಂಗ್ ಯುವರ್ ಹೆಡ್..? ಅಂತ ಕೇಳಿದ.

ತಲೆ ಒಳಗಡೆ ವಿಷಯ ಗಂಗಾ ನದಿ ನೀರಿನ ಹಾಗೆ ಹರಿಯಿತು. ಕತೆ ಅಂಚಿಗೆ ಅವನಿಂದ ಒಂದು ನಿಟ್ಟುಸಿರು, ಎರಡು ಹನಿ ಕಣ್ಣೀರು ಆಚೆಗೆ ಬಂತು.. ನನ್ನ ಕತೆ ಅವನ ಹೃದಯ ಕರಗಿಸಿ ಬಿಟ್ಟೀತೇ ಅನಿಸಿತು. ಅವನು ಕಣ್ಣು ಒರೆಸಿಕೊಂಡ.

ನೋಡು ಇವನೇ, ನನ್ನ ಕತೆ ಸಹ ಸೇಠ ಕಣಪ್ಪ... ಅಂದ. ಅವನ ಗಂಟಲು ಗದ್ಗದಿತ ವಾಗಿತ್ತು. ಪ್ರತಿ ದಿನ ಉಣ್ಣ ಬೇಕಾದರೆ ನನಗೆ ನನ್ನ ಪ್ರಾರಬ್ಧ ನೆನಪಾಗುತ್ತೆ, ಒಂದೇ ಒಂದು ದಿವಸ ನನಗೆ ಬೇಕಾದ್ದು ತಿನ್ನೋ ಯೋಗ ನನ್ನ ಹಣೆಯಲ್ಲಿ ನನ್ನ ದೈವ ಬರೆಯಲಿಲ್ವೇ ಅಂತ ಅಳು ಬರುತ್ತೆ. ಅರವತ್ತು ವರ್ಷ ಆಯ್ತುಯ್ಯಾ, ಒಂದೇ ಒಂದು ದಿನ ಕಣ್ಣಲ್ಲಿ ನೀರು ಬರದೇ ಉಂಡಿಲ್ಲ ಕಣಯ್ಯಾ... ಅಂದ. ಪಾಪ ಅವನ ದುಃಖದ ಮುಂದೆ ನನ್ನದೇನೂ ಇಲ್ಲ ಅನಿಸಿತು! ನನಗೆ ಉಣ್ಣ ಬೇಕಾದರೆ ಕಣ್ಣಲ್ಲಿ ನೀರು ಬರೀ ಈಗೊಂದು ವಾರದಿಂದ ತಾನೇ! ಅವನನ್ನು ತಬ್ಬಿ ಕೊಂಡು ಬೆನ್ನು ಸವರಿ ಸಮಾಧಾನ ಮಾಡಿದೆ.

ಏನು ಫ್ಯೂಚರ್ ಪ್ಲಾನ್ ಅಂದೆ.

ವಿಲ್ ನಲ್ಲಿ ನನ್ನ ತಿಥಿಗೆ ಅದೇನೇನು ಮಾಡಬೇಕು ಅಂತ ಬೋಲ್ಡ್ ಲೆಟರ್ಸ್‌ನಲ್ಲಿ ಟೈಪ್ ಮಾಡಿಸಿ ಇಟ್ಟುಬಿಟ್ಟಿದ್ದೀನಿ... ಅಂದ.

ಕುತೂಹಲ ಹೆಚ್ಚಿತು, ಯಾಕೆ? ಅಂದೆ.

ತಿಥಿ ಮಾಡಿ ಪಿಂಡ ಇಡ್ತಾರೆ ಗೊತ್ತಾ?

ಗೊತ್ತು.... ಅಂದೆ.

ಪಿಂಡ ಇಡುವ ಮೊದಲು ಸತ್ತವನಿಗೆ ಇಷ್ಟ ಇರೋದು ಅದಕ್ಕೆ ಆವಾಹನೆ ಮಾಡ್ತಾರೆ...

ಅದನ್ನ ಕಾಗೆಗಳು ಪಿತೃ ರೂಪದಲ್ಲಿ ಬಂದು ತಿಂತವೆ. ಆಗ ಆತ್ಮಕ್ಕೆ ಸಮಾಧಾನ ಆಗುತ್ತೆ ಅಂತ ಶಾಸ್ತ್ರ.....

ಅಂತ ಅರ್ಧಗಂಟೆ ವಿವರ ಕೊಟ್ಟ. ಅವನನ್ನು ನೋಡಿ ಅಯ್ಯೋ ಅನಿಸಿ ಬಿಟ್ಟಿತು.

ಮೊದಲು ವಿಲ್ ನಲ್ಲಿ ಬರೆದಿದೀಯಲ್ಲ, ನಿನಗೆ ಇಷ್ಟ ಅನ್ನೋದರ ಪಟ್ಟಿ, ಅದನ್ನು ಒಡೆದು ಹಾಕು... ಅಂದೆ.

ಯಾಕೆ ಅಂತ ಕಣ್ ಕಣ್ ಬಿಟ್ಟ.

ಅಲ್ಲಯ್ಯಾ ಇಷ್ಟುವರ್ಷ ಊಟಕ್ಕೆ ಕೂತಾಗಲೆಲ್ಲ ನಿನ್ನ ಕಣ್ಣಲ್ಲಿ ನೀರು ಹರಿಸಿದವರನ್ನ ಹೀಗೆ ಸುಲಭವಾಗಿ ಬಿಡ್ತಾರಾ..?

ಮತ್ತೆ...?

ನಿನಗೆ ಇಷ್ಟವಾದ್ದು ಬರೆಯೋದು,ಅವರು ತಿಥಿಯಲ್ಲಿ ಪಿಂಡ ಇಡೋದು ಕಾಗೆ ಅದನ್ನ ತಿನ್ನೋದು, ನಿನ್ನ ಆತ್ಮಕ್ಕೆ ತೃಪ್ತಿ ಆಯ್ತು ಅಂತ ಅವರು ನಿನ್ನ ಕಣ್ಣೀರು ಮರೆಯೋದು.....

ಮತ್ತೇನು ಮಾಡಬೇಕು ಅಂತಿ...?

ಐಡಿಯ ಕೊಡೋದರಲ್ಲಿ ನಾನು ಪ್ರಚಂಡ ತಾನೇ?

ವಿಲ್‌ನಲ್ಲಿ ಇಷ್ಟದ್ದು ಬರೀ ಬೇಡ.ಸಾಯೋವರೆಗೂ ಮನೆಗೆ ಬಂದವರೆದೂರು ನಿನಗೆ ಇಷ್ಟ ಇರೋದು ಪ್ರತಿಯೊಂದೂ ಹೇಳಿ ಹೇಳಿ ಕಣ್ಣೀರು ಸುರಿಸು. ಹೇಗಿದ್ದರೂ ನಿನಗೆ ವಯಸ್ಸಾಗಿದೆ, ಅವರು ನಿನಗೆ ಬೇಕಾದ್ದು ಮಾಡಿಕೊಡೋಕ್ಕೆ ಆಗೊಲ್ಲ....

ನಿನಗೆ ಇಷ್ಟ ಆಗಿದ್ದು ಮಾಡದೆ ಮಾಡಿ ಕೊಡದೇ ಇದ್ವಿ ಅನ್ನೋ ಗಿಲ್ಟು ಅವರಿಗೆ ಕೊನೆವರೆಗೂ ಕಾಡಬೇಕು. ಊಟಕ್ಕೆ ಕೂತರೆ ನಿನ್ನ ಮುಖ ಅವರೆದುರು ಬರಬೇಕು....... ಮೊದಲಾಗಿ ತಲೆ ತುಂಬಾ ಐಡಿಯಾ ತುಂಬಿ ರೂಮಿಂದ ಆಚೆ ಬಂದನಾ?

ರೂಮಿನಾಚೆ ಅವನ ಹೆಂಡತಿ ಬಾಗಿಲ ಪಕ್ಕ ನಿಂತು ನಮ್ಮ ಮಾತು ಕೇಳಿಸಿ ಕೊಳ್ಳುತ್ತಾ ಇರಬೇಕೇ.....?

ಗಿಲ್ಟ್ ಅವರನ್ನು ಕಾಡಿತೇ......

ಮುಂದೇನಾಯ್ತು ಅನ್ನೋದನ್ನು ಮತ್ತೆ ಸಿಗ್ತೀರಲ್ಲಾ ಆಗ ಇನ್ನೂ ವಿವರವಾಗಿ ಕಣ್ಣಿಗೆ ಕಟ್ಟಿದ ಹಾಗೆ ಹೇಳಲಾ.......? ಅಂತ ರಾಮಜ್ಜ ಕತೆ ಮುಗಿಸಿದ.

■

# ಸಾಹಿತ್ಯ ಪ್ರೇಮಿ

**ನಿರ್ಮಲಾ ಮೃತ್ಯುಂಜಯ್**

ಹೊತ್ತು ಹೊತ್ತಿಗೆ ಸರಿಯಾಗಿ ಸಂತೃಪ್ತಿಯಿಂದ ಊಟಮಾಡಿಕೊಂಡು ನನ್ನ ಪಾಡಿಗೆ ನಾನಿದ್ದೆ. ಇದ್ದಕ್ಕಿದ್ದಂತೆ, ಹೇಗಾದರೂ ಮಾಡಿ ಒಂದು ಹೊತ್ತಿಗೆ ಹೊರತರಬೇಕೆಂಬ ಹುಕಿ ಹುಟ್ಟಿತು. ಮೊದಲಿನಿಂದಲೂ ನನ್ನ ಕವನ, ಚುಟುಕು, ವೈಚಾರಿಕ ಮತ್ತು ಹಾಸ್ಯಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತ ಕೆಲವು ಬಹುಮಾನಗಳೂ ಸಂದಿದ್ದವು. ಇದ್ದಬಿದ್ದ ಕವನಗಳನ್ನು ತಿದ್ದಿ ಒಂದು ಸ್ವರೂಪಕ್ಕೆ ತಂದೆ.

ಹೊಸದಾಗಿ ಆಗತಾನೇ ಬೆಂಗಳೂರಿಗೆ ಬಂದಾಗ ನನಗೆ ಯಾವ ಪ್ರಕಾಶಕರ ಪರಿಚಯವೂ ಇದ್ದಿಲ್ಲ. ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದೆ. ಅಲ್ಲಿ ಅಕಸ್ಮಾತ್ ಒಬ್ಬ ಪ್ರಕಾಶಕರ ಪರಿಚಯವಾಯ್ತು. ನನ್ನ ರೊಟ್ಟಿ ತುಪ್ಪದಲ್ಲಿ ಬಿದ್ದಿತೆಂದು, ಅವರಿಂದ ಮೊಬೈಲ್ ನಂಬರ್ ಪಡೆದು ಸೇವ್ ಮಾಡಿಕೊಂಡೆ. ಪುಸ್ತಕ ಪ್ರಕಟಣೆಯ ಎ,ಬಿ,ಸಿ,ಡಿ ಗೊತ್ತಿರದ ನಾನು ಕ್ರಮೇಣ ಎಲ್ಲ ತಿಳಿದುಕೊಂಡೆ. ಮುನ್ನುಡಿ, ಬೆನ್ನುಡಿ ಬರೆಸಿ, ಅಂತೂ ಖಟಿಪಿಟಿ ಮಾಡಿ ಕವನಸಂಕಲನ ಹೊರತಂದೆ. ವಿಳಂಬವಾದರೂ ಸರಿ ಪ್ರಕಾಶಕರು, ಆಕರ್ಷಕ ಮುಖಪುಟದೊಂದಿಗೆ, ಚೊಕ್ಕಟವಾಗಿ ಮುದ್ರಿಸಿದ್ದರು. ಸ್ವತ: ನಾನೇ ಅರ್ಧದಷ್ಟು ಖರ್ಚುಮಾಡಿದ್ದೆ. ಪ್ರಕಾಶಕರು ನನಗೆ 300 ಪುಸ್ತಕಗಳನ್ನು ಒದಗಿಸಿದರು. ಹಾಡನ್ನು ಹಾಡಿ ಆಗಿದೆ. ಇನ್ನು ಸಹೃದಯರು ಸೋ ಎಂಬ ಮುದ್ರೆ ಒತ್ತುವುದೊಂದೇ ಬಾಕಿ.

ಪುಸ್ತಕ ಲೋಕಾರ್ಪಣೆಗೆ ಕಾಸೆಲ್ಲಿದೆ? ಪ್ರಕಟಣೆಗೇ ಕಾಸೆಲ್ಲಾ ಕರಗಿ ನೀರಾಗಿದೆ. ಲೋಕಾರ್ಪಣೆ ಕನಸಾಗಿದೆ. ಅಟ್ಟದ ಮೇಲಿನ ಕಪಾಟಿನಲ್ಲಿ ಅವನ್ನೆಲ್ಲ ಒಟ್ಟಿದೆ. ಅಷ್ಟಕ್ಕೂ ಕವನಸಂಕಲನವನ್ನು ಕೊಂಡು ಓದುವವರಾರು? ಪುಕ್ಕಟೆ ಕೊಟ್ಟರೆ, 'ನನಗೊಂದು, ನಮ್ಮಪ್ಪನಿಗೊಂದು', ಎಂದು ತೆಗೆದುಕೊಳ್ಳುವವರೇ ಎಲ್ಲರೂ. ಅದೂ ಉದಯೋನ್ಮುಖಿಯ ಪುಸ್ತಕವನ್ನು. ಪುಸ್ತಕವನ್ನು ಉಚಿತವಾಗಿ ಕೊಡುವುದೇ ಉಚಿತವೆನಿಸಿತು. ನಾಲ್ಕು ಜನ ಓದಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರೆ ಅದೇ ನನಗೆ ಶ್ರೀರಕ್ಷೆ ಎಂದುಕೊಂಡೆ. ಬರಬರುತ್ತ ಅಟ್ಟದ ಮೇಲಿನ ಪುಸ್ತಕಗಳು 'ಇಳಿದು ಬಾ ತಾಯೇ' ಎನ್ನುವಂತೆ ಮೆಲ್ಲಮೆಲ್ಲನೆ ಕೆಳಗಿಳಿದು ಗುಡ್‌ಬೈ ಹೇಳತೊಡಗಿದವು. ಸಂದರ್ಭಕ್ಕೆ ತಕ್ಕಂತೆ ಸಹೃದಯರ ಕೈಸೇರಿದವು. ಪ್ರಶಸ್ತಿಗೆ ಕೆಲವು, ಅವರಿವರಿಗೆ ಕೆಲವು ಹೀಗೆ ಐವತ್ತು ಪುಸ್ತಕಗಳು ಕೈಬಿಟ್ಟವು.

ಇವತ್ತಲ್ಲ ನಾಳೆ ಸಹೃದಯ ಓದುಗರು ನನ್ನನ್ನು ಗುರುತಿಸಿ, ಪುಸ್ತಕದ ಬೇಡಿಕೆ ಹೆಚ್ಚಬಹುದೆಂಬ ಕನಸುಕಾಣತೊಡಗಿದೆ. ಉಚಿತ ಬೇಡ ಮಾರಾಟಕ್ಕೆ ಕೊಡಿ ಹತ್ತು, ಐವತ್ತು, ನೂರು ಪ್ರತಿಗಳನ್ನು ತಮ್ಮ ಬಂಧು-ಬಳಗಕ್ಕೆ ಹಂಚಲು ಇಲ್ಲವೆ ಉಡುಗೊರೆ ಕೊಡಲು ಮುಂದಾಗಬಹುದು ಎಂಬ ದೂರದ ಆಶೆ. ಸಧ್ಯಕ್ಕೆ ಉಚಿತವಾಗಿ ಕೊಟ್ಟಾದರೂ ಅವರಿಗೆ ಸಾಹಿತ್ಯದ ರುಚಿ ಹಚ್ಚಬೇಕೆಂದು ತೀರ್ಮಾನಿಸಿದೆ. ಸಾಹಿತ್ಯ ಪ್ರವಾಹ, ನಿರಂತರ ಪ್ರಹಿಸುತ್ತಲೇ ಇರಬೇಕು. ನಿಂತ ನೀರಾಗಬಾರದು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲಾ.

ಮೊಟ್ಟಮೊದಲು ಧಾರವಾಡದಲ್ಲಿರುವ ಹಿರಿಯ ಸಾಹಿತಿಗಳಿಗೆ ವಿತರಿಸಿ ಪಾದಕ್ಕೆರಗಿ, ಅವರ ಆಶೀರ್ವಾದ ಪಡೆದೆ. ಪರಿಚಿತರೊಬ್ಬರಿದ್ದಾರೆಂದು, ಒಂದು ಆಫೀಸಿಗೆ ಕಾಲಿಟ್ಟೆ. ಅವರ ಹೆಸರಿನ ಕೆಳಗೆ ದಪ್ಪ ಅಕ್ಷರಗಳಲ್ಲಿ 'ಸಾಹಿತ್ಯಪ್ರೇಮಿ' ಎಂಬ ಒಕ್ಕಣೆಯ ಬೋರ್ಡ ಇತ್ತು. ಸರಿಯಾದ ಜಾಗಕ್ಕೇ ಬಂದಿದ್ದೇನೆಂದು ನನ್ನ ಬೆನ್ನು ನಾನೇ ಚಪ್ಪರಿಸಿಕೊಂಡೆ. ಪರಿಚಿತ ಚೆಹರೆಯಾದರೂ ಗಂಭೀರ ಮುಖಮುದ್ರೆ. 'ನಮಸ್ಕಾರ ಸಾರ್' ಎಂದೆ.

ಮುಖದಲ್ಲಿ ನಗೆಯಂತೂ ಅರಳಲಿಲ್ಲ. ಮುಗುಳ್ನಗೆ ಸೂಸಲು ತುಟಿಗಳು ಅಲ್ಲಾಡದೇ ಅಂಟಿಕೊಂಡಿದ್ದವು. ಹೂಂ ಇಲ್ಲಾ ಊಹೂಂ ಇಲ್ಲಾ. ಸಾಕ್ಷಾತ್ ಕಲ್ಲಿನ ಪ್ರತಿಮೆಯಂತೆ ಕುಳಿತಿದ್ದರು. ಕವನಸಂಕಲನದ ಪ್ರತಿಯೊಂದನ್ನು ಅವರ ಮೇಜಿನ ಮೇಲಿಟ್ಟೆ. ಆದರೂ ಅವರ ಗಂಟು ಮೋರೆ, ತುಟಿಗಳು ಕ್ಯಾರೆ ಎನ್ನಲಿಲ್ಲ. ಧನ್ಯವಾದವಂತೂ ದೂರದ ಮಾತು. ಯಾವುದರ ಬಗ್ಗೆ ಬರೆದಿರುವಿರಿ? ಯಾವ ಪ್ರಕಾಶನ ಎಂದೆಲ್ಲಾ ಚೌಕಾಶಿ ಮಾಡಿದರು.




'ನೋಡಿ, ಇದು ಆಫೀಸು, ಇಲ್ಲಿ ಪುಸ್ತಕ ಓದಲು ಸಮಯವಿಲ್ಲ. ಕೆಲಸದ ವೇಳೆ ಮನೆಯಲ್ಲಿ ನನಗೆ ಪುರಸೊತ್ತಾದಾಗ ಓದುತ್ತೇನೆಂದರು'. ಅದೇ ನನ್ನ ಪುಣ್ಯ. 'ಓದಿಯಾದ ಮೇಲೆ ದಯವಿಟ್ಟು ನಿಮ್ಮ ಅಭಿಪ್ರಾಯ ತಿಳಿಸಿ' ಎಂದೆ. 'ನೀವೂ ಒಬ್ಬ ಲೇಖಕಿಯೆಂದೇ ಗೊತ್ತಿರಲಿಲ್ಲ. ಎಷ್ಟು ಸೀದಾ, ಸರಳ ಇದ್ದೀರಿ, ಪುಸ್ತಕ ಬಿಡುಗಡೆ ಸಮಾರಂಭ ಯಾವಾಗ ಎಲ್ಲಿ? ಅದಕ್ಕೂ ಪ್ರತಿಶತ ನೂರಕ್ಕೆ ನೂರರಷ್ಟು ಬಂದೇ ತೀರುತ್ತಾರೆಂಬಂತೆ ಕೇಳಿದರು. 'ಕೂಸು ಹುಟ್ಟುವದಕ್ಕಿಂತ–ಮುಂಚೆ ಕುಲಾವಿ' ಎಂದಂತಾಯ್ತು. 'ಬೇಗ ಬಿಡುಗಡೆ ಸಮಾರಂಭ ಇಟ್ಟುಕೊಳ್ಳಿ, ಎಲ್ಲಿ ಬಿಡುಗಡೆರೀ, 'ನನ್ನ ಬಿಡುಗಡೆಯಾದರೆ ಸಾಕಾಗಿದೆ' ಎಂದು ಸ್ವಗತದಲ್ಲಿ ಅಂದುಕೊಂಡೆ. 'ಪುಸ್ತಕ ಲೋಕಾರ್ಪಣೆ ಬಗ್ಗೆ ಇನ್ನೂ ಯೋಚಿಸಿಲ್ಲ ಸರ್'[ನನ್ನ ಆರ್ಥಿಕ ಸ್ಥಿತಿಗತಿಯ ಬಗ್ಗೆ ಹೇಳಿ, ನಾನೇಕೆ ಅವಮಾನಿತಳಾಗಲಿ?]

'ನಿಮಗೇನು ಬೇಜಾನ್ ಟೈಮ್ ಸಿಗ್ತದೆ ಬರೀತೀರಿ. ನಮ್ಮಂಥವರಿಗೆ ಒಂದು ದಿನಪತ್ರಿಕೆ ತಿರುವಿ ಹಾಕುವುದನ್ನು ಬಿಡಿ, ಕೆರೆದುಕೊಳ್ಳೋಕೂ ಪುರಸೊತ್ತಿಲ್ಲ. [ಅದಕ್ಕೂ ಒಂದು ಆಳನ್ನೇ ಇಟ್ಟಿದ್ದಾರೇನೋ] ಇಡೀ ಆಫೀಸೇ ತಮ್ಮ ತಲೆಯ ಮೇಲೆ ಬಿದ್ದಂತೆ ನುಡಿದರು. ನೀವೇ ಲಕ್ಕಿ ಬಿಡ್ರಿ' ಎಂದಾಗ, ಅವರ ಮಾತು ಕೇಳಿ ಹಣೆ ಹಣೆ ಗಟ್ಟಿಸಿಕೊಂಡೆ. ಇಂಥವರಿಗೆ 'ಸಾಹಿತ್ಯಪ್ರೇಮಿ' ಎಂಬ ಬೋರ್ಡು ಬೇರೆ ಕೇಡು. ಇಷ್ಟಾದರೂ ಬಿಡಲಿಲ್ಲ ನಾನು ನನ್ನ ಅಳಿಯನ ಗೆಳೆಯನಿಗೊಂದು ಪುಗಸೆಟ್ಟೆ ಪುಸ್ತಕ ಕೊಟ್ಟೆ. ಆರು ತಿಂಗಳ ಸುದೀರ್ಘ ಅವಧಿಯ ನಂತರ ಅಭಿಪ್ರಾಯ ಕೇಳಿದೆ. 'ಏನ ಹೇಳ್ರಿ ನನ್ನ ಗೋಳು. ಆಫೀಸಿನ್ಯಾಗ ಬಾಸನ ಕಾಟಾ, ಮನಿಯೊಳಗೆ ಗೆಸ್ಟ್‌ಗಳ ಮ್ಯಾಲೆ ಗೆಸ್ಟ್‌ಗಳು, ಈಗಂತೂ ಮದಿವಿ ಸೀಜನ್ನು, ಮದಿವಿ, ಮುಂಜಿವಿ, ವಾಸ್ತುಶಾಂತಿ, ಒಂಧ ಎರಢ, ಉಸಿರಾಟಕ್ಕೂ ಪುರಸೊತ್ತಿಲ್ಲ. ನಿಮ್ಮ ಪುಸ್ತಕಾ ಯಾವಾಗ ಓದ್ಲಿ? ಅಷ್ಟಕ್ಕೂ ಕವನಾ ಯಾರ ಓದ್ತಾರೀ, ನಿಮ್ಮ ಪುಸ್ತಕಾನ ಮುಂದಿನ ಜನ್ಮದಾಗಾದ್ರೂ ಓದಿ ಮುಗಿಸ್ತೇನೋ ಗೊತ್ತಿಲ್ಲ'. ಇದನ್ನು ಕೇಳಿದ ನನಗೆ ಸಿಟ್ಟು ಮತ್ತು ನಗೆ ಒಟ್ಟೊಟ್ಟಿಗೇ ಬಂದವು.

ನನ್ನ ಓರ್ವ ಹಳೆಯ ಗೆಳತಿ(ಲೇಖಕಿ ಕೂಡಾ)ಗೆ ಪುಸ್ತಕ ಕೊಟ್ಟೆ. ಪ್ರಕಟವಾದಾಗಿ–ನಿಂದಲೂ ನನಗೊಂದು ಕಾಪಿ ಬೇಕೆಂದು ಕೇಳಿದ್ದಳು. ಎರಡು ವರ್ಷಗಳ ನಂತರ

ಭೇಟಿಯಾದಾಗ ಕೇಳಿದರೆ, ಪುಸ್ತಕ ತೆಗೆದುಕೊಂಡು ಎರಡು ವರ್ಷಗಳಾದರೂ ಅದರ ಒಂದು ಪುಟವನ್ನೂ ತಿರುವಿ ಹಾಕಲು ಟೈಮಿಲ್ಲವಂತೆ. ತನ್ನ ಸಂಸಾರದ ಜಂಜಾಟದೊಂದಿಗೆ, ಅನೇಕ ಸಂಘ, ಸಂಸ್ಥೆಗಳ ಸೆಕ್ರೆಟರಿ, ಪದಾಧಿಕಾರಿ, ಖಜಾಂಚಿ ಇತ್ಯಾದಿ, ಇತ್ಯಾದಿ, ಇದ್ದಬಿದ್ದದ್ದೆಲ್ಲಾ ತನ್ನ ಕೊರಳಿಗೇ ಸುತ್ತಿದೆಯೇನೋ ಎಂಬಂತೆ, ತನ್ನ ಪುರಾಣದ ಕಂತೆಯನ್ನೇ ಬಿಚ್ಚಿದಳು. ಯಾಕಾದರೂ ನಾನು ಆಕೆಗೆ ಪುಸ್ತಕ ಕೊಟ್ಟೆನೋ ಅನಿಸಿತು. ತೆಗೆದುಕೊಂಡಾಗ, ಖುಷಿಖುಷಿಯಾಗಿ ತೆಗೆದುಕೊಳ್ಳುತ್ತಾರೆ. ಏಕೆಂದರೆ ಪುಕ್ಕಟೆ ಸಿಗುವುದು ನೋಡಿ. ಅದೇ ಸಂಕಲನವನ್ನು ದುಡ್ಡು ತೆತ್ತು ಕೊಂಡಾರೆಯೇ? ಇನ್ನೂ ಓದಿಯೇ ಇಲ್ಲವೆಂದಮೇಲೆ ಪ್ರತಿಕ್ರಿಯೆ, ಹೊಗಳಿಕೆ ಎಲ್ಲಿಂದ ಬಂತು ಮಣ್ಣು.

ನಿಜವಾಗಿಯೂ ಓದುವ ಆಸಕ್ತಿಯಿದ್ದವರು, ತಮಗೆ ಮಲ್ಟಿಟಾಸ್ಕ ಇದ್ದರೂ ಕೂಡ, ಎಲ್ಲವನ್ನೂ ನಿಭಾಯಿಸುತ್ತ, ಅದರಲ್ಲೇ ಸ್ವಲ್ಪ ಬಿಡುವು ಮಾಡಿಕೊಂಡು, ಓದಲು ಕಾತುರರಾಗಿ, ಓದಿ ಮುಗಿಸುತ್ತಾರೆ. ಯಾರಿಗಾದರೂ ಪುಸ್ತಕವನ್ನು ಅಂಚೆ ಮೂಲಕ ಕಳಿಸಿದಾಗ, ಅದು ತಲುಪಿದ ಕೂಡಲೇ ತಿಳಿಸಲು ಹೇಳಿದರೂ ಅದಕ್ಕೆ ಅದು ತಲುಪಿದರೂ ಸಹ ಅವರ ಪ್ರತಿಕ್ರಿಯೆಯೇ ಇಲ್ಲಾ. ಓದಿದ ನಂತರವಾದರೂ ಅಭಿಪ್ರಾಯ ತಿಳಿಸಬೇಕಲ್ಲವೇ? ಕವನಸಂಕಲನ ತಲುಪಿತಾ? ಎಂದು ನಾನೇ ಕೇಳಬೇಕು. ಓದಿದ ಮೇಲೆ 'ಓದಿದಿರಾ'? ಎಂದು ಕೇಳಿ, ಅಭಿಪ್ರಾಯ ತಿಳಿಸಲೂ ನಾನೇ ಹೇಳಬೇಕು. ಪದೇ ಪದೇ ನೆನಪಿಸಬೇಕು. ಅವರು ಅಷ್ಟೊಂದು ಬ್ಯೂಸಿಯಾಗಿರುತ್ತಾರೆ. ಎಷ್ಟೋ ಸಲ ಪುಸ್ತಕ ತಲುಪದೇ, ಮಧ್ಯೆ ಕಳೆದುಹೋಗುವುದೇ ಜಾಸ್ತಿ. ಮತ್ತೆ ನನಗೆ ಅವರ ಅಭಿಪ್ರಾಯ ತಿಳಿದುಕೊಳ್ಳುವ ಕುತೂಹಲ ಬೇರೆ.

ಇಂಥ ಕಹಿ ಅನುಭವಗಳನ್ನು ಕೇಳಿದ ನನ್ನ ಮಗಳು 'ನೀನು ಎಲ್ಲಾರಿಗೂ ಸಿನಿಮಾದ ಹಾಳಿ(ಪಾಂಪ್‌ಲೆಟ್) ಹಂಚಿದ್ಹಂಗ ನಿನ್ನ ಪುಸ್ತಕಾ ಹಂಚುತೀ, ಅವರು ನಿನ್ನನ್ನು ಬಕರಾ ಮಾಡಿಬಿಡುತ್ತಾರೆ' ಅಂದಳು.

ಇದು ಎಂದೆಂದೂ ಮರೆಯಲಾರದ ಪಾಠ. ನನಗೀಗ ನನ್ನ ನೆನಪಿನಾಳದ ಗಾಳಕ್ಕೆ ಸಿಲುಕಿದ ಗೆಳತಿ ಬರೆದ ಚುಟುಕು ನೆನಪಾಗುತ್ತಿದೆ.

ಪ್ರಸವವೇದನೆ ಬೇಕು
ಪುಸ್ತಕ ಪ್ರಕಾಶನ ಬೇಡಾ
ಪ್ರಸವವಾದ ಕೂಡಲೇ
ಮಾತೆ–ನಿಶ್ಚಿಂತೆ
ಪ್ರಕಾಶನವಾದರೂ
ತಪ್ಪಲಿಲ್ಲ ಮಾರಾಟದ ಚಿಂತೆ

– ಸುನಂದಾ ಹಾಲಭಾವಿ

ಏನಾದರಾಗಲೀ, ನೀರಿಗಿಳಿದ ಮೇಲೆ ಮಳೆ ಏನು ಚಳಿ ಏನು ಈಜಲೇ ಬೇಕಲ್ಲ. ವಾಟ್ಸಪ್, ಫೇಸ್‌ಬುಕ್, ಗೂಗಲ್ ಮತ್ತು ಟ್ವೀಟರ್‌ನಂಥ ಆಧುನಿಕ ತಂತ್ರಜ್ಞಾನ ಉದಯಿಸಿದ ಮೇಲೆ, ಜನ ಓದುವುದನ್ನೇ ಬಿಟ್ಟರಾ ಎಂಬ ಅವಮಾನ. ಇದರರ್ಥ ವಾಟ್ಸಪ್ ನೋಡಲೇಬಾರದು ಎಂದಲ್ಲ. ಪುಸ್ತಕ ಓದುವುದನ್ನು ಬಿಡಬಾರದಷ್ಟೇ. ಜನರನ್ನು ಓದಿನಲ್ಲಿ ಹೇಗೆ ತೊಡಗಿಸಬೇಕೆಂದು ಸಾಕಷ್ಟು ರಿಸರ್ಚ್ ಮಾಡಿದೆ. ಅಂತೂ ಓದುಗರಲ್ಲಿ ಅದು ಹೇಗೆ ಪರಿವರ್ತನೆಯಾಯ್ತೋ ಗೊತ್ತಿಲ್ಲ. ಇದ್ದಕ್ಕಿದ್ದಂತೆ ನನ್ನ ಪುಸ್ತಕಗಳಿಗೆ ಬೇಡಿಕೆ

ಜೋರಾಯ್ತು. 'ಮ್ಯಾಡಂ ನಿಮ್ಮ ಪುಸ್ತಕ ಉಚಿತಬೇಡ, ಅದರ ಬೆಲೆ ಎಷ್ಟು ಹೇಳಿ, ಖಚಿತವಾಗಿಯೂ ಖರೀದಿಸುತ್ತೇವೆ' ಎಂದು ದಿನಕ್ಕೆ ನೂರೆಂಟು ಫೋನ ಬರತೊಡಗಿದವು ಹಾಗಾದರೆ ಜನ ವಾಟ್ಸಪ್ ನೋಡುವುದನ್ನೇ ಬಿಟ್ಟು ಬಿಟ್ಟರಾ? ಯಾರೋ ಒಬ್ಬರು ಮುನ್ನಡಿ ಓದಿ ಪುಸ್ತಕದ ಬಗೆಗೆ ಉಳಿದವರಿಗೆ ತಿಳಿಸಿ ಫಿದಾ ಆದರಾ ಅಂತಾ ಯೋಚಿಸಿದೆ. ಮುಖಪುಟದ ಅಂದ ಚೆಂದ ಮತ್ತು ಆಕರ್ಷಣೆಗೆ ಒಳಗಾದರೋ ಗೊತ್ತಿಲ್ಲ. ಅಂತೂ ಅವರು ಪುಸ್ತಕ ಓದಲು ಕೇಳುವುದು ಹೆಚ್ಚೋ, ನಾನು ಅವರಿಗೆ ಕೊಡುವುದು ಹೆಚ್ಚೋ. ಅದರಲ್ಲೂ 20% ರಿಯಾಯಿತಿ ಬೇರೆ ಒದಗಿಸಿದ್ದೆ.

ಎಲ್ಲರೂ ಮುಗಿಬಿದ್ದು ಖರೀದಿಸತೊಡಗಿದರು. 'ಮ್ಯಾಡಂ ನಿಮ್ಮ ಫೋನ ನಂಬರ್ ಕೊಡಿ. ಫೋನಪೇ ಇಲ್ಲಾ ಗೂಗಲ್ ಪೇ ಮಾಡ್ತೀವಿ' ಎಂದಾಗ ನನ್ನ ಕಣ್ಣನ್ನು ನಾನೇ ನಂಬದಾದೆ. ಎಷ್ಟೋ ದಿನಗಳಿಂದ ಅರಸುವ ಬಳ್ಳಿ ಕಾಲಿಗೆ ತೊಡರಿದಂಗಾಯ್ತು. ಇದು ನಿಜವಾಗಿಯೂ ದೇವನಿತ್ತ ವರವೇನು, ಪವಾಡವೇ ಸರಿ. ಪ್ರಕಾಶಕರಾಗಲೀ, ಲೇಖಕರಾಗಲೀ ಪುಸ್ತಕದ ಗಂಟನ್ನು ಹೊತ್ತುಕೊಂಡು ಲೈಬ್ರರಿಗೆ, ಇಲ್ಲವೆ ಸಾಹಿತ್ಯ ಸಮ್ಮೇಳನವಿದ್ದಲ್ಲಿ ದುಡ್ಡುಕೊಟ್ಟು, ಸ್ಟಾಲ್ ಹಾಕಿ ಏನೆಲ್ಲ ಸರ್ಕಸ್ ಮಾಡ್ತಾರೆ. ಪುಸ್ತಕ ಲೋಕಾರ್ಪಣೆಯ ದಿನವೂ ಅಷ್ಟೇ, ಗಂಟನ್ನು ಹೊತ್ತುಕೊಂಡು ಹೋಗಬೇಕಾಗುತ್ತದೆ. ಅಂಥವರಲ್ಲಿ ನನ್ನ ಪುಸ್ತಕಗಳು, ಕುಳಿತಲ್ಲಿಯೇ ಬಿಸಿಬಿಸಿ ದೋಸೆಯಂತೆ ಖರ್ಚಾಗತೊಡಗಿದವು. ಸಂಭ್ರಮವೇ ಸಂಭ್ರಮ.

ಇಷ್ಟು ದಿನ ಕಪಾಟಿನಲ್ಲಿ ಜಪಮಾಡುತ್ತ ಕುಳಿತ ಪುಸ್ತಕಗಳಿಗಾಗಿ ಮತ್ತು ಸಿನಿಮಾ ಹ್ಯಾಂಡಬಿಲ್ಲಿನಂತೆ ಹಂಚುತ್ತೀ ಪುಕ್ಕಟೆ ಎಂದು ಸಹಸ್ರನಾಮಾರ್ಚನೆಯಾಗಿತ್ತಲ್ಲ. ಈಗೇನು ಹೇಳುತ್ತಾರೆ ಅವರು? ಮನೆಯವರೆಲ್ಲಾ ತೆಪ್ಪಗೆ ಕುಳಿತರು. ಕೊನೆಗೆ ಒಬ್ಬರು ಹತ್ತು ಪುಸ್ತಕ ಕೊಡಿರೆಂದು ಕೇಳಿದರು. 'ಕ್ಷಮಿಸಿ, ಈಗಾಗಲೇ ಎಲ್ಲಾ ಪುಸ್ತಕಗಳೂ ಖರ್ಚಾದವು ರೀ, ನನ್ನ ಹತ್ರ ಒಂದು ಪರ್ಸನಲ್ ಪ್ರತಿ ಕೂಡ ಉಳಿದಿಲ್ಲ. ಮತ್ತೊಮ್ಮೆ ಪ್ರಿಂಟ್ ಹಾಕಿಸಿದಾಗ ಕೊಡ್ತೀನ್ರಿ' ಎಂದು ಹೆಮ್ಮೆಯಿಂದ ಬೀಗಿ ಹೇಳಿ, ಅವರನ್ನ ಬೀಳ್ಕೊಟ್ಟೆ.

ನಾನು ಖುಷಿ ಖುಷಿಯಿಂದ ದುಡ್ಡು ಎಷ್ಟಾಗಿದೆಯೆಂದು ಎಣಿಕೆ ಹಾಕತೊಡಗಿದೆ. ಅಂತೂ ರೂ.20,000 ಬಂತು. ಯಾರಿಗುಂಟು ಯಾರಿಗಿಲ್ಲ ಈ ಭಾಗ್ಯ! 'ಲೇಖಕಿಯರ ಸಂಘದ ಫ್ರೆಂಡ್ಸಗೆಲ್ಲಾ ಟ್ರೀಟ್ ಕೊಡಸಬೇಕಂತಿದ್ದೆಲ್ಲಾ ಕೊಟ್ಟು ಬಿಡು' ಅಂದಳು ಮಗಳು. ಟ್ರೀಟೇನು ಒಂದು ಅದ್ದೂರಿಯಾದ ಸಂತೋಷ ಕೂಟವನ್ನೇ ಏರ್ಪಡಿಸಬೇಕೆಂದು ಪ್ಲ್ಯಾನ್ ಹಾಕತೊಡಗಿದೆ. ಹೇಗಿದ್ದರೂ ಕೈಗೆ ದುಡ್ಡು ಬೇರೆ ಬಂದಿತ್ತಲ್ಲ. ಅದರ ತಯಾರಿಯಲ್ಲಿ ತೊಡಗಿದೆ.

ಅಷ್ಟರಲ್ಲಿ ನನ್ನ ಅಭಿಮಾನಿಗಳಲ್ಲಿ ಕೆಲವರು 'ಮ್ಯಾಡಂ, ನಾವು ನಿಮ್ಮ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಭರ್ಜರಿಯಾಗಿ ಮಾಡಲು ತಯಾರಿ ನಡೆಸಿದ್ದೆವು. ಆಗಲೇ ನಿಮ್ಮ ಎಲ್ಲಾ ಪುಸ್ತಕಗಳೂ ಮಾರಾಟವಾದವಲ್ಲರೀ' ಎಂದು ಅಚ್ಚರಿಪಟ್ಟರು.

ಸ್ವೀಟ್ ಏನು ಆರ್ಡರ್ ಮಾಡಲಿ ಎಂದು ಯೋಚಿಸುತ್ತಿದ್ದಾಗ, ಗುಲಾಬಜಾಮೂನ, ಜಿಲೇಬಿ, ಚಿರೋಟಿ, ಬಾಲೂಶಾ ಒಂದೊಂದೇ ಕಣ್ಮುಂದೆ ಹಾಯತೊಡಗಿದವು, ನಾ ಮುಂದೆ ತಾ ಮುಂದೆ ಎಂದು. ಲಿಸ್ಟ್ ಮಾಡತೊಡಗಿದೆ. ಖಾರದ ಐಟಂಗಳಲ್ಲಿ ಖಾರಾಬಾತ್, ಬಿಸಿಬೇಳೆ ಬಾತ್, ಖಾರಾ ಪೊಂಗಲ್, ಮೊಸರೊಡೆ, ಹಪ್ಪಳ ಹೀಗೆ ಎಲ್ಲ ವ್ಯಂಜನಗಳೂ ನನ್ನ ಕಣ್ಮುಂದೆ ಸುಳಿದವು. ಹೀಗೆ ಲಿಸ್ಟ್ ಮಾಡಿ, ಆಯ್ಕೆ ಮಾಡತೊಡಗಿದೆ. ಜೊತೆಗೆ ಬಿಸ್ಲೇರಿ ಬಾಟಲ್‌ನ್ನೂ ಮರೆಯುವಂತಿಲ್ಲ. ಟಿಶ್ಯೂ ಪೇಪರ್ ಬೇಕು. ಒಂದೊಂದೇ

ತಿನಿಸುಗಳ ಹೆಸರನ್ನು ಜೋರಾಗಿ ಕೂಗುತ್ತ, 'ಗುಲಾಬಜಾಮೂನ ತರಸ್ಲೋ, ಜಿಲೇಬಿ ತರಸ್ಲೊ?' ಎಂದು ಜೋರಾಗಿ ಕೂಗಿದಾಗ, ಜಾಮೂನ, ಜಿಲೇಬಿ ಯಾರಿಗೆ ಕೊಡಸ್ತಿ? ಬೆಳಗಾತು ಏಳಿನ್ನ' ಎಂದು ನನ್ನವರು ಮುಸುಕು ಸರಿಸಿದಾಗಲೇ ಸೂರ್ಯ ಮೂಡಿ ಬೆಳಕು ಹರಿದಿತ್ತು.

'ಸದಾಶಿವನಿಗೆ ಅದೇ ಧ್ಯಾನ'ವೆನ್ನುವಂತೆ ನಮ್ಮ ಉತ್ಕಟೇಚ್ಛೆಯೇ ಕನಸಿನ ರೂಪ ತಾಳಿ ತಥಾಸ್ತು ಎಂದು ಹೇಳುತ್ತವೆ. ಅದನ್ನೇ ನಾವು ನಿಜವೆಂದು ತಿಳಿಯುತ್ತೇವೆ. ಕನಸಿನಲ್ಲೂ ಬಕರಾ ಆದೆ. ಹಾಸಿಗೆಯಿಂದ ಎದ್ದು, ಮುಖ ತೊಳೆದು ಅಟ್ಟವೇರಿ ಕಪಾಟಿನತ್ತ ಹೆಜ್ಜೆ ಹಾಕಿದೆ. ಅಲ್ಲಿ ನನ್ನ ಎಲ್ಲ ಪುಸ್ತಕಗಳೂ ಯಥಾಸ್ಥಿತಿಯಲ್ಲಿ ಅಂದರೆ ಧ್ಯಾನಸ್ಥ ಸ್ಥಿತಿಯಲ್ಲಿ ಬೆಚ್ಚಗೆ ಕುಳಿತಿದ್ದವು. ಈಗಲೂ ಅದರ ಬಗೆಗೆ ಯೋಚಿಸಿದರೆ, ರಾತ್ರಿಯಿಡೀ ಶಿವರಾತ್ರಿಯ ಜಾಗರಣೆಯೇ ಆಗುತ್ತದೆ. ಲೈಬ್ರರಿಗೆ ಕೊಡುವ ಅವಧಿಯೂ ದಾಟಿ ಹೋಗಿತ್ತು. ಈಗ ಪುಕ್ಕಟೆ ಹಂಚಿದರೂ ಯಾರೂ ತೆಗೆದುಕೊಳ್ಳರು. ನಮ್ಮ ಹತ್ತಿರ ಪುಸ್ತಕ ಪ್ರತಿಗಳು ಕಡಿಮೆಯಿದ್ದಾಗಿನ ಸಮಸ್ಯೆಗಳೇ ಬೇರೆ. ಆಗ ಒಂದು ವಯಕ್ತಿಕ ಪ್ರತಿ ಉಳಿಸಿಕೊಳ್ಳುವ ಸಾಹಸಮಾಡಬೇಕಾಗುತ್ತದೆ. ಈಗ ಉಳಿದುಕೊಂಡಿರುವ ಪುಸ್ತಕಗಳ ಚಿಂತೆ.

ಅಂತೂ ನಾನು ಖುಷಿಖುಷಿಯಾಗಿ ಸಂಭ್ರಮಪಟ್ಟದ್ದೆಲ್ಲಾ ಹೊಳೆಯಲ್ಲಿ ಹಣಸೆಹಣ್ಣು ತೊಳೆದಂತಾಯ್ತು. 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ'ಯಾದರೆ ನನಗೆ ನನ್ನ ಪುಸ್ತಕ ಮಾರಾಟದ ಚಿಂತೆಯಾಗಿತ್ತು. 'ಇದು ಯಾರು ಬರೆದ ಕಥೆಯೋ ನನಗಾಗಿ' ಹಾಡನ್ನು ಹಾಡುತ್ತ ಕುಳಿತೆ–ಹಣೆಗೆ ಕೈ ಹಚ್ಚಿಕೊಂಡು. ■

ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.




"ಸೀಗೇಕಾಯಿ ಬೆಲೆ ಹೀಗೆ ಏರುತ್ತಿರುವಾಗ ನೀವು ಮೀಸೆ ಬೇರೆ ಬಿಟ್ಟಿದೀರಲ್ಲಾ! ಏನು ಹೇಳೋಣ?"

# ರಾಜಕುಮಾರಿ ಮತ್ತು ತಗಡಿನ ಡಬ್ಬಿ

ಮೂಲ ಕಥೆ : ಥರ್ಬರ್      ವಿಶುಯಲ್ಸ್ : ರಾಂಕಿ

ಒಂದೂರಲ್ಲಿ ಒಬ್ಬ ರಾಜ . ಯಥಾಪ್ರಕಾರ ರಾಜಕುಮಾರಿ ಅಪ್ರತಿಮ ಸುಂದರಿ. ( ಅಲ್ವೇ ಮತ್ತೆ ). ಗರ್ವ ಬೇರೆ ಅವಳಿಗೆ. ಅವಳ ಅಣ್ಣನ ಮದುವೇಲಿ ಮದುವಣಗಿತ್ತಿಯ ಮೇಲೆ ಎಲ್ರೂ ಅಕ್ಷತೆ ಎರಿಚಿದ್ರೆ ಇವ್ಳು ಮುತ್ತುಗಳನ್ನೇ ಎರಚಿದ್ಹಂತೆ.





ಆಗ್ನೇಯ ದೇಶದ ರಾಜಕುಮಾರ ಏರಿಬಂದ ಕುದುರೆ ಅರಬ್ಬೀ ಕಪ್ಪು ಕುದುರೆ. ಅವನ ಬಳಿ ಒಂದು ಚಿನ್ನದ ಒಡವೆ ಪೆಟ್ಟಿಗೆ ಇತ್ತು. ಅವನು ಮಿತಭಾಷಿ.
ತಗೊಳ್ಳಿ
ಬೊ ಪಸಂದ್ ಐತೆ !
ಪಾಪ ನೈರುತ್ಯ ದೇಶದ ರಾಜಕುಮಾರ ಬಡವ. ಭಯೋತ್ಪದಕರಿಗೆ ಪ್ರೊಟೆಕ್ಷನ್ ಮಣಿ ಕೊಟ್ಟೂ ಕೊಟ್ಟೂ ಅವನ ಬೊಕ್ಕಸ ಬರಿದಾಗಿತ್ತು. ಯಾವ್ದೋ ಹಳೆ ಕಾರಿನಲ್ಲಿ ಅವನು ಬಂದಿಳಿದ. ಅವನ ಕೈಯ್ಯಲ್ಲಿ ಒಂದು ತಗಡಿನ ಡಬ್ಬಿ.
ಮಾರಾಯ್ತಿ ನನ್ನ ಹತ್ರ ದುಡ್ಡು ಇಲ್ಲ. ಈ ಡಬ್ಬಿಯಲ್ಲಿ ಒಂದು ಬಾರಿ ಚಂದ ಕೆಂಪು ಗುಲಾಬಿ ಉಂಟು. ಅದು ನನ್ನ ಹೃದಯ ಪುಷ್ಪ..ಆಯ್ತಾ !
ಆಯ್ತು...ಗುಲಾಬಿ ಬಾರಿ ಚಂದ ಉಂಟು.
ರಾಜನ ಆಸ್ಥಾನದಲ್ಲಿ ಎಲ್ಲ ಸೇರಿದರು. ಎಲ್ಲಾ ಕೂತಿದ್ದಾಗ ರಾಜ ಕೇಳ್ದ.
ಏನಮ್ಮ ಯಾರನ್ನ ವರಿಸ್ತೀಯ ?
ಅಪ್ಪ, ನನ್ನ ಮದುವೆ ಅಂದ್ರೆ ಕೇಳ್ಬೇಕೆ . ಸುತ್ತ ಮುತ್ತ ರಾಜರೆಲ್ಲ ಬರ್ತಾರೆ . ಒಡವೆ, ಆಭರಣಗಳ ಸುರಿಮಳೆ. ಅವನ್ನೆಲ್ಲ ಜೋಪಾನ ಮಾಡುಕ್ಕೆ ಈ ಚಿನ್ನದ ಒಡವೆ ಪೆಟ್ಟಿಗೆ ಚೆನ್ನ. ಅಜ್ಞೇಯನೇ ನನ್ನ ದಿಕ್ಕು.
ಮಂಗಳ ಮಸಗಿತು ಅರಮನೆಗೆ. ಊರು ಸಿಂಗರವಾಯ್ತು.
ರಾಜಕುಮಾರಿ ಮದುವೆಯಾಗಿ ಗಂಡನ ಪ್ರಾಣ ಹಿಂಡುಕ್ಕೆ ಶುರು ಮಾಡಿದಳು.
ರಾಜಕುಮಾರ ಮೇಲ ನೋಟಕ್ಕೆ ಹೆಂಡ್ತಿ ತಾಳಕ್ಕೆ ಕುಣೀತಾ ಒಳಗೊಳಗೇ ಗೀತೆ ಓದಿಕೊಂಡು ಜೀವನ ಸಾರ್ಥಕ್ಯ ಪಡೆದ ಅಂತ ಪ್ರತೀತಿ.
ಶ್ರೀಮದ್ ಭಗವದ್ಗೀತೆ
ನೀತಿ :
ತಗಡಿನ ಡಬ್ಬಿ ಮೇಲೆ ಬೆಟ್ ಮಾಡಿದೋರೆಲ್ಲಾ ಚಿನ್ನಕ್ಕಿಂತ ತಗಡೇ ನನಗೆ ಇಷ್ಟ ಅಂತ ನೂರು ಬಾರಿ ಬರೀರಿ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ಕೆಲಸ ಮಾಡಿ ಹೆಸರು ಮಾಡಬೇಕು. ಇಲ್ಲ ಹೆಸರು ಹೇಳಿದರೆ ಕೆಲಸ ಆಗಬೇಕು. ಆ ತರಹ ಬೆಳೆಯಬೇಕು.
- ಖಾರಕ್ಕೆ ಮತ್ತು ಅಹಂಕಾರಕ್ಕೆ ಇರುವ ವ್ಯತ್ಯಾಸ: ಖಾರಕ್ಕೆ ನಾವು ನೀರು ಕುಡೀತೀವಿ. ಅಹಂಕಾರಕ್ಕೆ ಕಾಲ ನೀರು ಕುಡಿಸುತ್ತದೆ.
- ನೊಬಡಿ ಈಸ್ ಈಕ್ವಲ್ ಅನಲೆಸ್ ಎವರಿಬಡಿ ಈಸ್ ಈಕ್ವಲ್.
- ವೈವಿಧ್ಯತೆ: ಎಲ್ಲರೂ ವೈಯಕ್ತಿಕವಾಗಿ ಒಟ್ಟಿಗೇ ಯೋಚಿಸುವುದು.
- ಹಾಡಲು ಬಯಸಿದವರಿಗೆ ಹಾಡು ಖಂಡಿತ ಸಿಗುತ್ತದೆ.
- ಎ ಬಡ್ಜೆಟ್ ಟೆಲ್ಸ್ ವಾಟ್ ವಿ ಕೆನಾಟ್ ಅಫೋರ್ಡ್ ಬಟ್ ಇಟ್ ಡಸ್ ನಾಟ್ ಕೀಪ್ ಅಸ್ ಫ್ರಂ ಬಯಿಂಗ್ ಇಟ್.
- ಇನ್ನೊಬ್ಬರಿಗಾಗಿ ನೀವು ದೀಪ ಹಚ್ಚಿದರೂ ಅದು ನಿಮ್ಮ ಮಾರ್ಗವನ್ನೂ ಬೆಳಗಿಸುತ್ತದೆ.
- ನಥಿಂಗ್ ಟೀಚಸ್ ಅಸ್ ಬೆಟರ್ ದ್ಯಾನ್ ಅವರ್ ಓನ್ ಮಿಸ್ಟೇಕ್ಸ್.
- ಜ್ಞಾನಿ ಆಗದಿದ್ದರೂ ಪರವಾಗಿಲ್ಲ ಕೆಲವೊಮ್ಮೆ ಮೌನವಾಗಿರುವುದೇ ಉತ್ತಮ.
- ಭಾರ ನಿಮ್ಮನ್ನು ಆಯಾಸಗೊಳಿಸದು. ಅದನ್ನು ನೀವು ಹೇಗೆ ಕೊಂಡೊಯ್ಯುತ್ತೀರಿ ಎಂಬುದನ್ನು ಅದು ಅವಲಂಬಿಸಿರುತ್ತದೆ.
- ಡೆತ್ ಈಸ್ ನಾಟ್ ದಿ ಬಿಗ್ಗೆಸ್ಟ್ ಲಾಸ್ ಇನ್ ಲೈಫ್. ದಿ ಬಿಗ್ಗೆಸ್ಟ್ ಲಾಸ್ ಈಸ್ ವೆನ್ ರಿಲೇಷನಷಿಪ್ಸ್ ಡೈ ಅಮಾಂಗ್ ಅಸ್ ವೆನ್ ವಿ ಅರ್ ಸ್ಟಿಲ್ ಅಲೈವ್.
- ಆಹಾರ ಸಿಗುವ ತನಕ ಹಸಿವೇ ಆಗದಿದ್ದರೆ ಎಷ್ಟು ಚೆನ್ನ!
- ನಾವು ವೃದ್ಧರಾಗಬಾರದು, ಹಿರಿಯರಾಗಬೇಕು.
- ಕೋಪ ಬಂದಾಗ ಅಡುಗೆ ಮಾಡದೆ ಮಲಗುವವಳು ಹೆಂಡತಿ. ಕೋಪ ಬಂದಾಗ ಅಡುಗೆ ಮಾಡಿ ಊಟ ಮಾಡದೆ ಮಲಗುವವಳು ತಾಯಿ.
- ಇಟ್ ಈಸ್ ವೆರಿ ಈಸಿ ಟು ಗಿವ್ ಅನ್ ಎಕ್ಸಾಂಪಲ್. ಬಟ್ ಇಟ್ ಈಸ್ ವೆರಿ ಡಿಫಿಕಲ್ಟ್ ಟು ಬಿ ಅನ್ ಎಕ್ಸಾಂಪಲ್.

■

# ನನ್ನ ಪ್ರಕಾರ ಆದರ್ಶ ದಂಪತಿಗಳು ಹೀಗಿರಬೇಕು

ಸುಮನಾ

ಅಯ್ಯಪ್ಪ, ಈ ಶೀರ್ಷಿಕೆ ಈಗಿನ ದಂಪತಿಗಳಿಗೆ ಹೊಂದುತ್ತದೆಯೇ ಎಂಬುದೇ ಮಹಾ ಯಕ್ಷ ಪ್ರಶ್ನೆ.

ಇರಲಿ.. ಅಮ್ಮನ ಪ್ರಶ್ನೆ ಎಂದಿನಂತೆ...

"ಅದ್ಯಾವಾಗ ಮದ್ವೆ ಮಾಡ್ಕೋತೀಯಪ್ಪಾ, ಈಗ ಮಗಳು ಗಂಡನ ಮನೆ ಸೇರಿದ್ದಾಯ್ತು..ನಿನ್ನ ಬೇಕು,  ಬೇಡ ವಿಚಾರ್ಸೋಕೆ ಒಂದು ಹೆಣ್ಣು ದಿಕ್ಕು ಬೇಡ್ವೇನೋ. ಗುರು,. ಅಂತ ಅಮ್ಮನ ವರಾತ.. ಶುರುವಾದಾಗ ಅಯ್ಯೋ.. ತಾಳಮ್ಮ, ಈಗಿನ ಮದ್ವೆಗಳು ಒಂದು ಘಂಟೆ ಕಾಲ ಬಾಳಿದ್ರೂ ಹೆಚ್ಚು ಅನ್ನೋ ಹಾಗೆ ಆಗಿದೆ.. ಅಂದ ಮಗನ ಮಾತಿಗೆ ಛೆ, ಛೆ, ಅದೇನ್ಮಾತೂ ಅಂತ ಆಡ್ತೀಯೋ.. ಮೊನ್ನೆ ತಾನೇ ಒಂದು ವೀಡಿಯೋ ತೋರ್ಸಿದ್ರು ಪಕ್ಕದ್ಮನೆ ಪಾರಮ್ಮ, ಯಾರೋ ಪುಣ್ಯಾತ್ಮ ದಂಪತಿಗಳು..ನಾಲ್ಕನೇ ಸರ್ತಿ ಮದ್ವೆ ಆದ್ರಂತೆ..ಹಾಗಂದ ತಕ್ಷಣ, ನೋಡ್ದ್ಯಾ, ನೀನು ಅಂದ್ಹಾಗೇ ಆಯ್ತು ಅಂತ ಖುಷಿಪಡ್ಬೇಡ..ಆ ದಂಪತಿಗಳು,ಆ ಗಂಡ ಹೆಂಡತಿಯ ಅನ್ಯೋನ್ಯ ದಾಂಪತ್ಯದ ಆದರ್ಶದ ಬಗ್ಗೆ ಇಲ್ಕೇಳು..

ಆ ಹೆಂಡತಿಗೆ ಹದಿನೇಳನೇ ವರ್ಷಕ್ಕೆ ಮದ್ವೆ ಆಗಿ, ಅವರ ಪತಿಯ ಅರವತ್ತನೇ ಷಷ್ಠಿಪೂರ್ತಿ ವರ್ಷದಲ್ಲಿ, ಎಂಭತ್ತನೇ ವರ್ಷದಲ್ಲಿ, ಈಗ ಶತಾಯುಷಿಯಾದ ಸಂದರ್ಭದಲ್ಲಿ ಮತ್ತೆ ಪತ್ನಿಗೆ ತಾಳಿಕಟ್ಟಿದಾರೆ ಎಷ್ಟು ಸಂತೋಷದ ವಿಷಯ ಅಲ್ವೇನೋ?? ಆದರ್ಶ ದಂಪತಿಗಳು ಅಂದ್ರೆ ಹೀಗಿರಬೇಕು ಅಲ್ವೇನೋ..ಅಂತ ಅಮ್ಮ ಅಂದಾಗ ಹೌದು, ಘಂಟೆ ಹೊಡೆದಂತೆ ನಿಜವಾದ ಮಾತು ಅನಿಸಿತು..

ಆದ್ರೂ ಮುಂದುವರೆದು ಗುರು ಹೇಳಿದ, ನೋಡಮ್ಮ ನೀನು ಹೇಳಿದ್ದೂ ಸರಿ, ಆದ್ರೆ ಇಲ್ನೋಡು..ಈ ಕೇಸು.. ರಿಜಿಸ್ಟರ್ ಆಫೀಸ್ನಲ್ಲಿ ಹಾರ ಬದ್ಲಾಯಿಸ್ಕೊಂಡು, ತಾಳಿ ಕಟ್ಟಿ ಮೂರು ನಿಮಿಷಾನೂ ಆಗಿರ್ಲಿಲ್ಲ್ವಂತೆ ..ಅದೇನೋ ಗಂಡ ಜೋರಾಗಿ ಸಿಡುಕಿದ ಅಂತ ಆಗ್ಲೇ ಡೈವೋರ್ಸ್ ಗೆ ಅಪ್ಲೈ ಮಾಡಿದ್ಲಂತೆ ಆ ಹುಡುಗಿ ಇದಕ್ಕೇನ್ಹೇಳ್ತೀ.??

ಗಂಡಕಟ್ಟಿದ ತಾಳಿಯ ಮೂರು ಗಂಟು ಮೂರು ನಿಮಿಷಾನೂ ಬಾಳಲಿಲ್ಲ ಅಂದಾಗ ಅಮ್ಮ ಲಿಟ್ರಲಿ ಶಾಕ್ ಆದ್ರು..

ಏನೋಪ್ಪಾ.. ಈಗಿನ ಮದ್ವೆಗಳು.. ಸಾವಿರ  ವೋಲ್ಟ್ ಬಲ್ಬ್‌ನ ಶಾಕ್ ಕೊಡೋದಂತೂ ನಿಜ..ಅದ್ಸರಿ ನಿನ್ನ ಅಭಿಪ್ರಾಯ ಹೇಳು, ನಿನ್ನ ವಿಚಾರದಲ್ಲಿ ಆದರ್ಶ ದಂಪತಿಗಳು ಅಂದ್ರೆ ಹೇಗಿರ್ಬೇಕು..ಅಂದ್ರು ಅಮ್ಮ..

ಅಮ್ಮ, ನೋಡು ನಿಮ್ಮ ಕಾಲದ ಮದ್ವೆ, ದಾಂಪತ್ಯ, ಮಕ್ಕಳು, ಮದುವೆ, ಮೊಮ್ಮಕ್ಕಳು, ಮರಿ ಮಕ್ಕಳು ಕಾನ್ಸೆಪ್ಟ್ ಈಗ ಚೇಂಜ್ ಆಗಿದೆ..ಹಾಗಂತ ನಾನು ಬದಲಾಗೋಲ್ಲ, ನನಗೂ ಆ ಹಿಂದಿನ ಆಚರಣೆ, ಸಂಪ್ರದಾಯದಲ್ಲಿ ಸಂಪೂರ್ಣ ನಂಬಿಕೆ ಇದೆ. ಆದರೆ ಈ ಮುಂದುವರಿದ ಕಾಲಕ್ಕೂ ಹೊಂದಿಕೊಳ್ಳಲೇ ಬೇಕಾಗಿದೆ.

ಎಲ್ಲ ನಮ್ಮ, ನಮ್ಮ ಮನಸ್ಸಿನ ಪರಿಸ್ಥಿತಿಯನ್ನು ಅವಲಂಬಿಸಿದೆ. ನಮ್ಮ ಸಂಸ್ಕಾರದ ಆಲದ ಮರದ ನೆರಳಿನಲ್ಲಿ ನಾವು ಆಶ್ರಯ ಪಡೆಯಲೇಬೇಕು.ಯಾವುದೇ ಕಾರಣಕ್ಕೂ ಬೇರನ್ನು ಅಗೆದು ಬುಡವನ್ನು ಕಿಂಚಿತ್ತೂ ಅಲುಗಾಡಿಸ ಬಾರದು.

ಮೊನ್ನೆ ನಾನು, ನನ್ನ ಫ್ರೆಂಡ್ ಮಾತಾಡ್ಕೊಂಡ್ವಿ..ಮದ್ವೆ ಆಗಿ ಬರೋ ಹುಡುಗಿ..ಜೊತೆ ನಮ್ಮಿಮ್ಮ ಸಂಸಾರದಲ್ಲಿ.. ಸಂ–ಸಾರದ," ಉತ್ತಮ  ಸಾರ" ಸಾರುವಂತಿರಬೇಕು, ಈ ಜಗತ್ತೇ ನಮ್ಮ ಆದರ್ಶ ದಾಂಪತ್ಯದ ಬಗ್ಗೆ ಹಾಡಿ ಹೊಗಳಬೇಕು, ನಮ್ಮ ವೀಡಿಯೋಗಳು ವೈರಲ್ ಆಗಿ ವೀಕ್ಷಣೆಯ ಫಾಲೋವರ್ಸ್ ಕೋಟಿ, ಶತಕೋಟಿ ದಾಟಬೇಕು.. ಸಂಸಾರದಲ್ಲಿ ಇಬ್ರೂ ಪ್ರತಿ ಒಂದರಲ್ಲೂ ಸಮಪಾಲು  ಸಮಬಾಳು ಇರ್ಬೇಕು..ಅಂತ ಹೇಳ್ತಿರೋ ಹಾಗೆ ಗೆಳೆಯ ಗಂಗು ಬಂದ..



ಓ...ಬಾರಯ್ಯಾ, ನಿನ್ನ ಬಗ್ಗೇನೇ ಮಾತಾಡ್ತಿದ್ದೆ, ನೀನು ಬರ್ತೀಯಾ ಅಂತ ಅಮ್ಮನ ಕೈರುಚಿ ಮೈಸೂರು ಪಾಕ್ ಮಾಡ್ಸಿದೀನಿ, ನಾನು ನಿನಗಿಷ್ಟವಾದ ಚೌ ಚೌ ಬಾತ್ ಮಾಡಿದೀನಿ. ಮೊನ್ನೆ ನಾನು, ನೀನು ಇಬ್ರೂ "ಆದರ್ಶ ದಂಪತಿ"ಗಳು ಅಂದ್ರೆ ಹೇಗಿರಬೇಕು ಅಂತ ಮಾತಾಡ್ಕೊಂಡ್ವಲ್ಲ..ಅದ್ನೇ ಅಮ್ಮನ ಹತ್ತಿರ ಹೇಳ್ತಿದ್ದೆ..ಬಾ..ಕೂತ್ಕೋ ಕಂಟಿನ್ಯೂ ಮಾಡ್ತೀನಿ..ಹ್ಞಾ..

ತಾಳು, ನಿಂಗೆ ಅದರಕ್, ಅಂದ್ರೆ ಶುಂಠಿ–ಟೀ ಇಷ್ಟ ಅಲ್ವಾ..ಹೊರಗೆ ಛಳಿ ವಾತಾವರಣ ಇದ್ಯಲ್ಲ ಟೀ..ಮಾಡ್ಕೊಂಡು ಬರ್ತೀನಿ ಅಂದಾಗ ಅಮ್ಮ, ಏ..ಅದೇನೋ, ನಾನೇ ಮಾಡ್ಕೋಡ್ತೀನಿ ತಾಳು ಅಂದ್ರು..

ನೋಡು, ನೋಡಮ್ಮ ಇಲ್ಲೇ ನನ್ನ ಆದರ್ಶ ದಂಪತಿಗಳ ಫಸ್ಟ್ ಪಾಯಿಂಟು. ಶುರುವಾಗೋದು. ಈಗ ನನ್ನ ಮದ್ವೆ ಆದ್ಮೇಲೆ ಪಾಪ, ನನ್ಹೆಂಡ್ತಿ ಫ್ರೆಂಡು ಯಾರೋ ಬಂದಿರ್ತಾರೆ ಆಗ ನಾನು ಅವರಿಗೆ ಚಾ..ಮಾಡ್ಕೊಡೋದು ನನ್ನ ಆದರ್ಶ ಅಂತ ನಂಗೆ ಅನ್ಸುತ್ತೆ..

ಯಾಕೆ ಅಂದ್ರೆ ನನ್ನ ಫ್ರೆಂಡ್ಸ್ ಬಂದಾಗ್ಲೂ ಅವಳು ಶುಂಠಿ ಚಾಯ್ ಮಾಡೇ ಮಾಡ್ತಾಳೆ ಅಲ್ವಾ ಅಂದಾಗ..

ಗಂಗು ಅಂದ..ಏಯ್ ಅದೆಲ್ಲಾ ಈಗ ಇಲ್ಲಮ್ಮಾ ಸ್ವಲ್ಪ ಈಗಿನ ಟೈಂಗೆ ಬಾರಯ್ಯ ಶುಧ್ಧ ಶುಂಠಿ.."ಮಾಡೋವ್ರನ್ನ ಕಂಡ್ರೆ ನೋಡ್ನನ್ ಸಿರಿಯಾ ಅನ್ನೋ ಹಾಗೇ, ಬಗ್ಗಿದಷ್ಟೂ ಬೆನ್ನಿಗೆ ಬರೆ ಎಳೆಯೋದು, ಬಹದ್ದೂರ್ ನನ್ನ ಗಂಡ ಅಂತ ನಾಟಕದ ಕಿರೀಟ ತೊಡಿಸೋದು..

ಈಗ ನಡೀತಿರೋ ವಿಚಾರ ಕಣಪ್ಪಾ..!!

ಪಾಪ, ನೀನು ಅಂದ್ಕೊಂಡಿರೋ ಹಾಗೆ ನಡೆದ್ರೆ ನಂಗೂ ಸಂತೋಷಾನೆ..ಕೆಲವು

ವಿಷಯದಲ್ಲಿ ನಂಗೂ,ನಿಂಗೂ ಅಭಿಪ್ರಾಯಾನೇ ಬೇರೆ ಹ್ನೂ, ಆಮೇಲೆ..?? ಹೇಳು ಅಂದ ಗೆಳೆಯ..

ಮನೆ ಕೆಲಸದಲ್ಲಿ ಇಬ್ರಿಗೂ ಈಕ್ವಲ್ ಶೇರ್.. ನಾನೂ ಅವಳೂ ಅರ್ಧ ನಾರೀಶ್ವರರಂತೆ, ಅಲ್ದೆ ನಾನು ಅವಳ ಅರ್ಧಾಂಗ, ಅವಳು ನನ್ನ ಅರ್ಧಾಂಗಿ..ಅಂತ ಕಣ್ಣುಮುಚ್ಚಿ ಕನಸು ಕಂಡವನನ್ನು ಗೆಳೆಯ ಭುಜ ತಟ್ಟುತ್ತ ಎಚ್ಚರಿಸಿದ..

ಅಲ್ಲಯ್ಯಾ ನಿನ್ನ ಅರ್ಧಾಂಗಿ ಹೇಳಿದ ಕೆಲಸ ಅರ್ಧ ಆದ್ರೆ ನಿನ್ನ ಪರಿಸ್ಥಿತಿ ಮಾತ್ರ ಊಹಿಸಲ ಸಾಧ್ಯ.. ಕಣೋ, ಪಾಪ, ನಿನ್ನ ಹರಿದ ಅಂಗಿ ಜೊತೆ ನೀನು ಅರ್ಧಾಂಗ ಆಗೋದು ಅಂತ ಪಕಪಕ ನಗಲಾರಂಭಿಸಿದ..

ಜೊತೆಗೆ ಅಮ್ಮನೂ ನಕ್ಕರು..ಏಯ್ ಸುಮ್ನಿರೋ..ಹಾಗೆಲ್ಲ ಆಗೋಕೆ ನಾನು ಬಿಡೋದೇ ಇಲ್ಲ..

ನಾನು ಮೊದ್ಲೇ ಎಲ್ಲಾ ಪಾಯಿಂಟು ಹಾಕಿ ಅವಳು ಒಪ್ಪಿದ್ರೇನೇ ಮುಂದಿನ ಮಾತು ಅಂತೀನಿ, ಹಾಗೇ ಅವಳ ದೃಷ್ಟಿಕೋನದ ವಿಚಾರಕ್ಕೂ ಪ್ರಾಮುಖ್ಯತೆ ಕೊಡಬೇಕು.. ಇಬ್ರಲ್ಲೂ ಯಾವುದೇ ರೀತಿ ಅಹಂಕಾರವೂ ಇರಬಾರದು..ಗಡಿಯಾರದ ಮುಳ್ಳಿನಂತೆ ಒಂದರ, ಹಿಂದೆ ನಡೆಯುತ್ತಲೇ ಇರಬೇಕು..ಒಬ್ಬರಿಗೊಬ್ಬರ ನೆರಳಾಗಿರಬೇಕು ..ಆದ್ರೆ ಒಬ್ಬರಿಗೊಬ್ರು ಮುಳ್ಳಾಗಬಾರ್ದು ಅಂತ ಅವನ ಜೋಕಿಗೆ ಅವನೇ ನಕ್ಕ..

ಮನೆ, ಮನಸ್ಸು ಗೆಲ್ಲುವೆಡೆಗೆ ನಮ್ಮ ಸತತ ಪ್ರಯತ್ನ ಇರಲೇಬೇಕು ಯಾವುದೇ ಕಾರಣಕ್ಕೂ ಜಗಳ, ಕೋಪ, ತಾಪ ಇರಬಾರದು ಅಂತ ರೂಲ್ಸ್ ಮಾಡ್ತೀನಿ. ಕೋರ್ಟು, ಕಟಕಟೆ ಅನ್ನೋ ಮಾತು ಕನಸಿನಲ್ಲೂ ಬರಬಾರದು.. ಹಾಗೇ ನಾನೂ ಇರ್ತೀನಿ ಅಂತ ಮನೆದೇವ್ರ ಮೇಲೆ ಆಣೆ, ಶತಾಯ ಗತಾಯ ಪ್ರಮಾಣ ಮಾಡ್ತೀನಿ..

"ರಸವೇ ಜನನ,ವಿರಸವೇ ಮರಣ, ಸಮರಸವೇ ಜೀವನ" ಅಂತ ವರಕವಿ ಡಾ.ದ.ರಾ.ಬೇಂದ್ರೆಯವರು ಬರೆದ ಸುಂದರ ಸಾಲು ಕೇಳಿಲ್ವಾ.. ಒಬ್ಬರಿಗೊಬ್ಬರ ಕಷ್ಟ, ಸುಖ ಹಂಚಿಕೊಂಡರೆ ಇದಕ್ಕಿಂತ ಸುಖೀ ಜೀವನ ಮತ್ತೆಲ್ಲಿ ಸಿಗುತ್ತೆ??

ನಾವು ಒಳ್ಳೆಯ ಜೀವನ ನಡೆಸಿ, ಸಮಾಜದಲ್ಲಿ ಆದರ್ಶ ಪ್ರಾಯರಾಗಬೇಕು,ನಮ್ಮ ಜೀವನ ಮತ್ತೊಬ್ಬರಿಗೆ ಅನುಕರಣೀಯ ವಾಗಿರಬೇಕು..ಅನುರೂಪ,ಅನ್ಯೋನ್ಯ ದಾಂಪತ್ಯ,ಶ್ರೀ ಸೀತಾರಾಮರಂತೆ ಇರಬೇಕು ಅಂತ ನನ್ನ ಮನದಾಳದ ಆಸೆ..ಅಂದಾಗ..

ಓ..ಹೋ..ಹೋ..ತಾಳಪ್ಪ ಇದೆಲ್ಲಾ ಯಾವುದಾದ್ರೂ "ಆದರ್ಶ ದಂಪತಿ.." ವೇದಿಕೆಯಲ್ಲಿ ಹೇಳೋಕೆ ಮಾತ್ರ ಸರಿ..ನಿಜವಾಗಲೂ ನಿನ್ನ ಮನಸ್ನಲ್ಲಿ ಏನಿದೆ ಅದನ್ನು ಹೇಳು..,ಹೋಗ್ಲಿ ಯಾರನ್ನಾದ್ರೂ ಇಷ್ಟ ಪಟ್ಟಿದೀಯಾ,ಅದಾದ್ರೂ ಹೇಳು ಅಂದ್ರು ಅಮ್ಮ, ಅಷ್ಟೇ ಅಲ್ದೆ ಗೆಳೆಯ ಆಗಲೇ ಹೊಸ ಬಾಂಬ್ ಸಿಡಿಸಿದ, ಅಯ್ಯೋ ಅಮ್ಮ, ಅದೇನ್ಹೇಳ್ತೀರಿ.. ಆಗಲೇ ಸುಮಾರು ವರ್ಷಗಳಿಂದ ಈ ಲಿವ್ ಇನ್ ರಿಲೇಷನ್ ಅಂತ ಬಂದಿದ್ಯಲ್ಲಾ.. ಅದ್ರಷ್ಟು ಘೋರ ಮತ್ತೊಂದಿಲ್ಲಮ್ಮ..ಅಂದ..

ಹ್ಞಾ..ಏನೂ ಹಾಗಂದ್ರೇ?? ಅಂತ ಗಾಭರಿಯಾದ ಅಮ್ಮನನ್ನು ನೋಡುತ್ತಾ.. .. ನೋಡೀ, ಅಮ್ಮ ಗಂಡು, ಹೆಣ್ಣು ಮದುವೆಗೆ ಮುಂಚೆ ಪ್ರಯೋಗಾತ್ಮಕವಾಗಿ.. ಒಟ್ಟಿಗೇ ಇದ್ದು, ಇಷ್ಟ ಆದ್ರೆ ಆಮೇಲೆ ಮಾಡ್ಕೋಬಹುದು ಅನ್ನೋ ಕಾನ್ಸೆಪ್ಟ್ ಈಗ ಭಾಳ ನಡೀತಿದೆ, ಗಂಡು, ಹೆಣ್ಣು ಅಂತಾನೇ ಆಗಬೇಕು ಅಂತಾನೂ ಇಲ್ಲ ಅಮ್ಮ, ಅಂತ ಗಂಗು ಅಂದಾಗ ಶಾಕ್ ಮೇಲೆ ಶಾಕ್ ಅಮ್ಮಂಗೆ.. ಏನೋಪ್ಪಾ ಇದೆಲ್ಲಾ ನಂಬಲಾರದ

ಸತ್ಯ ಅನ್ನುವಂತೆ ಇದ್ಯಲ್ಲಾ, ಆದ್ರೂ ಕಲಿಗಾಲ ಏನೇನು ಕಲೀಬಾರದ್ದನ್ನು ಕಲಿಸ್ತಿದೆಯೋ..ಆ ಕಲಿಯೇ ಬಲ್ಲ.

ಅಂದ್ರು, ಮಗ ಅಂದ ಹೌದಮ್ಮ ಈಗ ಕಾಲಾಯ ತಸ್ಮೈ ನಮಃ ಅನ್ನದೇ ವಿಧಿಯಿಲ್ಲ..ಅದು ಸರಿ ಕಣಪ್ಪಾ, ನಿನ್ನ ಫ್ರೆಂಡ್ ಹೇಳಿದ ಹಾಗೆ ಆಗದೆ ಸಧ್ಯ ನೀನು ಸರಿಯಾದ ,ತಿಳಿದ, ಸತ್ಕುಲ ಪ್ರಸೂತೆ ಹೆಣ್ಣನ್ನು ಹುಡುಕಿ ಮದುವೆ ಮಾಡ್ಕೋಬೇಕಪ್ಪಾ ಅಂತ ಕಂಗಾಲಾಗಿ,ಗಾಬರಿಯಾಗಿ ಹೇಳಿದರು.

ಅದೇನೇ ಆಗಲಿ ಅಮ್ಮ ನಾನು ಮಾತ್ರ.."ಹೆಣ್ಣಿನ "ಜೊತೇನೇ ಮಾತ್ರವೇ ಮದ್ವೆ ಆಗೋದು, ನೀನು ವರಿ ಮಾಡ್ಬೇಡ ಅಂತ ನಗೆ ಚಟಾಕಿ ಹಾರಿಸಿದ. ಅಷ್ಟಲ್ದೆ ಅವನ, ಅವಳ ದಿನಚರಿ ಬಗ್ಗೆ ಅವನ ಕನಸು, ಆದರ್ಶ ವಿಚಾರ ಮುಂದುವರಿಸಿದ..

ಇದು ಈಗಿನ ಕಾಲಕ್ಕೆ ಅಪವಾದದಂತಿದೆ, ಆದ್ರೆ ನಂಗೆ ನಮ್ಮ ಸಂಪ್ರದಾಯ, ಸಂಸ್ಕೃತಿಗಳ ಬಗ್ಗೆ ಬಹಳ ಹೆಮ್ಮೆಯಿದೆ..

ಆದಷ್ಟೂ ಅದನ್ನು ಕಾಪಾಡಿಕೊಳ್ಳುವ ಎಡೆಯಲ್ಲಿ ನನ್ನ ಪ್ರಯತ್ನ ಶತಪ್ರತಿಶತ ಇರುತ್ತೆ.. ಈಗ ಕೇಳಿ..

ಬೆಳಿಗ್ಗೆ ಅವಳು ಏಳೋಕೆ ಮೊದ್ಲೇ ನಾನು ಎದ್ದು, ಬಾಗಿಲಿಗೆ ನೀರು ಹಾಕಿ, ರಂಗೋಲಿ ಬಿಡಿಸಿ, ಸ್ನಾನಾದಿಗಳನ್ನು ಮುಗಿಸಿ ದೇವರಿಗೆ ದೀಪ ಬೆಳಗಿಸಿ, ಬಿಸಿ ಬಿಸಿ ಚಹಾ ಮಾಡುವಾಗ ಅವಳಿಗೆ ಸಿಹಿ ಮುತ್ತು ಕೊಟ್ಟು ಎಬ್ಬಿಸುತ್ತೇನೆ, ಅಂದಾಗ ಗೆಳೆಯ ಅದ್ಯಾಕೆ ಚಹಾ ಪೂರ್ತಿ ಮಾಡೋಲ್ವಾ ಅಂದ.. ಇಲ್ಲ, ಬೆಳಗಿನ ನನ್ನ ಕೆಲಸ..ಅಷ್ಟೇ,ಹಾಲು ತರೋದು ಅವಳ ಕೆಲಸ, ಅದಕ್ಕೇ ಹಾಲು ತರಲು ಅವಳ್ನ ಎಬ್ಬಿಸ್ತೀನಿ.. ಮುಂದಿನದು ಅವಳ ಕೆಲಸ..ಇನ್ನು ಅವಳು ನಿದ್ದೆ ಆಗಿಲ್ಲಾರೀ ಅಂದ್ರೆ..ಇನ್ನೇನು ಮಾಡೋದು ಹಾಲು ತರೋ ಕೆಲ್ಸಾನೂ ನಂದೇ ಆಗುತ್ತೆ.. ಇಲ್ದಿದ್ರೆ ವೈಸ್ ವರ್ಸಾ..ನಾನು ಹಾಲು,ಹಣ್ಣು ತರಕಾರಿ ತರ್ತೀನಿ..ಬೆಳಗಿನ ಕೆಲಸ ಅವಳಿಗೆ, ನಮ್ಮ ಸಂಸ್ಕಾರ, ಸಂಪ್ರದಾಯ ಮುಂದುವರಿಸಿಕೊಂಡು ಹೋಗಲೇಬೇಕೆಂಬ ಉತ್ತಮ ಗುರಿ ನನ್ನದು ಕಣೋ.

ಅಯ್ಯೋ. ಕರ್ಮ..ಕಣಯ್ಯ ಇನ್ನು ಅವಳು ಎದ್ದು ನಿಂಗೆ ಚಾ ಮಾಡ್ಕೊಡೋದ್ರಲ್ಲಿ ಸಂಜೆಯಾದ್ರೂ ಆಶ್ಚರ್ಯ ವೇನಿರೋಲ್ಲ,ಗುರುವಿನ ಗುರಿ ತಪ್ಪಿದ್ರೆ ?? ಅಂತ ಗೆಳೆಯ ತಮಾಷಿಸಿದ..

ಇಲ್ವೋ..ಆಫೀಸಿಗೆ ಹೋಗೋದೂ ಬೇಡ್ವಾ?? ಚಾ ಆದ್ಮೇಲೆ ತಿಂಡಿ,ಅಡಿಗೆ, ಬಾಕ್ಸ್ ಪ್ಯಾಕಿಂಗ್ ಎಲ್ಲ ಕೆಲಸದಲ್ಲೂ ಫಿಫ್ಟಿ–ಫಿಫ್ಟಿ..ಶೇರಿಂಗ್.. ವಾರ ಭರ್ತಿ ಈ ಪಾಟಿ ಕೆಲಸ, ವೀಕ್ ಎಂಡ್ ಹೊತ್ತಿಗೆ ವೀಕ್ ಆಗಿರ್ತೀವಿ..ಅದಕ್ಕೇ ಆನ್ಲೈನ್ ಫುಡ್ ಡೆಲಿವರಿಗೆ ಆರ್ಡರು..ಇದ್ರಲ್ಲೂ ನನ್ನ ಆದರ್ಶ..ಏನಪ್ಪಾ ಅಂದ್ರೆ..

ಅವಳಿಗೆ ಇಷ್ಟ ವಾದ ತಿಂಡಿ,ಅಡಿಗೆ ಅವಳಿಗೆ ಗೊತ್ತಿಲ್ದೆ ಆರ್ಡರ್ ಮಾಡಿ ಅವಳಿಗೆ ಸರ್ಪ್ರೈಸ್ ಕೊಡೋದು..ಅವಳೂ ಹಾಗೇ ಮಾಡ್ಲಿ ಅಂತ ನಿರೀಕ್ಷೆ ಮಾಡ್ತೀನಿ..ಒಂದು ವೇಳೆ ಹಾಗಾಗ್ದಿದ್ರೂ, ನಾನು ಬೇಜಾರು ಮಾಡ್ಕೊಳಲ್ಲ ಕಣೋ..ಹಾಗಾದಾಗ ಅವಳು ನನಗೆ ಕೊಡೋ ಪ್ರೀತಿ ಮತ್ತಷ್ಟು ಹೆಚ್ಚಾಗುವ ಸಂಭವವೇ ಹೆಚ್ಚು ಅಲ್ವೇನೋ.."ಎರಡು ದೇಹ ಒಂದು ಜೀವ"ವಾದಾಗ ಸಿಗುವ ಆನಂದದ ಅನುಭೂತಿಯೇ ಬೇರೆ..ಇನ್ನು ನನ್ನ, ಅವಳ ಮೊಬೈಲ್ ವಿಷಯವೆಲ್ಲವೂ ತೆರೆದ ಪುಸ್ತಕ ದಂತೆ ಇರಬೇಕು. ಬ್ಯಾಂಕ್ ಅಕೌಂಟು, ಹಣದ ವಹಿವಾಟು ಎಲ್ಲವೂ ನಿಚ್ಚಳವಾಗಿರಬೇಕು. ಪ್ರತಿ ವಿಷಯದಲ್ಲೂ ಇಬ್ಬರೂ ಸೇರಿ,

ಚರ್ಚೆ ನಡೆಸಿ ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬರಬೇಕು. ಏನೇ ಅಭಿಪ್ರಾಯ ಭೇದಗಳಿದ್ರೂ ಒಟ್ಟಿಗೇ ಕುಳಿತು ನಿಧಾನವಾಗಿ, ಪರಾಮರ್ಶಿಸಿ ಪರಿಹಾರ ಕಂಡುಕೊಳ್ಳಬೇಕು.

ಆಮೇಲೆ ಇಬ್ರೂ ಯಾವ್ದಾದ್ರೂ ಮದ್ವೇ,ಸಭೆ, ಸಮಾರಂಭ ಗಳಿಗೆ ಹೋದಾಗ ಒಂದೇ ಕಲರ್ ಮ್ಯಾಚಿಂಗ್ ಇರೋ ಡ್ರೆಸ್ ಹಾಕ್ಕೋಬೇಕೂಂತ ಒಮ್ಮತ ಅಭಿಪ್ರಾಯ ಬರೋ ಹಾಗೆ ಮಾತುಕತೆ ಮಾಡ್ಕೋತೀವಿ.. ಅಂದಾಗ ಅಮ್ಮ ಅಂದ್ರು, ಓ..ಹೋ..ಅವಳು ಕಾಂಜೀವರಂ ಸಿಲ್ಕ್ ಸೀರೆಬಿಟ್ಟು ನಿನ್ನ ಕಾಟನ್ ಶರ್ಟ್ ಮ್ಯಾಚಿಂಗ್ ಮಾಡ್ಕೋತಾಳೆ ನೋಡು,ಇದೆಲ್ಲಾ ತಿರುಕನ ಕನಸು ಕಣೋ ಅಂದಾಗ ಗೆಳೆಯ ಕೂಡಾ ಹೌದೆನ್ನುವಂತೆ ತಲೆ ಆಡಿಸಿದ.. ಏ..ಅದ್ಯಾಕೇ?? ನಾನು ಅವಳ ಸೀರೆ ಬಣ್ಣದ ಸಿಲ್ಕ್ ಬಟ್ಟೆ ಶರ್ಟ್, ಪಂಚೆ ತಯಾರು ಮಾಡ್ಕೋತೀನಿ, ಒಂದೇ ತರದ ಎರಡು ಸೀರೆ ತೊಗೊಂಡು ಮ್ಯಾಚಿಂಗ್ ಡ್ರೆಸ್ ಮಾಡ್ಕೋತೀನಿ..ನೋಡು ಇಡೀ ಪ್ರಪಂಚ ನಮ್ಮನ್ನು ಆದರ್ಶ ದಂಪತಿ,ಮೇಡ್ ಫಾರ್ ಈಚ್ ಅದರ್ ಅಂತ ಕರೆದು ಕಿರೀಟ ಹಾಕದಿದ್ರೆ ಕೇಳು..."ನಮ್ಮ ಸಂಸಾರ ಆನಂದ ಸಾಗರ"..ಅಂತ ಹಾಡುವ ಹಾಗೆ ಆಗುವುದು ನೀನೇ ನೋಡ್ತೀಯಾ.

ಸುಮಧುರ, ಸುನಾದಮಯ, ನಿತ್ಯೋತ್ಸವವಾಗಿ ನಾವು ನಲಿಯೋದನ್ನು ನೋಡಿ ಖುಷಿ ಪಡ್ತೀಯ ಅಮ್ಮ ಅಂದ ಗುರು. ಆಮೇಲೆ ಇನ್ನೊಂದು ಪಾಯಿಂಟು, ದಂಪತಿಗಳಲ್ಲಿ ಹೆಚ್ಚಾಗಿ ಬರೋದು ಸಂದೇಹ, ಅನುಮಾನ..ಇದರಿಂದ ಅದೆಷ್ಟು ಕುಟುಂಬ ಗಳು ಬ್ರೇಕ್ ಆಗಿದ್ಯೋ..ಅಧೋಗತಿ ,ಆಗಿ ಅವನತಿ ಕಂಡಿದ್ಯೋ.....

ಅನುಮಾನಂ ಪೆದ್ದ ರೋಗಂ..ಅನ್ನೋ ಹಾಗೆ ಆಗಬಾರದು ಅಂತ ಮೊದಲೇ ಇಬ್ರೂ ಒಬ್ಬರಿಗೊಬ್ರು ಪ್ರಾಮಿಸ್ ಮಾಡ್ಕೋತೀವಿ..ಆಫೀಸು,ಇತ್ಯಾದಿಗಳಲ್ಲಿ ಕೆಲವರ ಜೊತೆ ಮಾತಾಡ್ಲೇಬೇಕಾಗುತ್ತೆ, ಸುಮ್ನೇ ಪೈಲ್ಸ್ ಬಂದವ್ರ ಥರ ಕೂತ್ಕೊಂಡಿರೋಕೆ ಆಗೋಲ್ಲ ಅಲ್ವಾ.. ಅಂದಾಗ ಅಮ್ಮ, ಗೆಳೆಯ ಇಬ್ರೂ ಬಿದ್ದು, ಬಿದ್ದು ನಕ್ಕರು. ಅಷ್ಟೇನಾ ಇನ್ನೇನಾದ್ರೂ ಇದ್ಯಾ ಅಂತ ಅವರ ಪ್ರಶ್ನೆಗೆ ಇನ್ನೂ ಇದ್ಯಮ್ಮ, ಹೇಳ್ತಾ ಹೋದ್ರೆ..ಮುಗಿಯೋದೇ ಇಲ್ಲ.. ಹ್ಞಾ..ಅವಳ ಅಪ್ಪ,ಅಮ್ಮ, ನೆಂಟರು ಬಳಗ..ದವರನ್ನು ಗೌರವಿಸಿ, ಆದರಿಸಿ, ಸತ್ಕರಿಸುವುದು ಬಹು ಮುಖ್ಯ..ಹಾಗೇ ಅವಳೂ ಈ ನಿಯಮಕ್ಕೆ ಬದ್ಧಳಾಗಿರಬೇಕು..

ಆಮೇಲೆ ನಮ್ಮ ಆದರ್ಶ ಕುಟುಂಬ ನೋಡಿ..ಕರುಬುವ ಕೆಲವರು ಬಂದು ನಮ್ಮನ್ನು, ಕುಟುಂಬ ವನ್ನು ಒಡೆಯಲು ನೋಡ್ತಾರೆ ಇದಂತೂ ಟೂ ಹಂಡ್ರೆಡ್ ಪರ್ಸೆಂಟ್ ನಡ್ದೇ ನಡೆಯುತ್ತೆ.. ಅಂಥಾವ್ರನ್ನೆಲ್ಲ ದೂರ ಇಟ್ಟು, ಬುದ್ಧಿ ಕಲಿಸ್ಬೇಕು, ನಮ್ತಂಟೆಗೆ ಬರೋಕೂ ಅವರು ಹೆದರ್ಬೇಕು ,ಅವರ ಪಾಲಿಗೆ ನಾವು ಸಿಂಹ ಸ್ವಪ್ನ ವಾಗಲೇಬೇಕು. ಯಾವುದೇ ಕಾರಣಕ್ಕೂ "ನಾವು ಬೇರೆ ಆಗೋದಿಲ್ಲ" ಅನ್ನೋದು ನಮ್ಮ ಗುರಿಯಾಗಬೇಕು,ಸ್ವರ್ಣಾಕ್ಷರದಲ್ಲಿ ನಮ್ಮ ಆದರ್ಶದ ಬಗ್ಗೆ ಇತಿಹಾಸ ಸೃಷ್ಟಿಸಿ ಬರೆಯಬೇಕೆಂಬುದು ನಮ್ಮ ಅತ್ಯುನ್ನತ ಗುರಿ..ಅಂತ ಹೇಳ್ತಾ..ಇನ್ನೊಂದು ಲಾಸ್ಟ್ ಬಟ್ ನಾಟ್ ದ ಲೀಸ್ಟ್..

ನಮಗೆ ಹುಟ್ಟುವ ಮಕ್ಕಳಿಗೆ ಆದರ್ಶ, ಆನಂದ. ಹೆಸರು ಇಡೋದು. ಅಂತಾನೂ ಡಿಸೈಡ್ ಮಾಡಿದೀವಿ, ಅವರನ್ನು ಬೆಳೆಸಬೇಕಾದ ರೀತಿ, ಗಂಡು ಮಕ್ಕಳಾದರೆ ಅವರು ಬೆಳೆದು ಹೆಣ್ಣು ಮಕ್ಕಳಿಗೆ ತೋರಬೇಕಾದ ಗೌರವ,ಸಮಾಜದಲ್ಲಿ ಜವಾಬ್ದಾರಿಯುತ ಗಂಡು ಮಕ್ಕಳಾಗಿ ಇರಬೇಕಾದ ರೀತಿ ಎಲ್ಲಾ ಹೇಳಿಕೊಟ್ಟು ಸಂಸ್ಕಾರ ಯುತ ಮಕ್ಕಳನ್ನಾಗಿ ಬೆಳೆಸುತ್ತೇವೆ ಅಂದ ಮಗ ಗುರುವನ್ನು ನೋಡುತ್ತ ಇದೇನೋ ಎಲ್ಲಾ ನಿರ್ಧಾರ ಆದಂತೆ ಮಾತಾಡ್ತಿದೀಯಾ..ಅಂತ ಅಮ್ಮ ಅಂದಾಗ..ಸ್ವಲ್ಪ ಇರಮ್ಮ ಒಂದ್ನಿಮಿಷ ಅಂತ

ಮೊಬೈಲ್ ತೊಗೊಂಡು..ಕಾಲ್ ಮಾಡಿ..ಈಗ ನೋಡು ಬಾಗಿಲ ಹತ್ತಿರ ಅಂದ..

ನೋಡುನೋಡ್ತಿದ್ದಂತೆ ಸಾಕ್ಷಾತ್ "ಶ್ರೀ ವರ ಮಹಾಲಕ್ಷ್ಮಿ"ಯಂತೆ ನಗುನಗುತ್ತಾ, ನಳನಳಿಸುತ್ತಾ..ಕೈಯಲ್ಲಿ ಫಲ, ತಾಂಬೂಲ ಹೂವು, ಹಿಡಿದು ಸಾಲಂಕೃತ, ಸರ್ವಾಲಂಕೃತ ಭೂಷಿತ ಕನ್ಯೆಯಾಗಿ ಬಂದ ಸಾಧನಳನ್ನು, ಜೊತೆಗೆ ಅವಳ ಅಪ್ಪ ಅಮ್ಮ ನನ್ನು ನೋಡಿ ಅಮ್ಮ, ಹಾಗೂ ಗೆಳೆಯ ನಿಗೆ ಅಧ್ಭುತ ಆಶ್ಚರ್ಯ, ಹಿಡಿಸಲಾಗದ ಸಂತೋಷವಾಯಿತು.

ಅಮ್ಮನಿಗೆ ಕ್ಷಣಾರ್ಧದಲ್ಲಿ ವಿಷಯ ತಿಳಿದು ಬಿಟ್ಟಿತು. ಸಾಧನ ಪರಿಚಯವಿರುವ ಹುಡುಗಿಯೇ.., "..ಈಗ ಆರು ತಿಂಗಳ ಹಿಂದೆ ನನ್ನ ನಾದಿನಿ ಮಗನ ಮದುವೇಲಿ ನೋಡಿದ್ದೆ, ಈ ಹುಡುಗಿ ನಮ್ಮ ಮನೆ ತುಂಬಿದರೆ ಅದೆಷ್ಟು ಚಂದ ಅಂತ ಆಸೆಪಟ್ಟಿದ್ದೆ, ನೋಡು ಈಗ ಅದೇ ನೆರವೇರಿತು, ನಂಗೂ ತುಂಬ ಖುಷಿ ಆಯ್ತು, ಭಾರೀ ದೊಡ್ಡ ಸರ್ಪೈಸ್ ಕೊಟ್ಯಲ್ಲಪ್ಪಾ ಅಂದ್ರು ಅಮ್ಮ..

"..ಬನ್ನಿ ಬನ್ನಿ ಅಂತ ಭಾವೀ ಬೀಗರನ್ನು ಒಳಗೆ ಕರೆದು..ಆದರೋಪಚಾರ, ಚಂದದ ಆತಿಥ್ಯ ನಡೆಸಿದರು.

ಏನು ಹೀಗೆ ಸರ್ಪೈಸ್ ಕೊಟ್ರಿ ಅಂತ ಮಗ, ಮತ್ತು ಭಾವೀ ಸೊಸೆಯನ್ನು ಕೇಳಿದಾಗ..ಇಬ್ರೂ ತಮ್ಮ ಮದುವೆ, ಸಂಸಾರ, ಜೀವನ ಎಲ್ಲವನ್ನೂ ಆದರ್ಶ ಪ್ರಾಯವಾಗಿ ನಿರೂಪಿಸಬೇಕೆಂದಿರುವ ತಮ್ಮ ಆಲೋಚನೆಯನ್ನು ಒಮ್ಮತದ ನಿರ್ಣಯ ತೆಗೆದು ಕೊಂಡಿರುವ ಬಗ್ಗೆ ಗುರು ಇಷ್ಟು ಹೊತ್ತೂ ಹೇಳಿದ" ಆದರ್ಶ ದಂಪತಿ"ಗಳೆಂದರೆ ಎಂಬ ಮಾತುಗಳೆಲ್ಲದಕ್ಕೂ ತನ್ನ ಸಂಪೂರ್ಣ ಸಮ್ಮತಿಯಿದೆ ಯೆಂದೂ, ಅವಳ ಅಪ್ಪ, ಅಮ್ಮ ನಿಗೆ ಕೂಡಾ ಇದರ ಬಗ್ಗೆ ಮೊದಲೇ ತಿಳಿಸಿದ್ದರೆಂದೂ ಸಾಧನ ತಿಳಿಸಿದಾಗ ಅಮ್ಮನ ಮನ ತುಂಬಿ ಬಂತು.

"ಅಮ್ಮ, ನಿಮ್ಮ ಮಗ ಗುರುವಿನ ಮಾರ್ಗದರ್ಶನ ದಲ್ಲಿ ನಮ್ಮಆದರ್ಶ ಜೀವನ ಆನಂದವಾಗಿ ಸಾಧನೆ ಮಾಡಬೇಕು..ಆಶೀರ್ವದಿಸಿ ಅಂತ ಸಾಧನ ಅಂದಾಗ ಎಲ್ಲರಿಗೂ ಸಂತಸವಾಯಿತು.

ಮಗ, ಸೊಸೆ ತಮಗೆ ನಮಸ್ಕಾರ ಮಾಡಿದಾಗ ನೀವು ಹೀಗೇ ಸದಾಕಾಲ.. ಆನಂದದಿಂದಿರಬೇಕು.".ಆದರ್ಶ ದಂಪತಿ"ಗಳು ಅಂದ್ರೆ ನಿಮ್ದೇ "ಆದರ್ಶ" ವಾಗಬೇಕು ಅಂತ ಮನಸಾರೆ ಆಶೀರ್ವದಿಸಿ ಸಿಹಿ ತಿನ್ನಿಸಿದ್ರು ಅಮ್ಮ.. ■



# ರಂಗೋಲಿ ಮದುವೆ

**ಬೇಲೂರು ರಾಮಮೂರ್ತಿ**

ಸೋಮು ಮದುವೆಯಾದದ್ದೇ ಒಂದು ಕುತೂಲಹ ಮತ್ತು ರೋಚಕ ಸಂಗತಿ. ಹಬ್ಬದಲ್ಲಿ ಅಥವಾ ಇನ್ನಾವುದೇ ಸಂದರ್ಭಗಳಲ್ಲಿ ಬಣ್ಣಬಣ್ಣದ ರಂಗೋಲಿ ಕಂಡರೆ ಸೋಮುಗೆ ಅವನ ಮದುವೆಯ ದಿನಗಳೇ ನೆನಪಾಗುತ್ತೆ. ಮರುದಿನ ಗೌರಿ ಹಬ್ಬ. ಹಾಗಾಗಿ ಸೋಮಿ ಅವತ್ತು ಸಂಜೆನೇ ಅಂಗಳವನ್ನು ಸೆಗಣಿಯಿಂದ ಚನ್ನಾಗಿ ಸಾರಿಸಿ ಅದನ್ನು ಒಣಗಲು ಬಿಟ್ಟು ನಂತರ ತೆಂಗಿನ ಪೊರಕೆ ತೆಗೆದುಕೊಂಡು ಚನ್ನಾಗಿ ಗುಡಿಸಿ ನಂತರ ರಂಗೋಲಿ ಹಾಕುತ್ತಿದ್ದಳು. ಅವಳ ಮನೆ ಮುಂದೆ ಯಾವುದೇ ಹಬ್ಬವಾದರೂ ಸರಿ ದೊಡ್ಡ ರಂಗೋಲಿ ಎಲ್ಲರನ್ನೂ ಸ್ವಾಗತಿಸುತ್ತದೆ. ಸೋಮಿ ರಂಗೋಲಿ ಹಾಕುತ್ತಿರುವಾಗ ಆಫೀಸ್ ಮುಗಿಸಿಕೊಂಡು ಬಂದವನು ಒಂದು ಸಾರಿ ರಂಗೋಲಿನೂ ಇನ್ನೊಂದು ಸಾರಿ ಸೋಮಿನೂ ನೋಡುತ್ತಾ ನಿಂತ. ಅವನ ಮನಸ್ಸು ನಲವತ್ತೈದು ವರ್ಷಗಳ ಹಿಂದಕ್ಕೆ ಓಡಿತು. ಸಣ್ಣಗೆ ನಗು ಬಂತು. ಸೋಮಿ ತಿರುಗಿ ನೋಡಿದಳು. ಯಾಕ್ರೀ ನಗ್ತೀರ ರಂಗೋಲಿ ಹಾಕಿರೋದು ಚನ್ನಾಗಿಲ್ವಾ ಅಂತ ಕೇಳಿದಳು. ಸೋಮು ತಲೆ ಕೊಡವಿ ರಂಗೋಲಿ ಚನ್ನಾಗಿದೆ ನನಗೆ ಭಾಗ್ಯಮ್ಮ ನೆನಪಿಗೆ ಬಂದರು ಅಂದ. ಸೋಮಿ ರಂಗೋಲಿ ಅಂದಗೊಳಿಸುತ್ತಾ ಅವರು ಹೋಗಿ ಒಂದು ತಿಂಗಳಾಯಿತಲ್ಲ. ಪ್ರೇಮ ಕುರುಡಾದರೂ ಪ್ರೇಮಿಸೋರು ಕುರುಡರಾಗಬಾರದು ಎನ್ನುವ ಗಾದೆಯನ್ನು ನೀವು ಸುಳ್ಳು ಮಾಡಿದ್ರಲ್ಲ ಅಂದಳು. ಭಾಗ್ಯಮ್ಮ ಇದ್ದಿದ್ರಿಂದ್ಲೇ ನೀನು ನನ್ನ ಭಾಗ್ಯಕ್ಕೆ ಭಾಗ್ಯಮ್ಮ ಆಗಿದ್ದು ಅಂದು ಸೋಮು ಒಳಗೆ ಹೋದ.

ಕಾಫಿ ಕುಡಿದು ಕೂತಾಗ ಸೋಮು ಮನಸ್ಸು ನಲವತ್ತೈದು ವರ್ಷಗಳ ಹಿಂದಕ್ಕೆ ಓಡಿತು. ಆಗ ಸೋಮು ಇದ್ದುದು ತುಮಕೂರಿನಲ್ಲಿ. ಕಾಲ ಸುಮಾರು ಸುಮಾರು 1955, 1960 ರ ದಶಕ ಅಂದುಕೊಳ್ಳಿ. ತುಮಕೂರು ಸಹ ಈಗಿನ ಹಾಗೆ ಇರಲಿಲ್ಲ. ಹಾಗೆ ನೋಡಿದರೂ ಈಗಿನ ಎಲ್ಲಾ ದೊಡ್ಡ ದೊಡ್ಡ ನಗರಗಳೂ ಆಗ ಹಳ್ಳಿಗಳಂತೆಯೇ ಇತ್ತು. ಸೋಮುಗೆ ಕೆಲಸನೂ ಸಿಕ್ಕಿತು, ಮನೆಯೂ ಆಯಿತು. ಇನ್ನು ಉಳಿದಿರೋದೇನು ಮದುವೆ. ಆಗೆಲ್ಲಾ ಇಷ್ಟೊಂದು ಹುಡುಗಿಯರೂ ಇರಲಿಲ್ಲ, ಲವ್ ಅಟ್ ಫಸ್ಟ್ ಸೈಟ್ ಇರಲೇಇಲ್ಲ. ಸೈಟುಗಳು ಬೇಕಾದಷ್ಟು ಸಿಗುತ್ತಿದ್ದರೂ ಹುಡುಗಿಯರು ಎಲ್ಲಿದಾರೆ ಎನ್ನೋದು ತಿಳಿದಿರುತ್ತಿರಲಿಲ್ಲ. ಹೀಗಾಗಿ ದೊಡ್ಡವರು ತಮ್ಮ ಸ್ನೇಹಿತರು, ನೆಂಟರು ಇಂಥವರ ಕಡೆ ನೋಡೀಪ್ಪ ನನ್ನ ಮಗ ಒಬ್ಬ ಮದುವೆಗೆ ಇದಾನೆ. ಒಳ್ಳೆ ಕುಟುಂಬದ ಹೆಣ್ಣು ಇದ್ದರೆ ಹೇಳಿ ಪುಣ್ಯ ಕಟ್ಕೊಳಿ ಅನ್ನುತ್ತಿದ್ದರು. ಸೋಮು ತಂದೆಯೂ ಹೀಗೆ ಅನೇಕರ ಬಳಿ ಸೋಮು ವಿಚಾರ ಹೇಳಿದ್ದರು. ಒಂದೈದಾರು ತಿಂಗಳ ನಂತರ ಸೋಮು ತಂದೆಯ ಸ್ನೇಹಿತರು ರಾಘವಯ್ಯ ಬಂದು ನೋಡಪ್ಪಾ ಜಯಪುರದ ಹತ್ತಿರ ಕುದುರೆಗುಂಡಿ ಅಂತ ಒಂದು ಕಾಫಿ ಎಸ್ಟೇಟ್ ಇದೆ ಅಲ್ಲಿ ಪದ್ಮನಾಭ್ ಎನ್ನುವವರು ರೈಟರ್ ಆಗಿ ಕೆಲಸ ಮಾಡ್ತಿದಾರೆ ಅವರ ಮಗಳು ಮದುವೆಗೆ ಇದ್ದಾಳೆ. ಕಾಲೇಜು ಮೆಟ್ಟಿಲು ಹತ್ತೋ ತನಕ ಓದಿದ್ದಾಳೆ. ವಿದ್ಯಾವಂತೆ ಅಂತೆ, ಗುಣವಂತೆಯೂ ಅಂತೆ. ಹೋಗಿ ನೋಡಿಕೊಂಡು ಬಾ ಅಂತ ಹೇಳಿದರು. ಸೋಮು ತಂದೆ ಆಗಿನ ಕಾಲದಲ್ಲೇ ಮಕ್ಕಳಿಗೆ ಸ್ವಾತಂತ್ರ ಕೊಟ್ಟಿದ್ದರು. ಅವರು ಸೋಮುಗೆ ಹೊಗೋ ಹುಡುಗಿ ನೋಡ್ಕೊಂಡು ಬಾ. ನೀನು ಒಪ್ಪಿಗೆ ಅಂದರೆ ಆಮೇಲೆ ನಾನು ಹೋಗಿ ಮಾತಾಡ್ತೀನಿ ಅಂದರು. ಹೀಗೆ ಅದ್ಯಾರದೋ ಮನೆಗೆ ಹೋಗಿ ಹುಡುಗಿ ನೋಡೋದು ಸೋಮುಗೂ ಒಂಥರಾ ಮುಜುಗರ. ಅದರೆ ಒಂಥರಾ ಒಳಗೊಳಗೇ ಆಸೆ. ಒಬ್ಬನೇ ಹೋಗ್ತಿರೋದು ಒಂದು ರೀತಿ ಒಳ್ಳೆಯದೇ

ಅಂದುಕೊಂಡ.

ತಂದೆ ಹೇಳಿದ ದಿನ ಅವನು ಹೊರಟ. ಮೊದಲು ಚಿಕ್ಕಮಗಳೂರಿಗೆ ಹೋಗಿ ನಂತರ ಅಲ್ಲಿಂದ ಜಯಪುರಕ್ಕೆ ಹೋಗಬೇಕು. ಆಗ ಎಲ್ಲಾ ಬಸ್ಸಿನ ಪ್ರಯಾಣವೇ. ಈಗಿನಂತೆ ಘಳಿಗೆ ಘಳಿಗೆಗೊಂದು ಬಸ್ಸು ಇರುತ್ತಿರಲಿಲ್ಲ. ಕಾರುಗಳೂ, ಕ್ಯಾಬುಗಳೂ, ಓಲಾ, ಊಬರ್ ಹೆಸರೇ ಕೇಳಿರದ ಕಾಲ. ಒಂದೂರಿನಿಂದ ಬೆಳಗ್ಗೆ ಹೊರಟರೆ ಇನ್ನೊಂದು ಊರು ಸೇರೋದು ಸಂಜೆಗೇನೇ. ಮೊದಲೇ ಹೇಳಿಬಿಟ್ಟರೆ ಹುಡುಗಿಗೆ ಇಲ್ಲಸಲ್ಲದ ಅಲಂಕಾರ ಮಾಡಿ ಇಲ್ಲದ ಸೌಂದರ್ಯವನ್ನು ತಂದು ಹಾಕಿರುತ್ತಾರೆ. ಅದಕ್ಕೇ ಅವರಿಗೆ ಹೇಳದೇ ಹೋಗುತ್ತೀನಿ ಅಂದುಕೊಂಡು ಸೋಮು ತಂದೆಗೆ ಹಾಗೇ ಹೇಳಿದ. ತಂದೆ ಅದಕ್ಕೊಪ್ಪಿ ಅಲ್ಲಿ ಗಂಭೀರವಾಗಿರು, ತಲೆಹರಟೆ ಮಾತಾಡಬೇಡ. ಹುಡುಗಿ ಹತ್ರ ಬೇಕಾದರೆ ಮಾತಾಡು. ಆದರೆ ದೂರದಿಂದ ಅಂತ ಹೇಳಿಕಳಿಸಿದ್ದರು.

ಒಂದು ಗೊತ್ತಾದ ದಿನ ಸೋಮು ತುಮಕೂರಿನಿಂದ ಚಿಕ್ಕಮಗಳೂರಿಗೆ ಹೋದ. ಅಲ್ಲಿ ಎರಡು ಗಂಟೆ ಕಾದ ಮೇಲೆ ಜಯಪುರದ ಬಸ್ಸು ಬಂತು. ಹೋಗುವಾಗ ಶೃಂಗೇರಿಗೆ ಹೋಗಿ ಅಮ್ಮನವರ ದರ್ಶನ ಮಾಡಿಕೊಂಡು ಹೋಗಲೇ ಅಂತ ಯೋಚಿಸಿದ. ನಂತರ ಮೊದಲು ನನ್ನ ಮನೆಗೆ ಬರೋಳ ದರ್ಶನ. ಅದು ಯಶಸ್ಸು ಆದರೆ ನಂತರ ಅಮ್ಮನವರ ದರ್ಶನ ಅಂತ ಶೃಂಗೇರಿ ಇರುವ ದಿಕ್ಕಿಗೇ ನಮಸ್ಕರಿಸಿ ಹೊರಟ. ಜಯಪುರದಲ್ಲಿ ಇಳಿದಾಗ ಸಂಜೆ ನಾಲ್ಕು ಗಂಟೆ. ಅಲ್ಲಿ  ನಾನು ಕುದುರೆಗುಂಡಿ ಎಸ್ಟೇಟಿಗೆ ಹೋಗಬೇಕು. ಅಲ್ಲಿಗೆ ಯಾವ ಬಸ್ಸು ಹೋಗುತ್ತೆ ಅಂತ ಕೇಳಿದ. ಸೋಮುನ ನೋಡಿ ಅವರು ನಕ್ಕರು. ಪಾಪ ಹುಂಬ ಇವನಿಗೆ ಏನೂ ಗೊತ್ತಿಲ್ಲ ಅನಿಸಿ ಅಲ್ಲಿಗೆ ಯಾವ ಬಸ್ಸೂ ಹೋಗಲ್ಲ. ನೀವು ನಡೆದುಕೊಂಡು ಹೋಗಬೇಕು. ಅಂದರು. ಸೋಮು ಹೌದಾ ಅಂದು ಎಷ್ಟು ದೂರ ಆಗುತ್ತೆ ಅಂತ ಕೇಳಿದ. ಹೆಚ್ಚು ದೂರ ಏನಿಲ್ಲ ಒಂದು ಏಳೆಂಟು ಮೈಲಿ ಆಗಬಹುದು ಅಂದರು. ಸೋಮು ಕುಸಿದುಬಿದ್ದು ಹೋಗೋ ಹಾಗಾದ. ಏನು ಏಳೆಂಟು ಮೈಲಿಯೇ ಅಂದ. ಹೌದು ಆದರೆ ನೀವು ನಡೆಯೋಕೆ ಷುರು ಮಾಡಿದ್ರೆ ಅದು ಕಡಿಮೆಯಾಗ್ತಾ ಹೋಗುತ್ತೆ ಅಂದರು. ಓಹೋ ಇದೊಂದು ಜೋಕು ಇವರಿಗೆ ಅನಿಸಿ ಇಲ್ಲಿ ಬೇರೆ ಯಾರ ರೀತಿಯ ವಾಹನಗಳೂ ಇಲ್ಲವೇ ಅಂತ ಕೇಳಿದ. ಅವರು ತಲೆ ಕೊಡವಿ ಬಾಯಲ್ಲಿದ್ದ ಹೊಗೆಸೊಪ್ಪನ್ನು ರಸ್ತೆಗೆ ಉಗಿದು ಹೋದರು. ಸೋಮು ಪಾತಾಳಕ್ಕೆ ಇಳಿದು ಹೋದ. ಸುಮ್ನೆ ಹೀಗೇ ಹಿಂದಕ್ಕೆ ವಾಪಸ್ ಹೋಗಿ ಅಪ್ಪನಿಗೆ ನನಗೆ ಹುಡುಗಿ ಇಷ್ಟ ಆಗಲಿಲ್ಲ ಅಂತ ಹೇಳಿಬಿಡ್ಲೆ ಅನಿಸಿತು. ಆದರೆ ಹುಡುಗಿ ಹೇಗಿದಾಳೋ ನೋಡಬೇಕು ಎನ್ನುವ ಕುತೂಹಲ ಇತ್ತು. ಯಾವುದೋ ಹಳೇ ಹೋಟೆಲೊಂದಿತ್ತು ಅಲ್ಲೇ ಕಾಫಿ ಕುಡಿದ. ಅಪ್ಪ ಹೋಗುವಾಗ ಬರಿಗೈಯಲ್ಲಿ ಹೋಗಬೇಡ ಹೂವು ಹಣ್ಣು ಬಿಸ್ಕತ್ತು ತಗೊಂಡು ಹೋಗು ಅಂದಿದ್ದು ನೆನಪಾಯಿತು. ಅದನ್ನೆಲ್ಲಾ ಕೊಂಡುಕೊಳ್ಳುವಾಗ ಅಂಗಡಿಯವನು ಏನ್ಸಾರ್ ಹುಡುಗಿ ನೋಡಕ್ಕಾ ಅಂತ ಕೇಳಿದರು. ಸೋಮು ಹೌದು ಅಂದು ಈಗ ನಾನು ಇಲ್ಲಿಂದ ಕುದುರೆಗುಂಡಿಗೆ ಹೋಗಬೇಕಲ್ಲ ಹೇಗೆ ಅಂತ ಕೇಳಿದ. ಅದಕ್ಕೆ ಅಂಗಡಿಯವರು ಎಲ್ಲರೂ ನಡೆದುಕೊಂಡೇ ಹೋಗೋದು. ಸ್ಕೂಟರು ಇರೋರು, ಕಾರು ಇರೋರು, ಅದರಲ್ಲಿ ಹೋಗ್ತಾರೆ. ಇನ್ನು ಪದಾರ್ಥ ತಗೊಂಡು ಹೋಗೋ ಗಾಡಿಗಳು ಇರುತ್ವೆ, ಅವರೆಲ್ಲಾ ಬೇರೆಯವರನ್ನು ಹತ್ತಿಸೋದಿಲ್ಲ. ಆದರೆ ನೀವು ನಿಜ ಹೇಳಿದರೆ ನಾನು ಸಹಾಯ ಮಾಡ್ತೀನಿ ಅಂದ. ಏನು ನಿಜ ಅಂತ ಸೋಮು ಕೇಳಿದ. ನೀವು ಯಾರ  ಮನೆಗೆ ಹೋಗಬೇಕು ಮತ್ತೆ ಯಾಕೆ ಬಂದಿದೀರ ಅಂತ ಹೇಳಬೇಕು ಅಂದ. ಸೋಮು ಅಯ್ಯೋ ಅದಕ್ಕೇನಂತ್ರೀ ಅದರಲ್ಲೇನು ಗುಟ್ಟು ನಾನು ಕುದುರೆಗುಂಡಿ

ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿರೋ ಪದ್ಮನಾಭ ಅವರ ಮನೆಗೆ ಹೋಗಬೇಕು. ಅವರ ಮಗಳು ಮದುವೆಗೆ ಇದಾಳಂತೆ ನೋಡ್ಕೊಂಡು ಬಾ ಅಂತ ನಮ್ಮ ತಂದೆ ಕಳಸಿದಾರೆ ಅಂದ. ಅಂಗಡಿಯವರಿಗೆ ತುಂಬಾ ಖುಷಿಯಾಯಿತು. ಎರಡು ಹೃದಯಗಳನ್ನು ಒಂದು ಮಾಡಿದರೆ ಪುಣ್ಯ ಬರುತ್ತೆ ಸರ್ ಒಂದು ಕ್ಷಣ ಇರಿ ಅಂದು ಅಕ್ಕ ಪಕ್ಕ ನೋಡಿದರು. ನಂತರ ಜೋರಾಗಿ ಲೇ ಸುಬ್ಬಣ್ಣಾ ಅಂತ ಕೂಗಿದ. ಹತ್ತು ನಿಮಿಷ ಆದ ಮೇಲೆ ಸುಬ್ಬಣ್ಣ ಬಂದು ಎಂಥದು ಮಾರಾಯ ನನಗೆ ಜಾಸ್ತಿ ಕೆಲಸ ಇದೆ ಅಂದ. ಇಲ್ಲಿ ಕುದುರೆಗುಂಡಿಗೆ ನೀನು ಈಗಲೇ ಹೊರಟಿದ್ದಾ ಇಲ್ಲ ನಾಳೆಯಾ ಅಂತ ಕೇಳಿದ. ಇಲ್ಲಪ್ಪ ಬಂದ ಕೆಲಸ ಆಯ್ತು ಈಗ ಹೊರಟೆ ಇನ್ನೊಂದೈದು ನಿಮಿಷ ಅಂದ ಸುಬ್ಬಣ್ಣ. ಅದಕ್ಕೆ ಅಂಗಡಿಯವರು ನೋಡು ಇವರು ಸೋಮು ಅಂತ ಪದ್ಮನಾಭ ಅವರ ಮನೆಗೆ ಹೋಗಬೇಕಂತೆ ಅವರ ಮಗಳನ್ನು ನೋಡೋಕೆ ಬಂದಿದಾರೆ ಕರ್ಕೊಂಡು ಹೋಗು ನಿನಗೆ ಪುಣ್ಯ ಬರುತ್ತೆ ಅಂದ. ಅವನು ಸೋಮು ಕಡೆ ನೋಡಿ ಅದೇನೋ ಖುಷಿಯಾಗಿ ಹೌದಾ ಪದ್ಮನಾಭ ಅವರ ಮಗಳು ಸೌಮ್ಯನ್ನ ನೋಡೋಕೆ ಬಂದಿದೀರಾ. ಸರಿ ಕರ್ಕೊಂಡು ಹೋಗ್ತೀನಿ. ಆದರೆ ನನ್ನ ಸ್ಕೂಟರಲ್ಲಿ ಬಿಗಿಯಾಗಿ ಕೂತ್ಕೊಬೇಕು. ನನ್ನ ಬ್ಯಾಗು ಒಂದಿಷ್ಟು ಹಿಡ್ಕೊಬೇಕು ಅಂದ. ಸೋಮು ಒಪ್ಪಿದ ಮೇಲೆ ಸವಾರಿ ನಿಷ್ಕರ್ಷೆಯಾಯಿತು. ಸೋಮು ಅಂಗಡಿಯವರಿಗೆ ವಿಶೇಷವಾಗಿ ಕೃತಜ್ಞತೆ ತಿಳಿಸಿ ಸ್ಕೂಟರು ಹತ್ತಿದ. ಹೋಗೋಣ್ವಾ ಸಾರ್. ಬಿಗಿಯಾಗಿ ಕೂತಿದೀರ. ಯಾಕಂದ್ರೆ ಈಗ ತಾನೇ ಹುಡುಗಿ ನೋಡೋಕೆ ಬಂದಿದೀರ ಅಂದು ತಾನು ಹೇಳಿದ್ದು ಮಹಾನ್ ಜೋಕು ಅನ್ನವಂತೆ ನಕ್ಕ.

ಸ್ವಲ್ಪ ದೂರ ಹೋದ ಮೇಲೆ ಅವನು ಸೋಮು ಕಡೆ ತಿರುಗಿ ನನ್ನ ಹೆಸರು ಸುಬ್ಬಣ್ಣ ಅಂತ ಹುಟ್ಟಿ ಬೆಳೆದಿದ್ದು ಬೆಳೆಯುತ್ತಿರೋದು ಎಲ್ಲ ಕುದುರೆಗುಂಡಿಯೇ. ನಿಮ್ಮ ಹೆಸರೇನು ಸರ್ ಅಂತ ಕೇಳಿದ. ಸೋಮು ಇವನು ಪದೇ ಪದೇ ಪ್ರಶ್ನೆ ಕೇಳೋದೇಕೆ ಅಂತ ಒಂದೇ ಸಾರಿಗೆ ತನ್ನ ಎಲ್ಲಾ ವಿವರಗಳನ್ನೂ ಹೇಳಿಬಿಟ್ಟ. ಸುಬ್ಬಣ್ಣ ನಕ್ಕು ಗಾಡಿ ಓಡಿಸಿದ. ದಾರಿಯೇನು ಟಾರು ರಸ್ತೆ ಅಲ್ಲ, ವೈಟ್ ಟಾಪಿಂಗ್ ಅಂತೂ ಅಲ್ಲವೇ ಅಲ್ಲ. ಕಾಲು ದಾರಿಯಂಥ ದಾರಿ, ಕಲ್ಲುಗಳಿಗೆ ಲೆಕ್ಕವೇ ಇಲ್ಲ. ಇದರಿಂದಾಗಿ ಬೇಡ ಬೇಡವೆಂದರೂ ಸುಬ್ಬಣ್ಣನ ಸ್ಕೂಟರು ಸಿಕ್ಕಾಪಟ್ಟೆ ಅಲ್ಲಾಡುತ್ತಿತ್ತು. ಸೋಮು ಸಧ್ಯ ನಾನು ಬೀಳದಿದ್ರೆ ಸಾಕು ಅಂತ ಬಿಗಿಯಾಗಿ ಕೂತಿದ್ದ. ಎಷ್ಟು ಬೇಗ ಅಂದರೂ ಅಂಥಾ ದಾರಿಯಲ್ಲಿ ಎಂಟು ಹತ್ತು ಮೈಲಿ ಕ್ರಮಿಸೋದು ಕಷ್ಟವೇ. ಅಂತೂ ಸುಬ್ಬಣ್ಣನ ಸ್ಕೂಟರು ಸೋಮು ಸಮೇತ ಕುದುರೆಗುಂಡಿಗೆ ಹೋಗುವಾಗ ಸಂಜೆ ಏಳು ಗಂಟೆಯಾಗಿತ್ತು. ಸುಬ್ಬಣ್ಣನಿಂದಾಗಿ ಪದ್ಮನಾಭ್ ಅವರ ಮನೆ ಹುಡುಕೋದು ತಪ್ಪಿತು. ಸ್ಕೂಟರು ಅವರ ಮನೆಯ ಮುಂದೇ ನಿಂತು ಸುಬ್ಬಣ್ಣ ಗಟ್ಟಿಯಾಗಿ ಓ ಪದ್ಮನಾಭ ನಿನ್ನ ಮಗಳನ್ನು ನೋಡೋಕೆ ಬಂದಿದಾರೆ ಅಂತ ಕೂಗಿದ. ಪದ್ಮನಾಭ್ ಹೊರಗಡೆ ಬಂದು ಸೋಮುನ ನೋಡಿ. ಬನ್ನಿ ಬನ್ನಿ ಬರ್ತೀನಿ ಅಂತ ಹೇಳಿದ್ರೆ ಗಾಡಿ ಕಳಿಸ್ತಿದ್ದೆ. ತುಂಬಾ ತೊಂದರೆಯಾಯಿತೇನೋ ಅಂದು ಒಳಗೆ ಕರೆದುಕೊಂಡು ಅಲ್ಲಿ ಬಚ್ಚಲುಮನೆ ಇದೆ ಕೈ ಕಾಲು ತೊಳ್ಕೊಂಡು ಬನ್ನಿ ಅಂದರು. ಸೋಮುಗೆ ಮೊದಲು ಕಾಫಿ ನಂತರ ಒಳ್ಳೆ ಊಟದ ಉಪಚಾರ ಆಯಿತು. ಎಲ್ಲ ವಿಚಾರಗಳನ್ನೂ ಕೇಳಿಕೊಂಡು ಅತ್ತೆ ಊಟ ಬಡಿಸಿದರು, ಮಾವ ಉಪಚಾರ ಮಾಡಿದರು. ಹುಡುಗಿ ಕೈಲಿ ಅಟ್ ಲೀಸ್ಟ್ ಉಪ್ಪಾದರೂ ಬಡಿಸಿದ್ದಿದ್ರೆ ಇವರ ಗಂಟೇನು ಹೋಗಿರೋದು ಅಂತ ಸೋಮು ಗೊಣಗಿಕೊಂಡ. ಅವತ್ತು ಹುಡುಗಿಯ ದರ್ಶನ ಆಗಲಿಲ್ಲ. ಪದ್ಮನಾಭ್ ಅವರು ಅವರ ವಿಚಾರ ಮಗಳ ವಿಚಾರ ಎಲ್ಲ ತಿಳಿಸಿ ಸೋಮು ವಿಚಾರನೂ ತಿಳ್ಕೊಂಡ್ರು. ಈಗ ಮಲ್ಕೊಳಿ ಬೆಳಗ್ಗೆ ಹುಡುಗಿ ನೋಡ್ತೀರಂತೆ ಅಂದರು. ಸೋಮುಗೆ ನಿದ್ದೆ ಬೇಗ

ಬರಲಿಲ್ಲ. ಆದರೆ ನಂತರ ಬಂತು. ಬೆಳಗ್ಗೆ ಎದ್ದಾಗ ಆರು ಗಂಟೆ ಆಗಿತ್ತು. ಕರಾಗ್ರೇ ಮಾಡಿಕೊಂಡು ಮುಂಬಾಗಿಲು ತೆಗೆದುಕೊಂಡು ಹೊರಗೆ ಬಂದ. ತಕ್ಷಣ ಅವನಿಗೆ ಅಚ್ಚರಿ, ಗಾಬರಿ, ಸಂತಸ, ಎದೆನಡುಕ ಎಲ್ಲ ಉಂಟಾಯಿತು. ಏಕೆಂದರೆ ಒಂದು ಹುಡುಗಿ ತಲೆ ಮೇಲೆ ಸೆರಗು ಹೊದ್ದು ಮನೆ ಮುಂದೆ ಅದ್ಭುತವಾದ ರಂಗೋಲಿ ಹಾಕುತ್ತಿದ್ದಳು. ಸೋಮು ಭೇಷ್ ಹುಡುಗಿಗೆ ಒಳ್ಳೆ ಸಂಸ್ಕಾರ ಕಲಿಸಿದಾರೆ. ನನಗೇನೋ ಹುಡುಗಿ ಓಕೆ ಅಂದುಕೊಂಡ. ಕಾಫಿ ಆಯಿತು, ಸ್ನಾನ ಆಯಿತು, ತಿಂಡಿ ಆಯಿತು. ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ನಾನು ಹೊರಡ್ತೀನಿ ಅಂದ ಸೋಮು. ಅಯ್ಯೋ ಬಂದ ಕೆಲಸವೇ ಆಗಿಲ್ಲವಲ್ಲ. ನನ್ನ ಮಗಳನ್ನು ಕರೀತೀನಿ ಇರಿ ಅಂದರು ಪದ್ಮನಾಭ್. ಅದರ ಅವಶ್ಯಕತೆ ಇಲ್ಲ. ಅವಳು ರಂಗೋಲಿ ಹಾಕುತ್ತಿದ್ದುದನ್ನು ನಾನು ನೋಡಿದೆ. ಅವಳು ನನಗೆ ಒಪ್ಪಿಗೆ ಅಂದ. ಅಯ್ಯೋ ನಿಮಗೇನೋ ಒಪ್ಪಿಗೆ ಇರಬಹುದು ಆದರೆ ಅವಳು ನಿಮ್ಮನ್ನು ನೋಡೋದು ಬೇಡವೇ. ಅಷ್ಟಕ್ಕೂ ರಂಗೋಲಿ ಹಾಕುತ್ತಿದ್ದುದು ನನ್ನ ಮಗಳಲ್ಲ ಅಂದರು. ಸೋಮು ಥಟ್ಟಂತ ಅವಳು ಯಾರಾದ್ರೂ ಸರಿ ನನಗೆ ಆ ಹುಡುಗಿಯೇ ಬೇಕು ಅಂದ. ಒಳಗಿನ ಮನೆಯಲ್ಲಿ ಅಮ್ಮ ಮಗಳು ಸೋಮು ಮಾತು ಕೇಳುತ್ತಾ ಬೆವೆತುಹೋದರು. ಇದೇನಾಯ್ತು ಅಂದುಕೊಂಡು ಗಾಬರಿಯಿಂದ ಮುಂದೇನು ಅಂತ ಕಾದರು. ನನ್ನ ಮಗಳನ್ನು ಒಂದು ಸಾರಿ ನೋಡಿ ಅಂದರೆ ಸೋಮು ಬೇಡ ನಾನು ಏನಿದ್ರೂ ಆ ಹುಡುಗೀನೇ ಮದುವೆ ಆಗೋದು ಅವಳನ್ನೇ ಕರೆಸಿ ಅಂದ. ಪದ್ಮನಾಭ್ ತಲೆ ಮೇಲೆ ಕೈ ಹೊತ್ತು ಕೂತರು. ಸ್ವಲ್ಪ ಹೊತ್ತಿಗೆ ಪದ್ಮನಾಭ್ ಹೆಂಡತಿ ಸೀತ ಹೊರಗಡೆ ಬಂದು ನೋಡಿ ಅಂದು ಒಂದು ಫೋಟೋ ತೋರಿಸಿದರು. ಸೋಮು ನೋಡಿದ. ಯಾವುದೋ ಹುಡುಗಿ ಮುಖ ವಿಪರೀತ ಸುಟ್ಟು ನೂರೆಂಟು ಕರೆ ಅಗಿದೆ. ಸ್ವಲ್ಪ ಭಯ ಹುಟ್ಟಿಸೋ ರೂಪವೂ ಹೌದ. ಸೋಮು ಯಾರಿದು ಅಂತ ಕೇಳಿದರು. ಸೀತ ಬೆಳಗ್ಗೆ ನೀವು ರಂಗೋಲಿ ಹಾಕುತ್ತಿದ್ದ ಹುಡುಗಿ ನೋಡಿ ಇವಳನ್ನೇ ನಾನು ಮದುವೆ ಮಾಡ್ಕೊಳ್ಳೋದು ಅಂದ್ರಲ್ಲ ಅವಳು. ಹೆಸರು ಭಾಗ್ಯಮ್ಮ. ನನ್ನ ಸೋದರಮಾವನ ಮಗಳು. ಎರಡು ವರ್ಷದ ಹಿಂದೆ ಮುಖದ ಮೇಲೆ ಅಚಾನಕ್ಕಾಗಿ ಬಿಸಿನೀರು ಸುರಿದು ಮುಖ ಎಲ್ಲಾ ಸುಟ್ಟುಹೋಗಿದೆ. ಅದನ್ನು ಸರಿಮಾಡೋಕೇ ಆಗಲ್ಲ ಅಂದರು.ಸಧ್ಯ ಪ್ರಾಣ ಉಳೀತು. ಅದೇ ಹೆಚ್ಚು. ಅವಳ ಈ ರೂಪ ಇರುವಾಗಲೇ ಅವಳಿಗೆ ಗಂಡು ಕರೆಸಿದ್ದರು. ಗಂಡಿನ ಮನೆಯವರು ಅವಳನ್ನು ನೋಡಿ ತಮಾಷೆ ಮಾಡಿದರು. ಅವತ್ತೇ ಅವಳು ನಾನು ಮದುವೆನೇ ಆಗಲ್ಲ ಅಂತ ನಿರ್ಧರಿಸಿದ್ದಾಳೆ ಅಂದರು. ಸೋಮು ಸಂದಿಗ್ಧಕ್ಕೆ ಬಿದ್ದ. ನಾನೇ ಅವಳನ್ನು ಕೇಳ್ತೀನಿ ಅಂದು ಏಕಾಏಕಿ ಭಾಗ್ಯಮ್ಮ ಇರುವ ರೂಮಿಗೆ ಹೋಗಿ ನಾನು ನಿಮ್ಮನ್ನು ಇಷ್ಟಪಟ್ಟಿದೀನಿ ನನ್ನನ್ನೇ ನೀವು ಮದುವೆಯಾಗಿ ನಿಮ್ಮನ್ನು ಚನ್ನಾಗಿ ನೊಡ್ಕೊಳ್ಳೋ ಜವಾಬ್ದಾರಿ ನನ್ದು ಅಂದ. ಆಗ ಹತ್ತಿರದಿಂದ ಗಾಯತ್ರಿಯನ್ನು ನೋಡಿ ನಿಜಕ್ಕೂ ಗಾಬರಿ ಆಗಿತ್ತು. ಗಾಯತ್ರಿ ಪದೇ ಪದೇ ಹೇಳಿದ್ದನ್ನೇ ಹೇಳೋದು ನನ್ನ ಅಭ್ಯಾಸ ಅಲ್ಲ. ನಾನು ನಿಮ್ಮನ್ನಲ್ಲ, ಈ ಜನ್ಮದಲ್ಲೇ ಯಾರನ್ನೂ ಮದುವೆಯಾಗಲ್ಲ. ಇಲ್ಲಿಗೆ ಈ ಮಾತು ಬಿಡಿ ಅಂದು ಒಳಗೆ ಹೊರಟುಹೋದಳು.

ಹೊರಗೆ ಬಂದ ಸೋಮುನ ನೋಡಿ ಪದ್ಮನಾಭ್ ಈಗಲಾದರೂ ನನ್ನ ಮಗಳು ಸೌಮ್ಯನ್ನ ನೋಡ್ತೀರ ಅಂತ ಕೇಳಿದಳು. ಸೋಮು ಬೇಡ ಅಂದು ತಲೆಯಾಡಿಸಿ ಹೊರಟ. ಮತ್ತೆ ಅತ್ತೆ ಎದುರಾದರು. ನೋಡಿ ಹುಡುಗಿನ ನೋಡೋಕೆ ಬಂದ ಹುಡುಗ ಹಾಗೆ ಹೊರಟುಹೋದ ಅಂದರೆ ಊರಲ್ಲಿ ಜನ ನೂರೆಂಟು ಮಾತಾಡ್ಕೊತಾರೆ, ಅದರಿಂದ ನಮಗೇ ತೊಂದರೆ. ಮುಂದೆ ನಮ್ಮ ಹುಡುಗಿನ ನೋಡೋಕೆ ಇನ್ನು ಯಾರದರೂ

ಬರ್ತಾರೋ ಇಲ್ಲವೋ ಗೊತ್ತಿಲ್ಲ. ಒಂದು ಕೆಲಸ ಮಾಡಿ ನೀವು ರಂಗೋಲಿ ಹಾಕುತ್ತಿದ್ದ ಹುಡುಗಿನ ನೋಡಿ ಇಷ್ಟಪಟ್ರಿ. ಆದರೆ ನಮ್ಮ ಸೌಮ್ಯನೂ ರಂಗೋಲಿ ಹಾಕ್ತಾಳೆ. ಆದರೆ ಭಾಗ್ಯಮ್ಮನಷ್ಟು ಬರಲ್ಲ. ಒಂದು ವೇಳೆ ನಮ್ಮ ಸೌಮ್ಯನೂ ಅಷ್ಟೆ ಚನ್ನಾಗಿ ರಂಗೋಲಿ ಹಾಕಿದರೆ ನೀವು ಅವಳನ್ನು ಮದುವೆ ಮಾಡ್ಕೊಳ್ತೀರ ಅಂತ ಕೇಳಿದರು. ಸೋಮುಗೆ ಹೊಸ ದೀಪ ಹೊತ್ತಿಕೊಂಡ ಹಾಗಾಯತ್ತು. ಭಾವಿ ಅತ್ತೆ ಕಡೆ ನೋಡಿದ. ಆಗಲಿ ಪರೀಕ್ಷೆ ಅಂದ. ಅತ್ತೆ ತಲೆ ಕೊಡವಿ ಈಗ ಬೇಡ ನೀವು ಇನ್ನೊಂದು ಮೂರು ತಿಂಗಳು ಬಿಟ್ಟು ಬನ್ನಿ. ನನ್ನ ಮಗಳು ಈಗ ತಾನೇ ರಂಗೋಲಿ ಹಾಕೋದು ಕಲೀತಿದಾಳೆ. ಅವಳು ಭಾಗ್ಯಮ್ಮನಿಂದಲೇ ಇನ್ನೂ ಚನ್ನಾಗಿ ಕಲೀಲಿ. ನೀವು ಆಮೇಲೆ ಬನ್ನಿ ಮೊದಲು ರಂಗೋಲಿ ಹಾಕೋಳನ್ನು ನೋಡಿ, ನಂತರ ಅವಳನ್ನು ನೋಡಿ ಅಂದರು. ಸೋಮು ಆಗಲಿ ಅಂದ. ಪದ್ಮನಾಭ್ ಹೇಗಾದರೂ ಆಗಲಿ ನನ್ನ ಮಗಳನ್ನು ಒಂದ್ಸಾರಿ ನೋಡ್ಕೊಂಡು ಹೋಗಿ ಅಂದರು. ಸೋಮು ಬೇಡ ಸಸ್ಪೆನ್ಸ್ ಇರಲಿ ಅಂದ.

ಭಾವೀ ಅತ್ತೆ ಹೇಳಿದ ಹಾಗೆ ಸೋಮು ಮೂರಲ್ಲ ಆರು ತಿಂಗಳು ತಡೆದು ಬಂದ. ಕ್ರಿಕೆಟ್ಟಲ್ಲಿ ಆಕ್ಷನ್ ರೀಪ್ಲೆ ಅಂತಾರಲ್ಲ ಹಾಗೇ ಆಯ್ತು. ಎಸ್ಟೇಟಿಗೆ ಬರುವಾಗಲೇ ರಾತ್ರಿಯಾಗಿತ್ತು. ಈ ಸಾರಿ ಪದ್ಮನಾಬ್ ಕಾರು ತಗೊಂಡು ಜಯಪುರಕ್ಕೆ ಬಂದಿದ್ದರು. ರಾತ್ರಿ ಊಟ ಮಾಡಿ ಮಲಗಿದ್ದ. ಬೆಳಗ್ಗೆ ರೇಡಿಯೋದಲ್ಲಿ ಸಣ್ಣಗೆ ಸುಪ್ರಭಾತ ಬರ್ತಿತ್ತು. ಬೆಳಗ್ಗೆ ಮುಂಬಾಗಿಲು ತೆಗೆದುಕೊಂಡು ಬಂದ. ಆಶ್ಚರ್ಯ. ಹುಡುಗಿ ಮನೆ ಮುಂದೆ ಬೊಂಬಾಟಾಗಿ ರಂಗೋಲಿ ಹಾಕ್ತಿದಾಳೆ. ಸೋಮು ರಂಗೋಲಿನೇ ನೊಡ್ತಾ ನಿಧಾನವಾಗಿ ಹತ್ತಿರ ಹೋಗಿ ಆ ಹುಡುಗಿ ತಲೆ ಮೇಲೆ ಹೊದ್ದುಕೊಂಡಿದ್ದ ಸೆರಗು ಸರಿಸಿ ಮುಖ ನೋಡಿದ. ಹುಡುಗಿ ನಾಚಿಕೊಂಡು ಒಳಗೆ ಓಡಿ ಹೋದಳು. ಸೋಮು ಯಸ್ ಐ ಡಿಡ್ ಇಟ್ ಅಂದು ಬಲಗೈನ ಗಾಳಿಯಲ್ಲಿ ಗುದ್ದಿದ.

ಬೆಳಗಿನ ತಿಂಡಿಗೆ ಶಾವಿಗೆ, ರವೆಇಡ್ಲಿ, ಕ್ಯಾರೆಟ್ ಹಲ್ವ ಮಾಡಿದ್ರು. ಸೌಮ್ಯನೇ ಬಡಿಸಿದಳು. ಸೌಮ್ಯನ್ನು ನೋಡಿಕೊಂಡೇ ಸೋಮು ತಿಂಡಿ ಬಾರಿಸಿದ. ಸೌಮ್ಯ ತಿಂಡಿ ಬಡಿಸುವಾಗ ಸೋಮುನ ಕದ್ದು ಕದ್ದು ನೋಡಿದಳು. ಸೋಮು ಮೈ ಮುರಿದು ನನಗೆ ನಿಮ್ಮ ಮಗಳ ರಂಗೋಲಿಯೂ ಓಕೆ, ನಿಮ್ಮ ಮಗಳೂ ಓಕೆ ಅಂದ. ಸೌಮ್ಯ ನಿಮ್ಮನ್ನು ಎಸ್ಟೇಟಿನಲ್ಲಿ ಒಂದು ರೌಂಡು ಕರ್ಕೊಂಡು ಹೋಗ್ತಾಳೆ ಅಂದರು.

ಸೋಮು ಜೊತೆ ನಡೆಯುವಾಗ ಸೋಮಿ ಪದೇ ಪದೇ ಅವನ ಕಡೆ ನೋಡುತ್ತಿದ್ದಳು. ಆಗಾಗ ಕೈ ತಗುಲಿಸುತ್ತಿದ್ದಳು ಸೋಮು ಸೋಮಿ ಕೈ ಹಿಡಿದು ನೋಡಿದ. ನೀವು ಶಾಸ್ತ್ರನೂ ಹೇಳ್ತೀರ ಅಂತ ಕೇಳಿದಳು. ಇಲ್ಲ, ಈ ಆರು ತಿಂಗಳಲ್ಲಿ ನೀನು ರಂಗೋಲಿ ಹಾಕೀ ಹಾಕೀ ಪಾಪ ನಿನ್ನ ಕೈ ಎಷ್ಟು ನೋಯ್ತಿದೆಯೋ ಅಂದು ಅವಳ ಕೈ ಸವರಿದ. ಸೌಮ್ಯ ನೀವು ಮದುವೆ ಆಗ್ತಿರೋದು ನನ್ನನ್ನೋ ಇಲ್ಲಾ ರಂಗೋಲಿನೋ ಅಂತ ಕೇಳಿದಳು. ಸೋಮು ಪರವಾಗಿಲ್ವೆ ಇವಳು ಚುರುಕಾಗಿ ಮಾತಾಡ್ತಾಳೆ ಅಂದ್ಕೊಂಡ. ಅಲ್ಲಿ ಯಾರೂ ಇಲ್ಲ ಅಂತ ಖಚಿತಪಡಿಸಿಕೊಂಡು ಏನಾದರೂ ಆಗಲಿ ಅಂತ ಸೌಮ್ಯನ್ನ ಒಂದು ಸಾರಿ ಬಿಗಿಯಾಗಿ ತಬ್ಬಿ ನೀನೇ ನನ್ನ ಬಾಳಿನ ಅದೃಷ್ಟದ ರಂಗೋಲಿ ಅಂದ.

ಹೀಗೆ ಸೋಮು ಆಗಿದ್ದು ರಂಗೋಲಿ ಮದುವೆ ಅಂತ ಬಹಳ ವರ್ಷಗಳು ಅವರ ನೆಂಟರಿಷ್ಟರೆಲ್ಲಾ ಹೇಳಿಕೊಂಡು ನಗುತ್ತಿದ್ದರು. ಅವರೆಲ್ಲಾ ಏನಾದರೂ ಅಂದುಕೊಳ್ಳಲಿ ನನಗೆ ಒಳ್ಳೆ ರಂಗೋಲಿ ಹಾಕೋ ಮುತ್ತಿನಂಥಾ ಹೆಂಡತಿ ಸಿಕ್ಕಳು ಅಂತ ಸೋಮು ಖಷಿಯಾಗಿದ್ದ. ಆ ಖುಷಿಯನ್ನು ಸೋಮು ಸೋಮಿ ಇಬ್ಬರೂ ಇಷ್ಟು ವರ್ಷಗಳಾದರೂ ಹಾಗೇ ಕಾಪಾಡಿಕೊಂಡು ಬಂದಿದ್ದಾರೆ. ■

# ಫೆಬ್ರವರಿಯೆಂಬ ಸ್ಪೆಷಲ್ ಮಾಸ

ರಾಮನಾಥ್

"ಫೆಬ್ರವರಿ ಏಕೆ ಅತಿ ಪ್ರಶಸ್ತ ಮಾಸ?" ಎಂದರು ಅಪರಂಜಿ ಶಿವು. ಅವರು ಯಾವುದೇ ಪ್ರಶ್ನೆಯನ್ನು ಮುಂದಿರಿಸಿದರೂ ಅದಕ್ಕೆ ಉತ್ತರ ನೀಡದಿದ್ದರೆ ನನ್ನ ತಲೆಯು ಸಾವಿರ ಹೋಳಾಗುವುದೆಂದು ಚಂದಮಾಮದ ಬೇತಾಳವು ಹೇಳಿದೆ. ಪೀಸ್‌ಫುಲ್ ಎಕ್ಸಿಸ್ಟೆನ್ಸ್‌ನಿಂದ 'ಪೀಸ್ ಪೀಸ್' ಎಕ್ಸ್‌ಟಿಂಕ್ಷನ್ ಕಡೆಗೆ ಸಾಗುವುದು ನನಗೆ ರುಚಿಸದು. ತತ್ಕಾರಣ ಆ ಮಾಸದ ಮಾಸದ ವಿಷಯಗಳ ಬಗ್ಗೆ ಅರಿಯಲು ಹಲವರನ್ನು ಸಂಪರ್ಕಿಸಲು ನಿರ್ಧರಿಸಿದೆ.

"ವಾಟ್ ಎ ಮಂತೋ ಈ ಮಂತೂ! ವೈದ್ಯರಿಗಂತೂ ಜಾಕ್‌ಪಾಟ್ ಮಂತ್ ಇದು" ಎಂದರು ಮೆಡಿಕಲ್ ಸ್ಟೋರ್ಸ್ ಮಾದೇವು.

"ಹೇಗೆ?"

**ಗಾಳಿ ಬೀಸಿತೋ ಥಂಡಿ ತಂದಿತೋ**

**ಮೂಗೆಲ್ಲ ಕಟ್ಟಿಕೊಂಡು ಸೊರ್ರಬರ್ರ ಅಂತಾ ಐತೆ**

**ಗಾಳಿ ಬೀಸಿತೋ ಥಂಡಿ ತಂದಿತೋ ।**

**ತಲೆಮ್ಯಾಗಿನ ಟೋಪಿ ಕೂಡ ತಣ್ಣಾಗೈತೆ**

**ಮೈಮ್ಯಾಗಿನ ಕಂಬ್ಳಿ ಕೂಡ ತೇವ್‌ವಾಗೈತೆ**

**ಥಂಡಿ ಸೇರುತಿದೆ ಗಡಗಡ ನಡುಗಿಸಿದೆ**

**ಆಕ್ಷೀಂತ ಸೀನಿ ಸೀನಿ ಮೂಗು ಮೂತಿ ಕೆಂಪಾಗೈತೆ ॥**

ಅಂತ ಮಂದಿ ವೈದ್ಯರನ್ನ ಹುಡುಕಿಕೊಂಡು ಹೋಗೋ ಕಾಲ ಇದು. ಫೆಬ್ರವರಿಯಲ್ಲಿ ಮಾಘ ಮುಗಿದು ಫಾಲ್ಗುಣ ಬರೋದು ಒಂಥರಾ ಸಿಂಬಾಲಿಕ್ಕಾಗಿದೆ" ಎಂದ ಮಾದೇವು.

"ಯಾವುದರ ಸಿಂಬಲ್ಲು ?"

"ಫಾಲ್ಗುಣ ಅನ್ನೋದನ್ನ ಈಗಿನ ವಾಹಿನಿಗಳು ಪಾಲ್ಗುಣ ಅಂತಾನೇ ಒದರೋದು. ರೋಗಿಯನ್ನ ಗುಣಪಡಿಸ್ತೀವೀಂತ ಪಡೆಯೋ ಹಣದಲ್ಲಿ ಡಾಕ್ಟರ್‌ಗಷ್ಟು, ಲ್ಯಾಬ್‌ಗಷ್ಟು, ಮೆಡಿಕಲ್ ಸ್ಟೋರ್‌ಗಷ್ಟು ಅಂತ ಪಾಲು ಕೊಡ್ಸೋ ಮಾಸಾನೇ ಪಾಲ್-ಗುಣ ಮಾಸ. ಅದು ಶುರುವಾಗೋದೇ ಫೆಬ್ರವರಿಯಲ್ಲಾದ್ದರಿಂದ ಈ ಮಂತು ಸೂಪರ್ ಮಂತು" ಎಂದ ಮಾದೇವು.

"ಫೆಬ್ರವರಿ ಅಂದರೆ ನಿನಗೇನನ್ಸತ್ತೆ?" ಎಂದು ಕಾಲೇಜು ಹುಡುಗನನ್ನು ಕೇಳಿದೆ.

"ಡಿಸೆಂಬರ್‌ವರೆಗೆ ದಿಲ್‌ದಾರ್ಕೆ; ಜನವರೀಲಿ ವರಿ ಶುರು; ಫೆಬ್ರವರೀಲಿ 'ಫಿರ್ ಭೀ ವರಿ'. ವರಿ ಮಾಡೋದನ್ನ ಬಿಟ್ಟು ಶ್ರಮ ವಹಿಸಿದರೆ 'ಯೂ ಕ್ಯಾನ್ ಮಾರ್ಚ್ ಅಹೆಡ್' ಅಂತ ಮಾರ್ಚಿಯನ್ನ ತೋರಿಸುತ್ತಾ ಹೇಳೋ ತಿಂಗಳೇ ಫೆಬ್ರವರಿ" ಎಂದನವ.

ಸ್ಟೂಡೆಂಟ್ ಎಂಬ ಪದಕ್ಕೆ ಡೆಂಟ್ ಆಗುವಂತಿದ್ದು, ಪ್ರೇಮಿಗಳ ದಿನದಂದು ಹುಡುಗಿಯರ ಪ್ರೇ (ಸಿಕ್ಕರೆ ಪ್ರಾರ್ಥನೆ, ಸಿಗದಿದ್ದರೆ ಬೇಟೆ) ಮಾಡಲು ಸಿದ್ಧವಾಗಿರುವಂತಿದ್ದ ಮಾಡ್ರನ್ ರೋಮಿಯೋನ ಅಭಿಪ್ರಾಯ ಕೇಳಿದೆ.

"ನನ್ನನ್ನೇನು ಕೇಳುವಿರಿ! ನಿಮ್ಮ ಶತಾವಧಾನಿಗಳು ಹೇಳಿರುವುದನ್ನೇ ಕೇಳಿ" ಎಂದನವ.

"ಏನೆಂದು ಹೇಳಿದ್ದಾರೆ?"

"ಅದು ಯುವಜನತೆಯ ಚಿತ್ತವನ್ನು ಅಪಹರಿಸಿದ ವಿಶಿಷ್ಟ ದಿನ. ಜವ್ವನಿಗರನ್ನು ಮಧುರೋನ್ಮಾದದ ಪ್ರಣಯೋತ್ಸವಕ್ಕೆ ಶ್ರುತಿ ಮಾಡಿದ ದಿನ. ಮಡಿವಂತರು ಮೂಗುಮುರಿಯುವ ದಿನ. ಅಸ್ಮಿತಾಪ್ರಜ್ಞೆಯ ಬಗೆಗೆ ಅಭಿಮಾನವುಳ್ಳ ಭಾರತೀಯತಾ ಯೋಧರು ಧಿಕ್ಕರಿಸುವ ದಿನ" ಎಂದನವ.

"ಕೊನೆಯ ವಾಕ್ಯದ ಅರ್ಥವೇನು?" ಎಂದೆ.

"ಯಾರಿಗ್ಗೊತ್ತು! ಅವರು ಹೇಳಿದ್ಮೇಲೆ ಏನೋ ಗ್ರೇಟ್ ಆದದ್ದೇ ಇರತ್ತೆ. ಪ್ರೀತಿಯನ್ನ ಅರ್ಥ ಮಾಡ್ಕೊಳೋದು, ಗಣೇಶರ ವಾಕ್ಯಗಳನ್ನ ಅರ್ಥ ಮಾಡ್ಕೊಳಕ್ಕೆ ಪ್ರಯತ್ನಿಸೋದು ನಮ್ಮ ಸಿಲಬಸ್ಸಲ್ಲಿಲ್ಲ. ಲವ್ ಇರೋ ಮಂತ್ ಆದ್ದರಿಂದ ಫೆಬ್ರವರಿ ಲವ್ಲೀ ಮಂತ್" ಎಂದು ಉದ್ಗರಿಸಿ ತನ್ನ ಇಷ್ಟಲಿಂಗವಾದ ಡಾರ್ಲಿಂಗಳತ್ತ ಹಾರುಗಾಲು ಹಾಕಿದ.

"ನೀವೇನಂತೀರಿ ಪಾದ್ರಿಗಳೆ?" ಎಂದೆ.

"ರೋಮನ್ನರ ಪಿತೃಪಕ್ಷ, ಸ್ವಚ್ಛ್ ರೋಮ್ ಅಭಿಯಾನ್, ವೇರಿಯಸ್ ಫೆಸ್ಟಿವಲ್ಸ್ ಇರುವ ತಿಂಗಳಿದು. ರೋಮನ್ನರು 9 ದಿನ ತಿಥಿ, ಹದಿನಾಲ್ಕು ದಿನ ಹಬ್ಬ, ತಿಂಗಳು ಪೂರ್ತಿ ಕ್ಲೀನಿಂಗ್ ಮಾಡೋ ತಿಂಗಳಿದು" ಎಂದರವರು.

"ನಮ್ಮಲ್ಲೂ ಅಷ್ಟೆ. ಬ್ಲ್ಯಾಕ್ ಮನಿ, ವೈಟ್ ಮನಿಗಳನ್ನ ವಿಂಗಡಿಸಿಕೊಂಡು ಅಕೌಂಟ್ ಸಬ್ಮಿಟ್ ಮಾಡುವುದರ ಮೂಲಕ 'ಸ್ವಚ್ಛ್ ಅಕೌಂಟ್ ಅಭಿಯಾನ್' ಶುರುವಾಗೋದೇ ಫೆಬ್ರವರಿಯಲ್ಲಿ. ಇಟ್ ಈಸ್ ಎ ಗ್ರೇಟ್ ಮಂತು" ಎಂದನೊಬ್ಬ ವರ್ತಕ.

"ಶುಭಮಾಸಮಿದಂ. ಯಾರೋ ಒಬ್ಬ ಪುರೋಹಿತ ಕದ್ದು ಮದುವೆ ಆಗಕ್ಕೆ ಬಂದವರಿಗೆಲ್ಲ 'ಮಾಂಗಲ್ಯಂ ತಂತುನಾನೇನಾ' ಅಂತ ಹೇಳಿದ ಕಾರಣ ಅವನ ಹೆಸರಲ್ಲಿ ಆಚರಿಸೋ ಹಬ್ಬವಿದು. ಜಗತ್ತಿನ ಮದುವೆ ಮಾಡಿಸೋ ಪುರೋಹಿತರಿಗೆಲ್ಲ ಈ ಮಂತು ಗುಡ್ ಮಂತು" ಎಂದರು ಪುರೋಹಿತ ಪಾಪಣ್ಣಿಗಳು.

"ಒಂದೇ ಒಂದು ಹಬ್ಬವೂ ಇಲ್ಲ ಕಣಯ್ಯ! ಕೆಲವು ಫೆಬ್ರವರಿಗಳಲ್ಲಿ ಶಿವರಾತ್ರಿಯೊಂದು ಬರತ್ತೆ. ಅವತ್ತು ಮಧ್ಯರಾತ್ರಿಯೇ ಫಲಾಹಾರವಾದ್ದರಿಂದ ಹೆಚ್ಚಿನ ಖರ್ಚಿನ ಬಾಬ್ತಿಲ್ಲ. ಬೇಡರ ಕಣ್ಣಪ್ಪ ಶಿವಪೂಜೇನ ರಾತ್ರೀನೇ ಮಾಡಿ ಒಳ್ಳೇದ್ಮಾಡ್ದ. ಮಾಮೂಲಿ ಹಬ್ಬಗಳ ತರಹ ಬೆಳಗ್ಗೆ ಇದ್ದಿದ್ರೆ ಖರ್ಚೇರ್ಬಿಡ್ತಿತ್ತು. ಒಳ್ಳೆ ಮಾಸ ಒಳ್ಳೆ ಮಾಸ ಒಳ್ಳೆ ಮಾಸವು; ದುಡ್ಡು ಉಳಿಸಲಿದುವೆ ನನಗೆ ಸೂಕ್ತ ಮಾಸವು" ಎಂದ ಗೃಹಸ್ಥ.

**"ಇದೇ ಸರಿ ಮಾಸ; ಗುಡ್ ಬಿಸ್ನೆಸ್ಸು ಮಾಸ**

**ಗ್ರೂಪ್ ಗ್ರೂಪೇ ಸೇರುವಂಥ ಮಾಸ.**

**ಬೋಂಡ ಬಜ್ಜಿ ಕೇಳುವ ಮಾಸ**

**ಮೆಣ್ಸಿನಕಾಯ್ ಸವಿಯುವ ಮಾಸ**

**ವಡೆಯಾಂಬೊಡೆ ಚಿಪ್ಸುಗಳಾ**

**ಪೊಟ್ಣ ಪೊಟ್ಣ ಕಟ್ಟುವ ಮಾಸ**

**ಖಾರದಂಗ್ಡಿ ಇಟ್ಟೋರ್ಗೆಲ್ಲ**

**ಒಳ್ಳೆ ಲಾಭ ಗಳಿಸುವ ಮಾಸ ॥"**

ಎಂದು ಖಾರಾಹಾರಪ್ರಿಯ ರಾಗದಲ್ಲಿ ಆರಂಭಿಸಿ ಕಾಫಿ ರಾಗದಲ್ಲಿ ಮುಗಿಸಿದನು ನಮ್ಮ ಬಡಾವಣೆಯ ಬೋಂಡಾ ಅಂಕಲ್.

"ಇದು ಎಲ್ಲ ತಿಂಗಳುಗಳಿಗಿಂತ ಅತಿ ಕಡಿಮೆ ಖರ್ಚು ಆಗುವ ಮಾಸವಾದ್ದರಿಂದ ನನಗೆ ಇಷ್ಟ" ಎಂದಳು ಮಾಡ್ರನ್ ಮಾನಿನಿ.

"ಹಬ್ಬ ಇಲ್ಲವಾದ್ದರಿಂದ ಅಲ್ಲವೇ?"

"ನಾಟ್ ರಿಯಲಿ. ಎಲ್ಲ ತಿಂಗಳುಗಳಿಗಿಂತ ಎರಡು ದಿನ ಕಡಿಮೆ ಇರುವುದೇ ಕಡಿಮೆ ಖರ್ಚಿಗೆ ಕಾರಣ" ಎಂದಳವಳು.

"ಗುಲಾಬ್ ಕಾ ಬೇಪಾರ್ ಅಚ್ಛಾ; ಇಸ್ಲಿಯೇ ಫೆಬ್ರವರಿ ಅಚ್ಛಾ" ಎಂದ ಹೂವಿನಂಗಡಿಯ ಗುಲಾಬ್ ಚಂದ್.

"ಗಿಫ್ಟು ಗಿಫ್ಟೆನುತಾ ಲವ್ಲೀ ಕಾಸ್ಲೀ ಗಿಫ್ಟ್ ಎನುತಾ

ಲವ್ವು ಮಾಡೋ ಮಂದಿ ಈಗ ಸ್ಪ್ಲರ್ಜಿದರೋ ಮನಿಯಾ

ಗೋಲ್ಡು ಡೈಮಂಡ್ ಟ್ರಿಂಕೆಟ್ ಮೇಲೆ ಸ್ಪ್ಲರ್ಜಿದರೋ ಮನಿಯಾ" ಎಂದು ಖುಷಿಯಿಂದ ಕುಣಿದ್ಹಾಡಿದ ಗಿಫ್ಟ್ ಶಾಪಿನವ.

ಫೆಬ್ರವರಿ ಎಲ್ಲ ಮಾಸಗಳಿಗಿಂತ ಪ್ರಶಸ್ತವೆನಿಸಲು ನನ್ನದೇ ಆದ ಕಾರಣಗಳಿವೆ. ನನ್ನ ದೃಷ್ಟಿಯಲ್ಲಿ ಇದಕ್ಕಿಂತ ಉತ್ತಮವಾದ ನಗೆಮಾಸವಿಲ್ಲ. ಫೆಬ್ರವರಿ ಹದಿನೈದರಂದು ಮಾಸ್ಟರ್ ಹಿರಣ್ಣಯ್ಯನವರು ಜನಿಸಿದರು; ಹದಿನಾರರಂದು ವೆಂಟ್ರಿಲಾಕ್ವಿಸ್ಟ್ ಇಂದುಶ್ರೀ, ಗಾನವಿನೋದಿನಿಯ ಸುಬ್ರಾಮ್ ಜನಿಸಿದರು. ಇಪ್ಪತ್ತೈದು ಪ್ರೊಫೆಸರ್ ಮಿತ್ರರ ಜನ್ಮದಿನ.

ಫೆಬ್ರವರಿ ಅತಿ ಪ್ರಶಸ್ತ ಮಾಸ ಎನ್ನಲು ಇದಕ್ಕಿಂತಲೂ ಕಾರಣಗಳು ಬೇಕೆ?

■

ನಮ್ಮನ್ನು ಇಷ್ಟಪಡುವವರ ಸಹಾಯಗಳನ್ನು ದುರುಪಯೋಗ ಪಡಿಸಿಕೊಳ್ಳಬಾರದು

ನಮ್ಮ ಅವಶ್ಯಕತೆಯಿರುವವರಿಗೆ ನಾವು ಎಂದೂ ಅಲಭ್ಯವಾಗಬಾರದು

ನಮ್ಮನ್ನು ಸದಾ ನಂಬುವವರನ್ನು ಮೋಸ ಮಾಡಬಾರದು

ನಮ್ಮನ್ನು ಸದಾ ನೆನಪಿನಲ್ಲಿಟ್ಟುಕೊಂಡಿರುವವರನ್ನು ಖಂಡಿತಾ ಮರೆಯಬರದು

–ಅಬ್ದುಲ್ ಕಲಾಂ

# ಸ್ಥಳ ಪುರಾಣ

ಕೃಷ್ಣ ಸುಬ್ಬರಾವ್

**ಡಿಸೆಂಬರ್ 25. ಅಪರಂಜಿ ಹಾಸ್ಯೋತ್ಸವ. ಎಚ್ಚೆನ್ ಕಲಾಕ್ಷೇತ್ರದಲ್ಲಿ ನಗೆ ಮಿಂಚುತ್ತಿತ್ತು. ಎಚ್ಚೆನ್ ಇನ್ನಷ್ಟು ನಗೆ ತುಂಬುತ್ತಿದ್ದರು. ಕಲಾಕ್ಷೇತ್ರವೆಂದರೆ ಉಲ್ಲಾಸದ ಕ್ಷೇತ್ರವೆಂದೇ ಹಾಸ್ಯಪ್ರೇಮಿಗಳು ಭಾವಿಸಿದ್ದರು. ಈಗ ಅದು ಬರೇ ನೆನಪು. ಕಲಾಕ್ಷೇತ್ರ ನೆಲಸಮಗೊಳ್ಳುತ್ತಿದ್ದು ಆ ಜಾಗದಲ್ಲಿ 5 ಅಂತಸ್ತಿನ ಇಂಜನೀಯರಿಂಗ್ ಕಾಲೇಜಿನ ಕಟ್ಟಡ ತಲೆ ಎತ್ತಲಿದೆ. ಸಮಾಧಾನದ ಅಂಶವೆಂದರೆ ಹೊಸ ಕಟ್ಟಡದಲ್ಲಿ 800 ಆಸನಗಳ ಕಲಾಕ್ಷೇತ್ರ ಮರುಹುಟ್ಟು ಪಡೆಯಲಿದೆ. ಎಚ್ಚೆನ್‌ರಿಗೂ ಕಲಾಕ್ಷೇತ್ರಕ್ಕೂ ಹಾಸ್ಯೋತ್ಸವಕ್ಕೂ ಇದ್ದ ನಂಟಿನ ಒಂದು ಅವಲೋಕನ ಈ ಲೇಖನದಲ್ಲಿದೆ.**

ಹಾಸ್ಯಬ್ರಹ್ಮ ಟ್ರಸ್ಟ್ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಪ್ರತಿವರ್ಷ ನಡೆಸುತ್ತಿದ್ದ ಜಗದ್ವಿಖ್ಯಾತ ಹಾಸ್ಯೋತ್ಸವ ನಡೆದಿದ್ದು ಜಯನಗರದ ನ್ಯಾಷನಲ್ ಕಾಲೇಜಿನ ಎಚ್.ಎನ್ ಕಲಾಕ್ಷೇತ್ರದಲ್ಲಿ. 1996 ಡಿಸೆಂಬರ್ 25ನೇ ತಾರೀಕಿನಂದು ನಾ. ಕಸ್ತೂರಿ ಶತಮಾನೋತ್ಸವ ನಡೆಸಲು ನರಸಿಂಹಯ್ಯ ನವರನ್ನು ಸಂಪರ್ಕ ಮಾಡಿದಾಗ ನಮ್ಮ ಬೆನ್ನು ತಟ್ಟಿ "ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ" ಎಂದು ಹೊಗಳುತ್ತಾ ರಿಯಾಯಿತಿ ದರದಲ್ಲಿ ಕೊಟ್ಟು ಕಾಲೇಜಿನ ಸಿಬ್ಬಂದಿಯನ್ನು ಯಾವ ಸಹಾಯಕ್ಕಾದರೂ ಬಳಸಿಕೊಳ್ಳಲು ಹೇಳಿದ್ದು ಹಾಸ್ಯೋತ್ಸವದ ಯಶಸ್ಸಿನ ಮೊದಲ ಹೆಜ್ಜೆ. ಸಮಾರಂಭಕ್ಕೆ ಬಂದ ಹಾಸ್ಯ ಪ್ರಿಯರು ತಮ್ಮ ವಾಹನಗಳನ್ನು ಒಂದೆರಡು ಬೀದಿಯಲ್ಲಿ, ಮನೆಗಳ ಮುಂದೆ ನಿಲ್ಲಿಸಿ ಸಂಚಾರಿ ನಿಯಮಕ್ಕೆ ತೊಂದರೆಯಾಗಿ ಅಂತಹ ಅಡಚಣೆಯನ್ನು ಸರಿಪಡಿಸಲು ಆಗಾಗ್ಗೆ ವೇದಿಕೆಯಲ್ಲಿ ಕೇಳಿ ಕೊಳ್ಳುವ ಸಂದರ್ಭ ಬಂದಿದ್ದು, ಅದನ್ನು ಸರಿಪಡಿಸಲು ಪಕ್ಕದಲ್ಲಿಇದ್ದ ದೊಡ್ಡ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಲು ಅವಕಾಶ ಕಲ್ಪಿಸಿ ಅದಕ್ಕೆ ಪ್ರತ್ಯೇಕ ವಾದ ಯಾವ ಶುಲ್ಕ ವಿಧಿಸದೆ ಇದ್ದದ್ದು ಅವಿಸ್ಮರಣೀಯ. ಒಬ್ಬ ನೈಜ ಗಾಂಧಿವಾದಿಯ ಹಾರೈಕೆ ಮಾತ್ರವಲ್ಲದೆ ತಾವೇ ಸಕ್ರಿಯವಾಗಿ ಪಾಲ್ಗೊಳ್ಳಲು ಮುಂದಾಗಿದ್ದು ಅವಿಸ್ಮರಣೀಯ. ನಗಿಸುವುದಕ್ಕೆ ಕೆಲವು ಸಿದ್ಧಾಂತಗಳಿರುವುದು ನಿಜ. ಅದರ ಪ್ರಕಾರ ನಗಿಸುವವರು ತಾವೇ ನಗಬಾರದೆಂಬುದು ಎಲ್ಲರಿಗೂ ಅನ್ವಯವಾಗುವುದು ಎಂದು ನಾವೆಲ್ಲಾ ಒಪ್ಪುವುದು ಸಹಜ. ಆದರೆ ಕೆಲವು ಅಪವಾದಗಳಿರುತ್ತವೆ. ಮಾತಿನ ಮಧ್ಯೆ ನಿಲ್ಲಿಸಬಾರದೆಂಬ ನಿಯಮವೂ ಇದೆ ತಾವು ಮಾಡುವ ಕೆಲಸವನ್ನು ತಾವೇ ಎಂಜಾಯ್ ಮಾಡುವ ವಿಶಿಷ್ಟ ವ್ಯಕ್ತಿತ್ವ ನರಸಿಂಹಯ್ಯ ನವರುದು.

ಬಹಳ ಕಷ್ಟಪಟ್ಟು ಜಾಗ ಪಡೆದು ಊಟಕ್ಕೆ ಬಿಟ್ಟು ಹೋಗುವುದು ಒಂದು ಸಾಹಸವೇ ಎಂದು ಒಪ್ಪಿಕೊಂಡರೂ ಹಾಸ್ಟೆಲ್ ವಿದ್ಯಾರ್ಥಿಗಳ ಜೊತೆ ಊಟ ಮಾಡಲು ಹೊರಡುವಾಗ "ನಾನು ಊಟ ಮಾಡಿ ಬಂದಾಗ ನನ್ನ ಸೀಟು ನನಗೆ ಬೇಕು" ಅದಕ್ಕೋಸ್ಕರ ನನ್ನ ಈ ಗಾಂಧಿ ಟೋಪಿಯನ್ನು ಹಾಕಿ ಹೋಗಲೇ ಎಂದು ಕಾರ್ಯಕರ್ತರನ್ನು ಕೇಳಿದಾಗ ಸಿಬ್ಬಂಧಿಯವರು "ನಿಮ್ಮ ಟೋಪಿಗೆ ನಾವು ಗ್ಯಾರಂಟಿ ಕೊಡಕ್ಕೆ ಶಕ್ತರಲ್ಲ ಎಂದು ಹೇಳಿದಾಗ ನಗುತ್ತಾ ಬೆನ್ನಿಗೆ ಸರಾಗವಾಗಿ ಕೈ ಹಾಕಿ ನಡದೇಬಿಟ್ಟರು.

ಒಬ್ಬ ಹಾಸ್ಯ ಭಾಷಣಕಾರ ತಾನು ಆಡುವ ಮಾತು ಸಭ್ಯ ನಗೆಹನಿಗಳಾಗಿರಬೇಕು, ಯಾರನ್ನು ನೋಯಿಸಬಾರದೆಂಬುದನ್ನು ನಮ್ರವಾಗಿ ತಿಳಿಸುವುದಕ್ಕಾಗಿ ಎಚ್. ಎನ್. ಮಾದರಿಯನ್ನು ನೋಡಬೇಕು. ಅದಕ್ಕೊಂದು ಉದಾಹರಣೆ ಎಂದರೆ ನರಸಿಂಹಯ್ಯನವರು

ಆರಿಸಿಕೊಂಡದ್ದು ಒಂದು ಶವ ಯಾತ್ರೆಯಲ್ಲಿ ನಾಯಿಗೆ ಸಂದ ಮರ್ಯಾದೆ. ಒಂದು ಮೆರವಣಿಗೆ ಅದರಲ್ಲಿ ಮುಂಚೂಣಿಯಲ್ಲಿ ಹೂವಿನ ಹಾರ ಹಾಕಿಸಿಕೊಂಡ ನಾಯಿ, ಅದರ ಹಿಂದೆ ಬಹಳ ಜನರು ಹಿಂಬಾಲಿಸುತ್ತಿದ್ದ ವ್ಯಕ್ತಿಗಳು. ಅದರ ಬಗ್ಗೆ ವಿವರ ಕೇಳಿದಾಗ ಬಂದ ಉತ್ತರ, ಆ ಶವ ಒಬ್ಬ ಮಹಿಳೆಯದು ಹಾಗೂ ಒಬ್ಬ ವ್ಯಕ್ತಿಯ ಅತ್ತೆ, ಆ ಅತ್ತೆಯನ್ನು ಕಚ್ಚಿದ್ದು ಆ ಹಾರ ಹಾಕಿಸಿಕೊಂಡ ನಾಯಿ. ಆ ನಾಯಿಗೆ ಬಹು ಜನರ ಬೇಡಿಕೆಯಿಡುವ ಪ್ರಯತ್ನ ಆ ಸರದಿಯದು.

ಅಮೆರಿಕದಲ್ಲಿ ಸ್ವಲ್ಪ ಕಾಲ ಇದ್ದಾಗ ಅವರ ಊಟದ ಬಗ್ಗೆ ಪ್ರಶ್ನೆಗಳು ಕೇಳಿದಾಗ ಎಚ್.ಎನ್ ರವರು ನಾಲ್ಕು ವರ್ಷ ಕೇವಲ ಉಪ್ಪಿಟ್ಟಿನಲ್ಲೇ, ಅದು ತಾವೇ ಮಾಡಿಕೊಂಡ ಉಪ್ಪಿಟ್ಟಿನಲ್ಲೇ ಜೀವಿಸಲು ಒಂದು ವಿಶ್ವದಾಖಲೆ ಬಗ್ಗೆ ಮಾತು ನಿಲ್ಲಿಸಿ ನಿಲ್ಲಿಸಿ ಹೇಳುತ್ತಿದ್ದದ್ದು ಮರೆಯಲಾಗದ ಚಿತ್ರಣ.

ಹಾಸ್ಯೋತ್ಸವದಲ್ಲಿ ಮಿಂದು ನೆನಪಿನಲ್ಲಿ ಮರಕಳಿಸುವುದು ಸಾಮಾನ್ಯವಾಗಿತ್ತು ವಿಮರ್ಶಕರಿಗೆ. ಹಾಸ್ಯೋತ್ಸವದಲ್ಲಿ ಸ್ವಲ್ಪ ಹೊತ್ತು ಭಾಗಿಯಾಗಿ ಕಣ್ಮರೆಯಾಗುತ್ತಿದ್ದ ವೈ.ಎನ್ .ಕೆ ಬಂದಿದ್ದೇ ತಿಳಿಯುತ್ತಿರಲಿಲ್ಲ. ಹಾಸ್ಯೋತ್ಸವದಲ್ಲಿ ವೀಕ್ಷಕರೇ ಪ್ರಭುಗಳು ಆಗಿರುತ್ತಾರೆ ಎಂದು ಹೇಳುತ್ತಿದ್ದರು. ನಾಟಕದ ಬಗ್ಗೆ ಹೇಳುವಾಗ ಒಂದು ಪಂಗಡ It is Actor's play ಎಂದರೆ, ಮತ್ತೊಂದು ಪಂಗಡ it is Director,'a play ಅನ್ನುತ್ತಿದ್ದರಂತೆ. ಅದಕ್ಕೆ ಮತ್ತೊಬ್ಬರು It is Audience play ಏಕೆಂದರೆ Audience play a very important role to play ಅನ್ನುತ್ತಿದ್ದರಂತೆ. ಹಾಸ್ಯೋತ್ಸವದ ಪ್ರೇಕ್ಷಕರಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ.

ಸ್ಥಳ ಮಹಿಮೆಯ ಬಗ್ಗೆ ಹೇಳುವಾಗ ಇತ್ತೀಚೆಗೆ ಬಂದ ಸುದ್ದಿ ಪ್ರಕಾರ ಈಗಿರುವ ಎಚ್. ಎನ್ ಕಲಾಕ್ಷೇತ್ರವನ್ನು ಸಂಪೂರ್ಣವಾಗಿ ಕೆಡವಿ, ಅಲ್ಲಿ ಬಹುಮಹಡಿಗಳ ಬೃಹತ್ ಕಟ್ಟಡ ಮೇಲೆ ಬರುವುದಂತೆ. ಅದರಲ್ಲಿ ಒಂದು ಮಹಡಿ ಕಲಾಕ್ಷೇತ್ರಕ್ಕೆ ಮೀಸಲು ಇರುತ್ತದೆ ಎಂಬ ಆಶ್ವಾಸನೆ ಇದೆಯಂತೆ. ಹಾಸ್ಯಚರಿತ್ರೆಯಲ್ಲಿ ಒಂದು ಮಾದರಿಯಾಗಿ ಸಾಹಿತ್ಯಾಧಾರಿತ ಸದಭಿರುಚಿಯ ಹಾಸ್ಯ ಇರಲಿ ಎಂಬುದೆ ನಮ್ಮೆಲ್ಲರ ಆಶಯ.

■

ಗುಂಡ : ಎರಡು ಲಾಟರಿ ಟಿಕೆಟ್ ತಗೊಂಡಿದ್ದ. ಅದರಲ್ಲಿ ಒಂದು ಟಿಕೇಟಿಗೆ ಅವನಿಗೆ ಲಾಟರಿಯಲ್ಲಿ ಒಂದು ಕೋಟಿ ರೂಪಾಯಿ ಬಹುಮಾನ ಬಂದಿತ್ತು. ಆದರೂ ಅವನು ಸಂತೋಷವಾಗಿರಲಿಲ್ಲ.

ಸ್ವಾಮಿ : ಯಾಕೋ ಗುಂಡ ಲಾಟರಿಯಲ್ಲಿ ಒಂದು ಕೋಟಿ ಬಂದರೂ ಮಂಕಾಗಿದೀಯ.

ಗುಂಡ : ನಾನು ಬಹುಮಾನ ಬರುವ ಒಂದು ಟಿಕೆಟ್ ತಗೊಂಡಿದ್ರೆ ಸಾಕಾಗಿತ್ತು. ಇನ್ನೊಂದು ಟಿಕೆಟ್ ತಗೊಂಡು ದುಡ್ಡು ವೇಸ್ಟ್ ಮಾಡಿದೆ ಅನಿಸ್ತಿದೆ.

# ಪುಳಿಯೋಗರೆ ಪುರಾಣ..

✍ವಿ.ವಿಜಯೇಂದ್ರ ರಾವ್

ರೆಫ್ರಿಜಿರೇಟರ್ ಬರುವುದಕ್ಕೆ ಮುಂಚೆ, ಅಂದರೆ ಶತ ಶತಮಾನಕ್ಕಿಂತಲೂ ಹಳೆಯದಾದ ಏಕೈಕ ವ್ಯಂಜನವೆಂದರೆ ಅದು ನಮ್ಮ ಪುಳಿಯೋಗರೆ ಮಾತ್ರ...!

ಒಂದು ವಾರ ಹಾಗೆ ಇಟ್ಟರೂ ಸ್ವಲ್ಪವೂ ಕೆಡುವುದಿಲ್ಲ. ಆಗಿನ ಕಾಲದ ನಮ್ಮ ತಾತ, ಅಜ್ಜಿಯರು ಪ್ರವಾಸಕ್ಕೆ ಹೋಗುವಾಗ, ನಂಬಿ ತೆಗೆದುಕೊಂಡು ಹೋಗುತ್ತಿದ್ದ ಒಂದೇ ಒಂದು ಅಡಿಗೆಯೆಂದರೆ ಅದು ಪುಳಿಯೋಗರೆ ಮಾತ್ರ ಅನ್ನೋದು ನೂರಕ್ಕೆ ನೂರು ಸತ್ಯ..!

ಯಾವಾಗ ನೀವು ಟಾಪ್ ಟೆನ್ ರುಚಿಕರ ಅಡಿಗೆಯ ಸರ್ವೇ ಮಾಡಿದರೂ ಅಗ್ರಸ್ಥಾನವನ್ನು ಪಡೆಯುವುದು ಪುಳಿಯೋಗರೆಯೇ ಅನ್ನುವುದು ನಿರ್ವಿವಾದ...!

ಉಪ್ಪು, ಸಿಹಿ, ಹುಳಿ, ಖಾರ, ಒಗರು, ಕಹಿ  ಎಂಬ ಆರು ರುಚಿಗಳ ಸಂಗಮಕ್ಕೆ ಮತ್ತೊಂದು ಹೆಸರೇ....ಪುಳಿಯೋಗರೆ. ಇದರ ಬಣ್ಣ, ರುಚಿಗೆ ಮಾರುಹೋಗದವರೇ ಯಾರೂ ಇಲ್ಲ. ಇದನ್ನು ಮಾಡುವ ವಿಧಾನವು ಸಹ ಅಷ್ಟೇ ಸಂಭ್ರಮದಿಂದ, ಗಮಗಮದಿಂದ ಇರುತ್ತದೆ.

ಪುಳಿಯೋಗರೆಗೆ ಅದರ ಬಣ್ಣ, ವಾಸನೆಯೇ ಎರಡು ಕಣ್ಣುಗಳು.

ಪುಳಿಯೋಗರೆಗೆ ಬಹು ಮುಖ್ಯವಾದ ಅಂಶವೇ ಹದವಾಗಿ ಬೇಯಿಸಿರುವ ಅನ್ನ.ಹೊಸದಾಗಿ ಮದುವೆಯಾಗಿರುವ ಜೋಡಿಯಂತೆ ಅನ್ನದಗಳು ಒಂದಕ್ಕೊಂದು ಅಂಟಿಕೊಂಡಿರದೆ, ಮದುವೆಯಾಗಿ ಹತ್ತು ಹದಿನೈದು ವರ್ಷ ವಾಗಿರುವ ದಂಪತಿಗಳಂತೆ, ಅಂಟಿಯೂ ಅಂಟದಂತೆ ಇರುವ ಅನ್ನ ಬಲು ಮುಖ್ಯ. ಅದನ್ನು ಬಸಿದು, ಒಂದು ದೊಡ್ಡ ಪರಾತದಲ್ಲಿ ಹಾಕಿ ಆರಲು ಬಿಡಬೇಕು.

ನಂತರ ಮುಖ್ಯವಾದ ಸಾಧನವೇ ಎಣ್ಣೆ. ನೀವು ಎಷ್ಟೇ ಅಂಬಾನಿ ವಂಶಸ್ಥರಾಗಿದ್ದರೂ ಪರವಾಗಿಲ್ಲ, ಎಣ್ಣೆಯ ಬದಲಿಗೆ ತುಪ್ಪವನ್ನು ಹಾಕಬಾರದು. ಪುಳಿಯೋಗರೆಯು ರಾಮಚಂದ್ರ ಮೂರ್ತಿಯಂತೆ ಏಕಪತ್ನಿ ವ್ರತಸ್ಥನಂತೆ ಸದಾ ಬಯಸುವುದು ನಲ್ಲೆಣ್ಣೆಯನ್ನು ಮಾತ್ರ...!

ನಂತರ....ಮುಖ್ಯವಾದ ಪರಿಕರವು ಹುಣಿಸೇಹಣ್ಣು. ಮಾರುಕಟ್ಟೆಗೆ ಹೊಸದಾಗಿ ಬಂದಿರುವ ಹುಣಿಸೇಹಣ್ಣಿಗೆ ಬದಲಿಗೆ, ಹಳೆಯ ಮಾಗಿರುವ ಹುಣಿಸೇಹಣ್ಣನ್ನೇ ಉಪಯೋಗಿಸಬೇಕು . ಮತ್ತೆ, ಒಣಮೆಣಸಿನಕಾಯಿ, ಅದು ಹಸಿಯಾಗಿರದೆ, ಮುಟ್ಟಿದರೆ ಒಡೆಯುವ ಹಾಗಿರುವ ಮೆಣಸಿನಕಾಯಿಯನ್ನು ಉಪಯೋಗಿಸಬೇಕು, ಜೊತೆಗೆ ಒಗ್ಗರಣೆಗೆ ಬೇಕಾದ ಬೇಳೆಗಳು, ಸಾಸಿವೆ, ಇಂಗು, ಜೀರಿಗೆ, ಕಡಲೆಕಾಯಿ ಬೀಜ, ಬೆಲ್ಲ ಎಲ್ಲವನ್ನೂ ಹತ್ತಿರ ಇಟ್ಟುಕೊಂಡು ಇರಬೇಕು. ಪುಳಿಯೋಗರೆಗಯ ಆತ್ಮೀಯ ಮಿತ್ರನೆಂದರೆ ಅದು ಕಡಲೆಕಾಯಿ ಬೀಜಾನೆ..! ಇದು ಬಾದಾಮಿಗಿಂತಲೂ ಹೆಚ್ಚು ಪೌಷ್ಟಿಕಾಂಶ ಹೊಂದಿರುವುದು ಎಂದರೂ ತಪ್ಪೇನಿಲ್ಲ. ಜಾಸ್ತಿ ಉರಿಯಿಲ್ಲದ ಉಷ್ಣಾಂಶದಲ್ಲಿ ಎಣ್ಣೆಯನ್ನು ಕಾಯಿಸಿ, ಅದಕ್ಕೆ ಒಗ್ಗರಣೆಯ ಪರಿಕರವನ್ನು ಮೆಲ್ಲಗೆ ಹಾಕಿ, ನಂತರ ಕಿವಿಚಿದ ಹುಣಿಸೆ ಹಣ್ಣಿನ ರಸವನ್ನು, ಬೆಲ್ಲವನ್ನು ಹಾಕಿ, ಅದನ್ನು ಸೀದು ಹೋಗದಂತೆ ನೋಡಿಕೊಂಡು, ಗೊಟಕಾಯಿಸುತ್ತಾ ಅದು ಗಟ್ಟಿಯಾದ ಮೇಲೆ ಅದನ್ನು ಇಳಿಸಿ, ಅನ್ನದ ಮೇಲೆ ಸುರಿದು, ಹದವಾಗಿ ಮುದ್ದೆಯಾಗದಂತೆ ಕಲಿಸಬೇಕು. ಇದರ ಪರಿಮಳಕ್ಕೆ ಎಲ್ಲರೂ

ಓಡಿಬಂದರೂ, ಅವರಿಗೆ ಒಂದು ಹತ್ತು ಹದಿನೈದು ನಿಮಿಷದವರೆಗೆ ಕಾಯಿರಿ ಎಂದು ಹೇಳಿ, ಅದರ ಜೊತೆಗೆ ಅವರವರ ಇಷ್ಟದಂತೆ ಸಾಂಬಾರ್ ಅಥವಾ ತೆಂಗಿನಕಾಯಿ ಚಟ್ನಿಯ ಜೊತೆಗೆ ಅವರಿಗೆ ಕೊಟ್ಟರೆ.....ಅವರು ತಿಂದು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಎಂದು ಹೇಳುವುದಂತೂ ಗ್ಯಾರಂಟಿ......!

ಆದರೂ.... ನಾವು ಮನೆಗಳಲ್ಲಿ ಎಷ್ಟೇ ಮುತುವರ್ಜಿಯಿಂದ ಪುಳಿಯೋಗರೆ ಮಾಡಿದರೂ, ಅದು ನಮ್ಮ ಶ್ರೀನಿವಾಸ ದೇವಸ್ಥಾನದ ಪ್ರಸಾದವಾದ ಪುಳಿಯೋಗರೆ ತರಾ ಇರುವುದಿಲ್ಲ ಎನ್ನುವುದೇ ನಮ್ಮ ಹೆಂಗಸರ ವ್ಯಥೆ. ಆದರೆ, ಅವರ ಸಮಾಧಾನ ಏನೆಂದರೆ...ಪುಳಿಯೋಗರೆಗೆ ತವರುಮನೆಯೇ ಶ್ರೀನಿವಾಸ ದೇವಸ್ಥಾನ. ಆದ್ದರಿಂದ ಆಗಾಗ್ಗೆ ತವರು ಮನೆಗೆ ಹೋಗಿ ತಾಯಿಯ ಆತಿಥ್ಯ ಪಡೆದು ಧನ್ಯರಾಗುತ್ತಾರೆ...!

ಆ ಕಾಲದ ಮಾಯಾ ಬಜಾರ್ ಸಿನಿಮಾದ ಅತಿ ಜನಪ್ರಿಯ ಹಾಡಾದ.........." ವಿವಾಹ ಭೋಜನವಿದು, ವಿಚಿತ್ರ ಭಕ್ಷ್ಯಗಳಿವು.." ದಲ್ಲಿ ಸಹ ಪುಳಿಯೋಗರೆಯ ಉಲ್ಲೇಖವಿದ್ದು, ರುಚಿಯಾದ, ಬಿಸಿಯಾದ ಪುಳಿಯೋಗರೆ ಸಿಕ್ಕರೆ ಎಲ್ಲರೂ ಸಹ ಘಟೋತ್ಕಜರಾಗುವುದಂತೂ ದಿಟ...!

ಇಲ್ಲಿಗೆ ಪುಳಿಯೋಗರೆ ಪುರಾಣವು ಸಂಪೂರ್ಣ...! ಗೋವಿಂದಾನು ಗೋವಿಂದ ಗೋವಿಂದ... ಸರ್ವಂ ಕೃಷ್ಣಾರ್ಪಣಮಸ್ತು....!

■

## ಉಡುಗೊರೆ

ಅವರಿಬ್ಬರ ಹುಟ್ಟಿದ ಹಬ್ಬವೂ ಒಂದೇ ದಿನ – ಫೆಬ್ರವರಿ 15 ▯ ಆದರೆ ವರ್ಷ ಬೇರೆ ಇಷ್ಟು ವರ್ಷ ಒಬ್ಬರಿಗೊಬ್ಬರು ಉಡುಗೊರೆ ಕೊಟ್ಟುಕೊಂಡೇ ಬಂದಿದಾರೆ.

ಅವಳು ನಂದಿನಿ ಅವನು ಪರಮೇಶ –25 ವರ್ಷಗಳ ಸಾರ್ಥಕ ದಾಂಪತ್ಯ ನಂದಿನಿ ಪರಮೇಶನ ಹಿಂದೆ ಏಳು ಹೆಜ್ಜೆ ಇಡೋ ಮೊದಲು ಪರಮೇಶ ನಂದಿನಿಯ ಹಿಂದೆ ಏಳು ನೂರೋ ಏಳು ಸಾವಿರವೋ ಹೆಜ್ಜೆ ಇಟ್ಟಿದ್ದ.–ಅವಳ ಪ್ರೀತಿ ಗಿಟ್ಟಿಸಿಕೊಳ್ಳಲು.

ರೀ ಈ ವರ್ಷದ ಹುಟ್ಟಿದಬ್ಬದ ಉಡುಗೊರೆ ಏನು ಅಂತ ಕೇಳಿದಳು ನಾಳೆಯವರೆಗೂ ಗುಟ್ಟು ಅಂದ ಮರುದಿನ ಪರಮೇಶ ನಂದಿನಿಯನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಒಂದು ಕಟ್ಟಡದ ಮುಂದೆ ನಿಲ್ಲಿಸಿದ. ಮುಂದೆ ಅವರು ಹೆಜ್ಜೆ ಇಟ್ಟದ್ದು ಮೂರು ಬೆಡ್ ರೂಂಗಳ ಫ್ಲಾಟ್ ಒಳಗೆ ನಂದಿನಿ ಪ್ಲಾಟನ್ನು ಕಣ್ಣು ತುಂಬಿಕೊಂಡಳು. ಸಖತ್ತಾಗಿದೆ ಅಂತ ಕುಣಿದಾಡಿದಳು.

ಇದುವರೆಗೂ ನಾನು ತಂದುಕೊಟ್ಟ ಯಾವ ಉಡುಗೊರೆಯನ್ನೂ ನೀನು ಹೀಯಾಳಿಸಿಲ್ಲ. ಹಂಗಿಸಿಲ್ಲ, ತಿರಸ್ಕರಿಸಿಲ್ಲ ಹೌದು ನೀವು ಅಂಥಾದ್ದೇನನ್ನೂ ತಂದುಕೊಟ್ಟೇ ಇಲ್ವಲ್ಲ ಅಂದು ನಕ್ಕು ಅವನ ಭುಜ ಹಿಡಿದು ಇರೋದು ನಾವಿಬ್ಬರು– ಮಕ್ಕಳು ದೂರದ ಊರಿನಲ್ಲಿ ಹೀಗಿರುವಾಗ ಮೂರು ಕೋಣೆ ಪ್ಲಾಟ್ ಯಾಕೆ ನನಗೊಂದು ನಿನಗೊಂದು ಮಕ್ಕಳು ಬಂದಾಗ ಅವರಿಗೊಂದು ನಾವಿಬ್ಬರೇ ಇದ್ದಾಗ ಒಂದರಲ್ಲಿ ನಾವಿಬ್ಬರೂ ಜೊತೆಜೊತೆಯಾಗಿ–ಒಂದು ವೇಳೆ ನಾವಿಬ್ಬರೂ ಜಗಳವಾಡಿದರೆ ಈ ಕೋಣೆ ಇಬ್ಬರಿಗೂ ಬೇಡ ಇರುವ ಇನ್ನೆರಡು ಕೋಣೆಗಳಲ್ಲಿ ಒಂದರಲ್ಲಿ ನೀನು ಇನ್ನೊಂದರಲ್ಲಿ ನಾನು....